# ಕಮಲ ಪಥ

RNI No.:KARKAN/2023/84034 | ಸಂಪುಟ : 01 | ಸಂಚಿಕೆ : 06 | ಸೆಪ್ಟೆಂಬರ್ 2023 | ಬೆಂಗಳೂರು | ₹ 10/-

## ರೈತ ವಿರೋಧಿ ಕಾಂಗ್ರೆಸ್ ಆಡಳಿತ

## ಬಿಜೆಪಿ ಪ್ರತಿಭಟನೆ





ಮಾಜಿ ಪ್ರಧಾನಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರ
ಪುಣ್ಯ ತಿಥಿಯಂದು ಪ್ರಧಾನಿ ಶ್ರೀ ಮೋದಿಯವರಿಂದ ಪುಷ್ಪ ನಮನ




ಇಂಡೋನೇಷಿಯಾದ ಜಕಾರ್ತಾದಲ್ಲಿ ಆಯೋಜಿಸಿದ್ದ
ಆಸಿಯಾನ್ ಭಾರತಶೃಂಗ ಸಭೆಯಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ



ಪ್ರಧಾನಿ ಶ್ರೀ ನರೇಂದ್ರ ಮೋದಿ ದೆಹಲಿಯಲ್ಲಿ ಮಕ್ಕಳೊಂದಿಗೆ
ರಕ್ಷಾ ಬಂಧನ ಸಂಭ್ರಮಾಚರಣೆ




ಪ್ರಧಾನಿ ಶ್ರೀ ಮೋದಿ ಅವರಿಂದ ವರ್ಚ್ಯುವಲ್ ಮೂಲಕ ರಾಷ್ಟ್ರೀಯ
ಉದ್ಯೋಗ ಮೇಳದಡಿಯಲ್ಲಿ 51,000ಕ್ಕೂ ಹೆಚ್ಚು ನೇಮಕಾತಿ ಪತ್ರ ವಿತರಣೆ



ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕರೊಂದಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿ



ರಾಜ್ಯ ಬಿಜೆಪಿ ವತಿಯಿಂದ ಕಾಡು ಮಲ್ಲೇಶ್ವರ ದೇವಾಲಯದಲ್ಲಿ
ಹಮ್ಮಿಕೊಂಡಿದ್ದ 'ನನ್ನ ಮಣ್ಣು – ನನ್ನ ದೇಶ' ಅಭಿಯಾನಕ್ಕೆ ಚಾಲನೆ



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ
'ಶಂಖನಾದ' ಅಭಿಯಾನದ ರಾಜ್ಯ ಮಟ್ಟದ ಸಭೆ

**ಸಂಪಾದಕೀಯ**

# ಸಾಮರ್ಥ್ಯ ಮತ್ತು ಸಾರಥ್ಯದ ಅನಾವರಣ

ಇಡೀ ಜಗತ್ತೇ ಭಾರತದತ್ತ ತಿರುಗಿ ನೋಡುವಂತಹ ಯಶಸ್ಸು. ಪ್ರತೀ ಭಾರತೀಯನೂ ಹೆಮ್ಮೆಯಿಂದ ಎದೆಯುಬ್ಬಿಸಿ ಹೇಳಿಕೊಳ್ಳಬಹುದಾದಂತಹ ಸಮಾವೇಶ. ಪ್ರಸಕ್ತ ದಿನಗಳಲ್ಲಿ ಭಾರತ ಯಶಸ್ಸಿನ ಏಣಿಯನ್ನು ಏರುವ ಪ್ರಕ್ರಿಯೆಗೆ ವೇಗ ಸಿಕ್ಕಿದೆ. ಚಂದ್ರಯಾನ 3ರ ಯಶಸ್ವಿ ಉಡಾವಣೆ ಮತ್ತು ಜಿ20 ಶೃಂಗ ಸಭೆಯ ಯೋಜನೆ ವಿಶ್ವಮಟ್ಟದಲ್ಲಿ ಭಾರತದ ಸಾಮರ್ಥ್ಯ ಮತ್ತು ಸಾರಥ್ಯದ ಅನಾವರಣಕ್ಕೆ ಸಾಕ್ಷಿಯಾಯಿತು.

ನಿರೀಕ್ಷೆಯಂತೆ ಜಿ20 ಶೃಂಗ ಸಭೆ  ಅಭೂತಪೂರ್ವ ಯಶ ಕಂಡಿದೆ. ಸಭೆಯೊಂದನ್ನು ಆಯೋಜಿಸುವುದು ಒಂದು ಸರಕಾರಕ್ಕೆ ಅಥವಾ ಸಂಘಟನೆಗೆ ಕಷ್ಟವೇನಲ್ಲ. ಆದರೆ ಆ ಸಭೆಯಲ್ಲಿ ಅಳವಡಿಸಿಕೊಳ್ಳಬೇಕಾದ ಸಂಗತಿಗಳು, ವಿಭಿನ್ನವಾಗಿದ್ದರೆ, ವಿಶಿಷ್ಟವಾಗಿದ್ದರೆ, ಅದನ್ನೇ ಅಭೂತಪೂರ್ವ ಯಶಸ್ಸು ಎನ್ನುತ್ತಾರೆ. ಜಿ20 ಸಭೆಯ ನೇತೃತ್ವ ವಹಿಸಿದ  ಪ್ರಧಾನಿ ಶ್ರೀ ನರೇಂದ್ರಮೋದಿಯವರು ಜಿ20 ಶೃಂಗಸಭೆಗೊಂದು ಹೊಸ ದೃಷ್ಟಿಕೋನವನ್ನು ನೀಡಿದರು. ಉಕ್ರೇನ್ ಮತ್ತು  ರಷ್ಯಾ ನಡುವಿನ ಯುದ್ಧದಂತಹ ಸೂಕ್ಷ್ಮ ವಿಷಯವನ್ನು ನಿಭಾಯಿಸಿದ ರೀತಿ ಹಾಗೂ ಆಫ್ರಿಕಾ ರಾಷ್ಟ್ರಗಳ ಒಕ್ಕೂಟವನ್ನು ಜಿ20 ರಾಷ್ಟ್ರಗಳ ಸಮೂಹಕ್ಕೆ ಸೇರಿಸುವಲ್ಲಿ ಇನ್ನಿತರ ರಾಷ್ಟ್ರಗಳನ್ನು ಒಗ್ಗೂಡಿಸಿದ ರೀತಿ ಶ್ರೀ ಮೋದಿಯವರ ಕಾರ್ಯಕ್ಷಮತೆಗೆ ಹಿಡಿದ ಕೈಗನ್ನಡಿ. ಈ ನಡೆಯೇ ಪ್ರಧಾನಿ ಶ್ರೀ ಮೋದಿಯವರ ವಿಶ್ವನಾಯಕನ ಸ್ಥಾನವನ್ನು ಸ್ಥಿರೀಕರಿಸಿತು.  ಪ್ರಧಾನಿ ಶ್ರೀ ಮೋದಿಯವರ ಯಶಸ್ಸಿಗೆ ಇಡೀ ಜಗತ್ತೇ ತಲೆ ಬಾಗಿ ವಂದಿಸುತ್ತಿದೆ. ಆದರೆ ದೇಶದೊಳಗಿನ ಕುತ್ಸಿತ ಮನಸ್ಸುಗಳಿಗೆ ಈ ಯಶಸ್ಸನ್ನು ಜೀರ್ಣಿಸಿಕೊಳ್ಳಲು ಇನ್ನೂ ಆಗಿಲ್ಲದಿರುವುದು ವಿರೋಧಪಕ್ಷಗಳ ಮನಃಸ್ಥಿತಿಯ ದ್ಯೋತಕವೆಂದೇ ಹೇಳಬಹುದು.

ಚಂದ್ರಯಾನ 3 ರ ಯಶಸ್ಸಿನ ಕಿರೀಟವನ್ನು ಭಾರತದ ಮುಡಿಗೆ ಮುಡಿಸಿದ ಇಸ್ರೋ ವಿಜ್ಞಾನಿಗಳು ಸರ್ವ ರೀತಿಯಲ್ಲಿಯೂ ಅಭಿನಂದನೆಗೆ ಅರ್ಹರು. ಈ ಯಶಸ್ಸು ಬಾಹ್ಯಾಕಾಶ ವಿಜ್ಞಾನದಲ್ಲಿ ಭಾರತದ ಸಾಗಿರುವ ಸಾಧನೆಯ ಹಾದಿಯ ಪ್ರತೀಕ.  ಈ ಸಾಧನೆಯ ಹಿಂದೆ ಇಸ್ರೋ ವಿಜ್ಞಾನಿಗಳ ಪರಿಶ್ರಮ ಮತ್ತು ಸಾಮರ್ಥ್ಯದ ಜೊತೆಗೆ ಕಷ್ಟ ಸುಖಗಳೆರಡರ ಸಮಯದಲ್ಲೂ ಜೊತೆಯಾಗಿ ನಿಂತು ನೈತಿಕ ಧೈರ್ಯವನ್ನು ತುಂಬುತ್ತಾ ಹುರಿದುಂಬಿಸಿದ ದೇಶದ ನಾಯಕತ್ವದ ಪಾತ್ರವೂ ಅತ್ಯಂತ ಮಹತ್ವವಾದುದು. ಆದರೆ ಅಂದು ಚಂದ್ರಯಾನ 2 ವಿಫಲವಾದಾಗ ತುಟಿ ಬಿಚ್ಚದ ವಿರೋಧಪಕ್ಷಗಳು ಇಂದು ಯಶಸ್ಸಿನ ಕೀರ್ತಿಯಲ್ಲಿ ಭಾಗಿದಾರರಾಗಲು ಹೊರಟಿರುವುದು ವಿಪರ್ಯಾಸದ ಸಂಗತಿ. ಅಂದು ಚಂದ್ರಯಾನ 2  ವಿಫಲವಾದಾಗ ಇಸ್ರೋ ಮುಖ್ಯಸ್ಥರನ್ನು ಅಪ್ಪಿ ಸಾಂತ್ವನ ಹೇಳಿದ ಪ್ರಧಾನಿ ಶ್ರೀ ಮೋದಿಯವರು, ಇಂದು ವಿಜ್ಞಾನಿಗಳ ಸಾಧನೆಯನ್ನು ಬೆನ್ನು ತಟ್ಟಿ ಪ್ರಶಂಸಿರುವ ರೀತಿಯು ಇಸ್ರೋ ವಿಜ್ಞಾನಿಗಳಿಗೆ ಆದಿತ್ಯ ಎಲ್ 1 ಮೂಲಕ ಸೂರ್ಯನೆಡೆಗೆ ಹೆಜ್ಜೆ ಇಡಲು ಒಂದಿಷ್ಟು ಪ್ರೇರಣೆ ಸಿಕ್ಕಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ರಾಜ್ಯದಲ್ಲಿ ನಡೆಯುತ್ತಿರುವ ಪ್ರತಿಭಟನೆಗಳು ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರದ ಅಸಮರ್ಪಕ ಕಾರ್ಯವೈಖರಿಗೊಂದು ಸ್ಪಷ್ಟ ಸಾಕ್ಷಿ.  ತಾನೇ ಘೋಷಿಸಿದ ಗ್ಯಾರಂಟಿಗಳನ್ನು ಸಮರ್ಪಕವಾಗಿ ಜಾರಿಗೊಳಿಸಲು ವಿಫಲವಾಗಿರುವ ಕಾಂಗ್ರೆಸ್, ತನ್ನ ಐದನೇ ಗ್ಯಾರಂಟಿಯಾದ ಯುವ ನಿಧಿ ಯೋಜನೆಯ ಬಗ್ಗೆ ಚಕಾರವೆತ್ತುತ್ತಿಲ್ಲ.  ಕಾಂಗ್ರೆಸ್ ಸರ್ಕಾರದ ಅಸಮರ್ಪಕ ಕಾರ್ಯವೈಖರಿಯ ಪರಿಣಾಮ ರಾಜ್ಯದ ಜನಜೀವನದ ಮೇಲೆ ಭಾರೀ ಪರಿಣಾಮ ಬೀರುತ್ತಿದ್ದು ವಿವಿಧ ವರ್ಗಗಳು ಪ್ರತಿಭಟನೆಯ ಹಾದಿ ತುಳಿದಿವೆ. ಆರಂಭದಲ್ಲೇ ಹಳಿ ತಪ್ಪಿರುವ ಕಾಂಗ್ರೆಸ್ ಸರ್ಕಾರದ ಆಡಳಿತವನ್ನು ಸರಿ ದಾರಿಗೆ ತರಲು ಬಿಜೆಪಿ ತನ್ನ ಹೋರಾಟಗಳನ್ನು ತೀವ್ರಗೊಳಿಸುತ್ತಿದೆ.

ಲೋಕಸಭಾ ಚುನಾವಣೆ ಸಮೀಪಿಸುತ್ತಿದೆ. ಕಾರ್ಯಕರ್ತನ ಜವಾಬ್ದಾರಿಯೂ ಹೆಚ್ಚಾಗುತ್ತಿದೆ.  ಪ್ರಧಾನಿ ಶ್ರೀ ಮೋದಿಯವರ ನೇತೃತ್ವದಲ್ಲಿ ಕೇಂದ್ರದ ಬಿಜೆಪಿಯ ಆಡಳಿತ ಪುನರ್ ಪ್ರತಿಷ್ಠಾಪನೆಯಾಗಲೇ ಬೇಕಾಗಿದೆ. ಕಠಿಣ ಪರಿಶ್ರಮ ಮತ್ತು ನಿರಂತರ ಪ್ರಯತ್ನ ನಮ್ಮ ಗುರಿ ಸಾಧನೆಗೆ ಸಾಧನವಾಗಬಹುದು. ಕೇಂದ್ರ ಸರ್ಕಾರದ ಸಾಧನೆಗಳು ಮತ್ತು ನಿಲುವುಗಳು ದೇಶದೊಳಗೆ ಮತ್ತು ವಿಶ್ವಮಟ್ಟದಲ್ಲಿ ಭಾರತದ ಹಿರಿಮೆ ಗರಿಮೆಯನ್ನು ಎತ್ತರೆತ್ತರಕ್ಕೆ ಏರಿಸುತ್ತಿರುವ ಈ ಹೊತ್ತಿನಲ್ಲಿ ಪ್ರತೀ ಕಾರ್ಯಕರ್ತನೂ ಮುಂದಿನ ಲೋಕಸಭಾ ಚುನಾವಣಾ ನಿಮಿತ್ತ ತಮ್ಮ ಜವಾಬ್ದಾರಿಯನ್ನು ಅರಿತು, ‘**ನಾವೇನು ಮಾಡಬೇಕು**’ ಎನ್ನುವ ಚಿಂತನೆಯೊಂದಿಗೆ ‘**ನಾನೇನು ಮಾಡಬಹುದು**’ ಎಂಬುದನ್ನು ಯೋಚಿಸಿ, ಯೋಜಿಸಿ ಮುನ್ನಡೆಯಬೇಕಿದೆ.

**(ಬಿದರೆ ಪ್ರಕಾಶ್)**
ಸಂಪಾದಕರು

# ಕಮಲ ಪಥ

**ಪ್ರಕಾಶಕರು**
ಶ್ರೀ ಹೆಚ್.ಎಸ್. ಗೋಪಿನಾಥ್


**ಸಂಪಾದಕರು**
ಶ್ರೀ ಬಿದರೆ ಪ್ರಕಾಶ್

## ಸುಭಾಷಿತ




**ಇವತ್ತು ಏನು ನಿಮ್ಮನ್ನು ನೋಯಿಸುತ್ತದೆಯೋ, ನಾಳೆ ಅದೇ ನಿಮ್ಮನ್ನು ಬಲಗೊಳಿಸುತ್ತದೆ...**

**- ಎ.ಪಿ.ಜೆ. ಅಬ್ದುಲ್ ಕಲಾಂ**



**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com
#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005

## ಈ ಸಂಚಿಕೆಯಲ್ಲಿ



**06 ಅಣ್ಣಾಮಲೈ ರಾಜಕಾರಣ.....**
**ಧೀರ ಪಥ – ಲೋಕ ಹಿತ**



**11 77ನೇ ಸ್ವಾತಂತ್ರ್ಯ ದಿನಾಚರಣೆ**



**15 ಚಂದ್ರಯಾನ – 3 'ಶಿವಶಕ್ತಿ'**



**27 ಒಂದು ದೇಶ ಚುನಾವಣೆ**



**31 ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ**

- **ದೀವಟಿಗೆ :** ಪಂ. ದೀನದಯಾಳ ಉಪಾಧ್ಯಾಯ ................................ 5
- ದೇಶ ವಿಭಜಕರಿಂದ 'ಭಾರತ್ ಜೋಡೋ' ಯಾತ್ರೆ ............................ 13
- ರಾಜ್ಯ ಪದಾಧಿಕಾರಿಗಳ ಸಭೆ ................................................... 18
- ವಿಜ್ಞಾನಿಗಳ ಚಂದ್ರಯಾನ ಕುರಿತ ಮನಸ್ಸಿನ ರಾಜಕಾರಣ ....................... 20
- ಕಚ್ಚತೀವು ದ್ವೀಪ ..........................................................23
- ರಾಷ್ಟ್ರೀಯ ಕಾರ್ಯದರ್ಶಿಗಳ ರಾಜ್ಯ ಕಾರ್ಯಾಲಯ ಭೇಟಿ ................... 33
- **ಮನ್ ಕಿ ಬಾತ್** – ಭಾರತ ಪ್ರಜಾಪ್ರಭುತ್ವದ ತಾಯಿ ... ........................ 34

ದೀವಟಿಗೆ



ಗಿರೀಶ್ ವಿಠ್ಠಲ ಬಡಿಗೇರ

# ಏಕಾತ್ಮ ಮಾನವತಾವಾದಿ ಪಂ. ದೀನದಯಾಳ ಉಪಾಧ್ಯಾಯ

**(ಸೆಪ್ಟೆಂಬರ್ 25, 1916 - ಫೆಬ್ರವರಿ 11, 1968)**

ಇಂದು ಭಾರತೀಯ ಜನತಾ ಪಾರ್ಟಿ ಹಳ್ಳಿಯಿಂದ ದೆಹಲಿಯವರೆಗೆ ಅಧಿಕಾರದ ಚುಕ್ಕಾಣಿ ಹಿಡಿದಿರಲು ಕಾರಣ ಅಸಂಖ್ಯ ನಿಸ್ವಾರ್ಥ ಕಾರ್ಯಕರ್ತರು. ಅವರಲ್ಲಿ ಅಗ್ರ ಶ್ರೇಣಿಯಲ್ಲಿರುವವರು ಪಂ. ದೀನದಯಾಳ ಉಪಾಧ್ಯಾಯ. ಇವರು ಹಾಕಿಕೊಟ್ಟ ವೈಚಾರಿಕ ನೆಲೆಗಟ್ಟಿನಿಂದ ಇಂದು ಪಕ್ಷ ಇಷ್ಟರ ಮಟ್ಟಿಗೆ ಗಟ್ಟಿಯಾಗಿ ಬೇರೂರಿದೆ.

ದೀನದಯಾಳರು ಜನಿಸಿದ್ದು ಸೆಪ್ಟೆಂಬರ್ 25ರ 1916ರಂದು, ಉತ್ತರ ಪ್ರದೇಶದ ಮಥುರಾ ಜಿಲ್ಲೆಯ ನಾಗ್ಲಾ ಚಂದ್ರಬಾನ್ ಎಂಬ ಹಳ್ಳಿಯಲ್ಲಿ. ಇವರ ತಂದೆ ಭಗವತೀಪ್ರಸಾದ್ ಉಪಾಧ್ಯಾಯರು, ವಿದ್ವಾಂಸರು ಹಾಗೂ ಜ್ಯೋತಿಷರಾಗಿದ್ದರು. ತಾಯಿ ರಾಮ್ ಪ್ಯಾರಿ, ಗೃಹಿಣಿಯಾಗಿದ್ದರು. ಇವರು ತಮ್ಮ ಮೂರನೇ ವಯಸ್ಸಿನಲ್ಲಿಯೇ ತಂದೆ, ಎಂಟನೇ ವಯಸ್ಸಿನಲ್ಲಿ ತಾಯಿ ಅವರನ್ನು ಕಳೆದುಕೊಂಡರು.

ದೀನದಯಾಳರು ಓರ್ವ ಅಪ್ರತಿಮ ಸಂಘಟಕ, ಪ್ರಬುದ್ಧ ಲೇಖಕ, ಭಾರತಕ್ಕೆ ಗೆಲುವಿನ ದಾರಿ ತೋರಿದ ದಿಗ್ದರ್ಶಕ. ಅಂದು ಐರೋಪ್ಯವು ಜಗತ್ತಿನ ನಾಯಕನಾಗಿ ತನ್ನ ಬಂಡವಾಳವಾದ ಮತ್ತು ಮಾರ್ಕ್ಸ್‌ನ ಸಮಾಜವಾದಗಳು ಭಾರತದ ಮೇಲೆ ದಾಳಿ ಮಾಡುತ್ತಿದ್ದಾಗ '**ಏಕಾತ್ಮ ಮಾನವತಾವಾದ**'ವನ್ನು ನೀಡಿದ ಮೇರು ವ್ಯಕ್ತಿ. ನಮ್ಮ ದೇಶಕ್ಕೆ ಬಂಡವಾಳವಾದ ಮತ್ತು ಸಮಾಜವಾದ ಅಪ್ರಸ್ತುತ. ಏಕಾತ್ಮ ಮಾನವತಾವಾದವೇ ಈ ಭೂಮಿಯ ಅಡಿಗಲ್ಲು ಮತ್ತು ಇದರಿಂದ ಮಾತ್ರ ಅಖಂಡತೆ ಸಾಧ್ಯ ಎಂದು ಸಾರಿದರು.

ಏಕಾತ್ಮ ಮಾನವತವಾದ ಎಂದರೆ ಓರ್ವ ವ್ಯಕ್ತಿಯ ಸಮಗ್ರ ಬೆಳವಣಿಗೆ. ವ್ಯಕ್ತಿಯನ್ನು ಕೇವಲ ಒಂದೇ ದೃಷ್ಟಿಕೋನದಲ್ಲಿ ನೋಡದೆ ಅವನ ಶರೀರ ಸಹಿತ ಮನಸ್ಸು, ಬುದ್ಧಿ ಮತ್ತು ಆತ್ಮಗಳನ್ನೊಳಗೊಂಡಂತೆ ಸಮಗ್ರವಾಗಿ ಪರಿಗಣಿಸುವುದು ಮತ್ತು ಈ ಮೂಲಕ ಸಮೃದ್ಧ ಸಮಾಜ ಹಾಗೂ ಸಶಕ್ತ ರಾಷ್ಟ್ರವನ್ನು ಕಟ್ಟುವುದು. ಕಲ್ಯಾಣ ರಾಜ್ಯವನ್ನು ಕಟ್ಟಬೇಕೆಂದರೆ ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಕಣ್ಣ ಮುಂದೆ ಇರಿಸಿಕೊಂಡು ಯೋಜನೆಗಳನ್ನು ರೂಪಿಸಬೇಕು. ನಿಜವಾದ ರಾಷ್ಟ್ರ ಇರುವುದು ಶ್ರೀಮಂತನ ಬಂಗಲೆಗಳಲ್ಲಿ ಅಲ್ಲ, ಬಡವನ ಜೋಪಡಿಯಲ್ಲಿ. ಯಾವಾಗ ಅಲ್ಲಿಂದ ಭಾರತ ಮೈದೆಳೆದು ಬರುತ್ತದೆಯೋ ಆಗ ನಾವು ಮತ್ತೆ ವಿಶ್ವಗುರುವಾಗುತ್ತೇವೆ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಇದನ್ನೇ ದೀನದಯಾಳರು ''ಅಂತ್ಯೋದಯ ಪರಿಕಲ್ಪನೆ''ಯ ಮೂಲಕ ಹೇಳಿದರು. ದೀನದಯಾಳರು ತಮ್ಮ ಕಾಲೇಜು ಶಿಕ್ಷಣ ಮುಗಿದ ನಂತರ 1942ರಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾಗಿ ತೆರಳಿದರು. ನಂತರದಲ್ಲಿ ಸಂಘದ ದ್ವಿತಿಯ ಸಂಘಚಾಲಕರಾದ ಗುರೂಜಿಯವರ ಅಪೇಕ್ಷೆಯಂತೆ 1951ರಲ್ಲಿ ಶ್ಯಾಮ ಪ್ರಸಾದ ಮುಖರ್ಜಿಯವರಿಂದ ಸ್ಥಾಪಿತವಾದ ಜನಸಂಘದ ಕಾರ್ಯದರ್ಶಿಯಾಗಿ ನೇಮಕಗೊಂಡರು.

ಇವರು ಜನಸಂಘದ ಜವಾಬ್ದಾರಿಯನ್ನು ಹೊತ್ತ ಮೇಲೆ ಅದನ್ನು ದೊಡ್ಡ ಮಟ್ಟಕ್ಕೆ ಬೆಳೆಸಲು ಅವಿರತ ಶ್ರಮ ಹಾಕಿದರು. ತಮ್ಮ ವೈಯಕ್ತಿಕ ಕಷ್ಟಗಳನ್ನು ದೂರ ಸರಿಸಿ ಸಮಾಜದ ಒಗ್ಗಟ್ಟಿಗೆ ದುಡಿದರು. ಇನ್ನು ಇವರು ಮಾಡುವ ಭಾಷಣಕ್ಕೆ ಮಾರುಹೋಗದವರು ಯಾರಿರಲಿಲ್ಲ. ಕಾಲಿಗೆ ಚಕ್ರ ಕಟ್ಟಿಕೊಂಡು ಊರಿಂದೂರಿಗೆ ಹೋಗುವ ಈ ಪರಿವ್ರಾಜಕ ಸನ್ಯಾಸಿಗೆ ಸಂಘಟನೆ ಬಿಟ್ಟು ಮಿಕ್ಕ ಯಾವ ವಿಷಯಗಳೂ ಚಿತ್ತದಲ್ಲಿರುತ್ತಿರಲಿಲ್ಲ. ಎಷ್ಟೋ ಬಾರಿ ಊಟ-ಉಪಹಾರ ಸಮಯಕ್ಕೆ ದೊರಯದೇ ಇದ್ದಾಗ ಪಕ್ಕದ ಗೂಡಂಗಡಿಯಲ್ಲಿ ಸಿಗುತ್ತಿದ್ದ ಕಡಲೆಬೀಜವನ್ನು ತಿಂದು ಮಲಗಿಕೊಳ್ಳುತ್ತಿದ್ದರು.

ಸಾಹಿತ್ಯದಲ್ಲಿ ವಿಶೇಷ ಅಭಿರುಚಿ ಮತ್ತು ಪಾಂಡಿತ್ಯ ಹೊಂದಿದ್ದ ಇವರು ಲಖನೌನಲ್ಲಿ ರಾಷ್ಟ್ರಧರ್ಮ ಪ್ರಕಾಶನವನ್ನು ಸ್ಥಾಪಿಸಿದರು. '**ರಾಷ್ಟ್ರಧರ್ಮ**' ಎಂಬ ಮಾಸ ಪತ್ರಿಕೆ, '**ಪಾಂಚಜನ್ಯ**' ಎಂಬ ಸಾಪ್ತಾಹಿಕ ಮತ್ತು '**ಸ್ವದೇಶ್**' ಎಂಬ ದಿನಪತ್ರಿಕೆಯನ್ನು ಪ್ರಾರಂಭಿಸಿದರು. ಸಾಮ್ರಾಟ ಚಂದ್ರಗುಪ್ತ, ಜಗದ್ಗುರು ಶಂಕರಾಚಾರ್ಯ ಎಂಬ ನಾಟಕಗಳನ್ನು ಬರೆದರು ಹಾಗೂ ಡಾಕ್ಟರ್ ಜೀಯವರ ಜೀವನಚರಿತ್ರೆಯನ್ನು ಮರಾಠಿ ಭಾಷೆಯಿಂದ ಆಂಗ್ಲ ಭಾಷೆಗೆ ಅನುವಾದಿಸಿದರು.

ತನ್ನ ಎಲ್ಲ ವೈಯಕ್ತಿಕ ಭೋಗಗಳನ್ನು ತ್ಯಜಿಸಿ, ಸಾಮಾಜಿಕ ಕಳಕಳಿ ಮತ್ತು ರಾಷ್ಟ್ರೀಯ ವಿಚಾರತೆಯ ಪ್ರವಾದಿಯಾಗಿ ಸಮಾಜದ ಏಳ್ಗೆಗಾಗಿ ಅನವರತ ಶ್ರಮಿಸಿದ ಉಪಾಧ್ಯಾಯರು 11ನೇ ಫೆಬ್ರವರಿ 1968ರಂದು ಉತ್ತರ ಪ್ರದೇಶದ ಮುಘಲಸರಾಯ ರೈಲ್ವೆ ನಿಲ್ದಾಣದಲ್ಲಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದರು. ಇಂದು ಪ್ರಧಾನಿ ಮೋದಿಯವರ '**ಸಬ್ ಕಾ ಸಾಥ್, ಸಬ್ ಕಾ ವಿಕಾಸ್. ಸಬ್ ಕಾ ವಿಶ್ವಾಸ್. ಸಬ್ ಕಾ ಪ್ರಯಾಸ್**' ಎನ್ನುವ ಮಂತ್ರಕ್ಕೆ ದೀನದಯಾಳರೇ ಪ್ರೇರಣೆ.



# ಅಣ್ಣಾಮಲೈ ರಾಜಕಾರಣ.....

## ಧೀರ ಪಥ – ಲೋಕಹಿತ



ಸಂತೋಷ್ ತಮ್ಮಯ್ಯ
ಸಂಪಾದಕರು, ಅಸೀಮ ಮಾಸಿಕ

**ತಮಿಳುನಾಡಿನಂಥ ಜಾಗದಲ್ಲಿ ರಾಷ್ಟ್ರೀಯ ಪಕ್ಷಗಳ ಬೇಳೆ ಬೇಯದೆ ಎಷ್ಟೋ ವರ್ಷಗಳಾದವು. ತಮಿಳುತನದ ಮೇಲರಿಮೆ, ಅದಕ್ಕೆ ಹಿಂದಿ ಹೇರಿಕೆಯೆಂಬ ಪ್ರಬಲ ಆಪಾದನೆ, ಕರ್ನಾಟಕಕ್ಕಿಂತಲೂ ಅತಿಯಾದ ಜಾತಿ ಲೆಕ್ಕಾಚಾರ, ಹಿಂದೂ ಎನ್ನಲು ಇರುವ ಆತಂಕ, ದ್ರಾವಿಡ ಸಿದ್ಧಾಂತವೆಂಬುದು ಹುಸಿ ಎಂದರೆ ಪಕ್ಷ ನಾಮಾವಶೇಷವಾಗಿಬಿಡುವ ಅಪಾಯ, ಬೇರುಬಿಟ್ಟ ಹಿಂದಿ ಭಾಷಿಕರ ಪಕ್ಷವೆಂಬ ಪಟ್ಟ, ಬಿಜೆಪಿಯನ್ನು ನಖಶಿಖಾಂತ ದ್ವೇಷಿಸುವ ಹತ್ತಕ್ಕೂ ಹೆಚ್ಚು ಕಟ್ಟರ್ ದ್ರಾವಿಡ ಪಕ್ಷಗಳು, ಇತಿಹಾಸ-ಭಾಷೆ- ಜಲ-ಗಡಿ-ತಮಿಳು ಅಸ್ಮಿತೆ ಮುಂತಾದ ಅತಿ ಸೂಕ್ಷ್ಮ ಸಂಗತಿಗಳ ಬಲೆ, ಇವೆಲ್ಲವನ್ನೂ ಕೇಂದ್ರದ ತಲೆಗೆ ಕಟ್ಟಿ ಮೋದಿ ತಮಿಳುನಾಡಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದುಬಿಡಬಹುದಾದ ಸಾಧ್ಯತೆ-ಹೀಗೆ ಸುತ್ತಲೂ ಹತ್ತಾರು ಅಕ್ಷೋಹಿಣಿಗಳು, ಗಾಂಢೀವವನ್ನು ಹಿಡಿದು ಯುದ್ಧಕ್ಕೆ ನಿಂತ ಅರ್ಜುನನಂತಹ ಶ್ರೀ ಅಣ್ಣಾಮಲೈ. ಇದು ಸದ್ಯದ ತಮಿಳುನಾಡಿನ ಸ್ಥಿತಿ.**

# ‘ಎನ್ನ ಮಣ್ಣ್, ಎನ್ನ ಮಕ್ಕಳ್’



ಕೆಲ ವರ್ಷಗಳ ಹಿಂದಿನವರೆಗೂ ಖ್ಯಾತ ಅರ್ಥಶಾಸ್ತ್ರಜ್ಞ, ಮಹಾ ಚಿಂತಕ ಎಂದು ಕರೆಸಿಕೊಳ್ಳುತ್ತಿದ್ದ ಸುಬ್ರಹ್ಮಣಿಯನ್ ಸ್ವಾಮಿ ಪತ್ರಕರ್ತರೊಡನೆ ಮಾತನಾಡುತ್ತಾ, ‘ತಮಿಳುನಾಡಿನಲ್ಲಿ ಅಸ್ತಿತ್ವದಲ್ಲೇ ಇರದ ಪಕ್ಷಕ್ಕೊಬ್ಬ ರಾಜ್ಯಾಧ್ಯಕ್ಷ!’ ಎಂದು ಕುಹಕವಾಡಿದ್ದರು.

ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಬಣ್ಣ ಕಳಚಿದ ಮಾಜಿ ಮುಖ್ಯಮಂತ್ರಿ, ಶ್ರೀ ಜಗದೀಶ್ ಶೆಟ್ಟರ್ ಅವರ ‘ಗ್ರಾಮಪಂಚಾಯತಿ ಚುನಾವಣೆಯನ್ನೂ ಗೆಲ್ಲಲಾಗದ ಶ್ರೀ ಅಣ್ಣಾಮಲೈ ಅವರ ಮುಂದೆ ನಮ್ಮಂಥವರು ಕೈಕಟ್ಟಿ ಕುಳಿತು ರಾಜಕೀಯ ಪಟ್ಟುಗಳನ್ನು ಕಲಿಯಬೇಕೇ?’ ಎಂಬ ಹೇಳಿಕೆ ಕರ್ನಾಟಕಕ್ಕಿಂತ ಹೆಚ್ಚು ತಮಿಳುನಾಡಿನಲ್ಲಿ ಸದ್ದು ಮಾಡಿತು. ಚುನಾವಣೆಯಲ್ಲಿ ಸೋತ ಶ್ರೀ ರೇಣುಕಾಚಾರ್ಯರೆಂಬ ಮಾಜಿ ಸಚಿವರು ಕೂಡ, ‘ರಾಜಕೀಯ ಅನುಭವವಿಲ್ಲದ ಶ್ರೀ ಅಣ್ಣಾಮಲೈ ಅವರನ್ನು ಉಸ್ತುವಾರಿಗಳನ್ನಾಗಿ ನೇಮಿಸಿದರೆ ಇನ್ನೇನಾಗಲು ಸಾಧ್ಯ?’ ಎಂದು ಅಸಹನೆಯ ಹೇಳಿಕೆ ತಮಿಳುನಾಡಿನಲ್ಲಿ ಸುದ್ದಿಯಾಗಿ ತಮಿಳುನಾಡು ಬಿಜೆಪಿ ಅಧ್ಯಕ್ಷ ಶ್ರೀ ಕೆ. ಅಣ್ಣಾಮಲೈ ಸಾಕಷ್ಟು ಟ್ರೋಲಾದರು.

ಶ್ರೀ ಅಣ್ಣಾಮಲೈ ಬಗ್ಗೆ ಅಪದ್ಧ ನುಡಿದಿದ್ದ ಈ ಮೂವರು ರಾಜಕಾರಣಿಗಳೇನೂ ರಾಜಕಾರಣವನ್ನು ಮೌಲ್ಯಾಧಾರಿತವಾಗಿ ಪರಿಪಾಲಿಸಿಕೊಂಡು ಬಂದವರೇನಲ್ಲ, ಶ್ರೀ ಅಣ್ಣಾಮಲೈ ಮೂರು ವರ್ಷಗಳಲ್ಲಿ ಗಳಿಸಿದ ಜನಾನುರಾಗವನ್ನು ನಾಲ್ಕು ದಶಕಗಳ ಕಾಲ ರಾಜಕೀಯದಲ್ಲಿದ್ದರೂ ಇವರಿಗೆ ಗಳಿಸಿಕೊಳ್ಳಲಾಗಲಿಲ್ಲ! ಈ ಮೂವರೂ ಕೂಡ ಯಾವುದೋ ಒಂದು ಸುರಕ್ಷಾವಲಯದಲ್ಲಿ ಪರಪುಟ್ಟರಂತೆ ಗೂಡು ಕಟ್ಟಿ ಅಧಿಕಾರವನ್ನು ಅನುಭವಿಸಿದವರು. ಮೂವರೂ ತಾವು ಅಧಿಕಾರದಲ್ಲಿದ್ದಾಗ ಮಾತ್ರ ಚಾಲ್ತಿಯಲ್ಲಿದ್ದವರು.

ಆದರೆ ಶ್ರೀ ಅಣ್ಣಾಮಲೈ...? ತಮಿಳುನಾಡಿನಂಥ ಜಾಗದಲ್ಲಿ ಪ್ರಾದೇಶಿಕವಾದ, ಪೆರಿಯಾರ್‌ವಾದ, ದ್ರಾವಿಡವಾದ ಮುಂತಾದ ವಿಲಿಯಂ ಜೋನ್ಸ್ ಕಾಲದ ನಾನಾ ಕುಟಿಲ ವಾದಗಳು ಹುಚ್ಚು ನರ್ತನಗೈಯುತ್ತಿರುವಾಗಲೇ ಅಣ್ಣಾಮಲೈ ‘ಎನ್ನ ಮಣ್ಣ್, ಎನ್ನ ಮಕ್ಕಳ್’ ಎಂಬ ಪಾದಯಾತ್ರೆಯ ಒಂದು ಹಂತವನ್ನು ಯಶಸ್ವಿಯಾಗಿ ಪೂರೈಸಿದ್ದರು!

ಆ 22 ದಿನಗಳೂ ಶ್ರೀ ಅಣ್ಣಾಮಲೈಯವರ ಹಿಂದೆ ಸಾಗರದಂತೆ ಜನ ನಡೆದಿದ್ದಾರೆ, ಹುಚ್ಚೆದ್ದು ಕುಣಿದಿದ್ದಾರೆ, ಕಣ್ಣೀರು ಸುರಿಸಿದ್ದಾರೆ. ಬುದ್ಧಿಜೀವಿಗಳು, ಭಾಷಾಂಧರು, ಮತಾಂಧರು, ಆಡಳಿತ ಪಕ್ಷದ ಗೂಂಡಾಗಳು ಮತ್ತು ಮಾಧ್ಯಮಗಳು ಒಡ್ಡಿದ ಸಾವಿರಾರು ಅಡ್ಡಿಗಳನ್ನು ದಾಟಿ ‘ನನ್ನ ಮಣ್ಣು, ನನ್ನ ಜನ’ ಯಾತ್ರೆ ಯಶಸ್ವಿಯಾಗಿದೆ. ಶ್ರೀ ಅಣ್ಣಾಮಲೈ ಅವರನ್ನು ತೆಗಳಿದವರೆಲ್ಲಾ ಸೂತಕದ ಮನೆಯೊಳಗೆ ಇನ್ನೂ ಮುದುಡಿ ಕುಳಿತಿದ್ದಾರೆ. ಆದರೆ ಶ್ರೀ ಅಣ್ಣಾಮಲೈ ದಣಿವಾರಿಸಿಕೊಳ್ಳಲು ಇದು ಸಮಯವಲ್ಲ ಎಂದು ಎರಡನೆಯ ಹಂತದ ಯಾತ್ರೆಗೆ ಸಿದ್ಧವಾಗುತ್ತಿದ್ದಾರೆ! ಹಾಗಾದರೆ ಉಳಿದ ರಾಜಕಾರಣಿಗಳಲ್ಲಿ ಇಲ್ಲದ ಯಾವುದು ಶ್ರೀ ಅಣ್ಣಾಮಲೈ ಅವರಲ್ಲಿದೆ? ರಾಜಕಾರಣವೆಂದರೆ ಬಕೇಟುಮಯ ಎಂದು ಕಾಣುವ ವಾತಾವರಣದಲ್ಲೂ ಶ್ರೀ ಅಣ್ಣಾಮಲೈಯವರಿಗೆ ಈ ಪರಿಯಲ್ಲಿ ನೊಗ ಹೊರುವ ತಾಕತ್ತು ಬಂದಿದ್ದು ಎಲ್ಲಿಂದ? ಎಲ್ಲವನ್ನೂ ಶೂನ್ಯದಿಂದಲೇ ಪ್ರಾರಂಭಿಸಿ ಯಶಸ್ವಿಯಾಗುವ ರಹಸ್ಯವೇನು? ಮುಂತಾದ ಪ್ರಶ್ನೆಗಳು ಸಹಜವಾಗಿ ಹುಟ್ಟುತ್ತವೆ.

ಒಮ್ಮೆ ನೆನಪು ಮಾಡಿಕೊಳ್ಳಿ, ತಮಿಳುನಾಡಿನಂಥ ಜಾಗದಲ್ಲಿ ರಾಷ್ಟ್ರೀಯ ಪಕ್ಷಗಳ ಬೇಳೆ ಬೇಯದೆ ಎಷ್ಟೋ ವರ್ಷಗಳಾದವು. ತಮಿಳುತನದ ಮೇಲರಿಮೆ, ಅದಕ್ಕೆ ಹಿಂದಿ ಹೇರಿಕೆಯೆಂಬ ಪ್ರಬಲ ಆಪಾದನೆ, ಕರ್ನಾಟಕಕ್ಕಿಂತಲೂ ಅತಿಯಾದ ಜಾತಿ ಲೆಕ್ಕಾಚಾರ, ಹಿಂದೂ ಎನ್ನಲು ಇರುವ ಆತಂಕ, ದ್ರಾವಿಡ ಸಿದ್ಧಾಂತವೆಂಬುದು ಹುಸಿ ಎಂದರೆ ಪಕ್ಷ ನಾಮಾವಶೇಷವಾಗಿಬಿಡುವ ಅಪಾಯ, ಬೇರುಬಿಟ್ಟ ಹಿಂದಿ ಭಾಷಿಕರ ಪಕ್ಷವೆಂಬ ಪಟ್ಟ, ಬಿಜೆಪಿಯನ್ನು ನಖಶಿಖಾಂತ ದ್ವೇಷಿಸುವ ಹತ್ತಕ್ಕೂ ಹೆಚ್ಚು ಕಟ್ಟರ್ ದ್ರಾವಿಡ ಪಕ್ಷಗಳು, ಇತಿಹಾಸ-ಭಾಷೆ- ಜಲ-ಗಡಿ-ತಮಿಳು ಅಸ್ಮಿತೆ ಮುಂತಾದ ಅತಿ ಸೂಕ್ಷ್ಮ ಸಂಗತಿಗಳ ಬಲೆ, ಇವೆಲ್ಲವನ್ನೂ ಕೇಂದ್ರದ ತಲೆಗೆ ಕಟ್ಟಿ ಪ್ರಧಾನಿ ಶ್ರೀ ಮೋದಿ ತಮಿಳುನಾಡಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದುಬಿಡಬಹುದಾದ ಸಾಧ್ಯತೆ-ಹೀಗೆ ಸುತ್ತಲೂ ಹತ್ತಾರು ಅಕ್ಷೋಹಿಣಿಗಳು. ಇದು ಸದ್ಯದ ತಮಿಳುನಾಡು ಬಿಜೆಪಿ ಮತ್ತು ಶ್ರೀ ಅಣ್ಣಾಮಲೈಯವರ ಸ್ಥಿತಿ. ಅಂಥಲ್ಲಿ ಕಳೆದ 22 ದಿನಗಳ ಕಾಲ ಜನ ಜಾತಿಭೇದ ಮರೆತು ಹಿಂಡುಹಿಂಡಾಗಿ ಬಿಜೆಪಿ ಧ್ವಜ ಹಿಡಿದರು! ಅದು ರಾಜಕಾರಣದ ಒಂದು ಅಚ್ಚರಿ. ಅದಕ್ಕೆ ಕಾರಣರಾದವರು ಒಬ್ಬರೇ ಒಬ್ಬರು ಶ್ರೀ ಅಣ್ಣಾಮಲೈ. ಹಾಗಾಗಿ ಶ್ರೀ ಅಣ್ಣಾಮಲೈ ಎಂದರೆ ಭಾರತದ ರಾಜಕೀಯ ಇತಿಹಾಸದಲ್ಲಿ ಅಧ್ಯಯನಯೋಗ್ಯವಾದ ವ್ಯಕ್ತಿತ್ವ.

ಅವರು ಖಾಕಿ ತೊಟ್ಟಿದ್ದಾಗ ಪತ್ರಿಕೆಗಳು ಖಡಕ್ ಪೊಲೀಸ್ ಅಧಿಕಾರಿ ಎಂದು ಬಣ್ಣಿಸಿದ್ದರೂ ಅವರ ದೇಹಾಕಾರವೇನೂ ಬಾಹುಬಲಿಯಂತಿರಲಿಲ್ಲ. ಸದಾ ಏನನ್ನೋ ಧ್ಯಾನಿಸುವ ಅವಧೂತನಂತೆ ಕಾಣಿಸುವ ಶ್ರೀ ಅಣ್ಣಾಮಲೈ ಅವರನ್ನು ಕರ್ನಾಟಕ ‘ಸಿಂಗಂ’ ಎಂದು ಕರೆದಾಗ ಉಬ್ಬಿಹೋಗಲಿಲ್ಲ, ಧಿಮಾಕು ಹುಟ್ಟಲಿಲ್ಲ.

ಸಮಾಜದ ಚಿಂತೆಯನ್ನು ತನ್ನದೇ ಚಿಂತೆ ಎಂದುಕೊಳ್ಳುವ ದೊಡ್ಡ ಮನಸ್ಸು, ಹೃದಯದಿಂದ ಹೊರಬರುವ ಮಾತುಗಳು ಅವರಿಗೊಂದು ವಿಶೇಷ ವ್ಯಕ್ತಿತ್ವವನ್ನು ಒದಗಿಸಿದ್ದವು. ಆದರೆ ಆ ಮನುಷ್ಯನಿಗೆ ಇನ್ನೊಂದೈದು ವರ್ಷ ಹೀಗೆ ಬದುಕಿದರೆ ಟೊಳ್ಳಾಗಿಹೋಗುವೆ ಎಂಬ ಭಯ ಕಾಡಲಾರಂಭಿಸಿತು. ಅನೇಕರಿಗೆ ಹೀಗನಿಸುತ್ತದೆ. ಆದರೆ ಅವರೆಲ್ಲರ ಪರ್ಯಾಯ ಆಯ್ಕೆಗಳು ಮಾತ್ರ ವಿಚಿತ್ರವಾಗಿರುತ್ತವೆ. ಹೀಗೆ ಹಲವು ವರ್ಷಗಳ ಚಡಪಡಿಕೆಯ ನಂತರ ಒಂದು ದಿನ ತಿರುವಣ್ಣಾಮಲೈಯಲ್ಲಿ ಗಿರಿವಲಂ ಮಾಡುತ್ತಿದ್ದಾಗ ಆ ಅಣ್ಣಾಮಲೈಯೇ ಅವರಿಗೊಂದು ಸ್ಪಷ್ಟ ದಾರಿಯನ್ನು ತೋರಿಸಿದ. ಹಿಂದೆಮುಂದೆ ನೋಡದೆ ಕೆಲಸಕ್ಕೆ ರಾಜಿನಾಮೆ ಕೊಟ್ಟು ಖಾಕಿ ಕಳಚಿದರು. ಬುದ್ಧಿಹೇಳಲು ಬಂದವರ ಕಣ್ಣುತಪ್ಪಿಸಿದರು, ಆಡುವವರ ಮಾತಿಗೆ ಕಿವುಡಾದರು. ಕೊನೆಗೊಂದು ದಿನ 'ರಾಜಕೀಯಕ್ಕೆ ಸೇರುವೆ' ಎಂದು ಘೋಷಿಸಿದರು. ಹಿಂದಿನ ರಾತ್ರಿಯವರೆಗೂ ಆತನನ್ನು 'ಸಿಂಗಂ' ಎನ್ನುತ್ತಿದ್ದವರೇ ಮರುದಿನದಿಂದ ಶತ್ರುಗಳಂತೆ ನೋಡತೊಡಗಿದರು. ಆದರೆ ಅವರು ತನ್ನ ಎಂದಿನ ನಿರ್ಲಿಪ್ತತೆಯನ್ನು ಕಾಯ್ದುಕೊಂಡಿದ್ದರು. ಬದುಕಲ್ಲಿ ದೊಡ್ಡ ರಿಸ್ಕ್ ತೆಗೆದುಕೊಂಡಿದ್ದರು. ತಮಾಷೆಯೆಂದರೆ ಖಾಕಿ ಕಳಚಿದಾಗಲೇ ಆತ ಹೆಚ್ಚು ಸಿಂಗಂನಂತೆ ಕಾಣುತ್ತಿದ್ದರು!

ಶ್ರೀ ಕುಪ್ಪುಸ್ವಾಮಿ ಅಣ್ಣಾಮಲೈಯವರ ಈ ಕಥಾನಕ ಸಮಸ್ತ ಕರ್ನಾಟಕಕ್ಕೆ ತಿಳಿದಿದೆ. ಆದರೆ ಶ್ರೀ ಅಣ್ಣಾಮಲೈಯವರ ಬದುಕನ್ನು ನೋಡುತ್ತಾ ಹೋದಂತೆ ಭರ್ತೃಹರಿಯ ಧೀರರಾದವರು ನ್ಯಾಯಮಾರ್ಗವನ್ನು ಬಿಟ್ಟು ಸರಿಯುವುದಿಲ್ಲ, 'ನ್ಯಾಯಾತ್ ಪಥಃ ಪ್ರವಿಚಲಂತಿ ಪದಂ ನ ಧೀರಾಃ' ಎಂಬ ಮಾತು ನೆನಪಾಗುತ್ತದೆ. ಏಕೆಂದರೆ ಬರಡು ನೆಲ ಅರವಕುರುಚ್ಚಿಯ ಬಾಲ್ಯ, ಐಪಿಎಸ್ ಬದುಕು, ರಾಜಿನಾಮೆ ಮತ್ತು ರಾಜಕಾರಣಕ್ಕೆ ಸೇರ್ಪಡೆ, ಚುನಾವಣೆಯಲ್ಲಿ ಸ್ಪರ್ಧೆ ಮತ್ತು ಸೋಲು... ಎಲ್ಲವನ್ನೂ ನೋಡಿದರೆ ಕಾಣುವುದು ಅವರು ಹಿಡಿದ ಧೀರಪಥ. ಧೀರಪಥವನ್ನೇ ಹಿಡಿದವರು ಅರಸರಾಗಲಿ, ಆಳಾಗೇ ಇರಲಿ, ಅಂಥವರಿಂದ ಸಮಾಜದಲ್ಲಿ ಒಂದು ಪರಿವರ್ತನೆಯಂತೂ ಆಗಿರುತ್ತದೆ. ಅದಕ್ಕೆ ಉತ್ತಮ ಉದಾಹರಣೆಯೇ ಶ್ರೀ ಅಣ್ಣಾಮಲೈ. ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಅವರು ಸೋತಿರಬಹುದು. ಆದರೆ ಅರವಕುರುಚ್ಚಿಯಲ್ಲಿ ಶ್ರೀ ಅಣ್ಣಾಮಲೈ ಗೆಲುವಿನ ಹೆಜ್ಜೆಯನ್ನೇ ಇಟ್ಟಿದ್ದರು. ಧೀರಪಥವನ್ನು ಹಿಡಿಯುವುದು, ನ್ಯಾಯಮಾರ್ಗದಲ್ಲಿ ಸಾಗುವುದೆಲ್ಲವೂ ಹೇಳಲು-ಕೇಳಲು ಅತ್ಯಂತ ಸುಂದರ ಪದಗಳು. ಆದರೆ ಒರ್ವ ಐಪಿಎಸ್ ಅಧಿಕಾರಿಗೆ ಇವು ಮುಳ್ಳಿನ ಹಾದಿಗಳೇ. ಏಕೆಂದರೆ ರಾಜಕಾರಣವೆಂಬುದು ಎಂಥೆಂಥ ಕನಸುಗಾರರನ್ನೇ ಮಣ್ಣುಮುಕ್ಕಿಸಿದೆ. ಸಂವೇದನೆಯನ್ನು ಉಂಟುಮಾಡುವೆ ಎಂಬ ಖ್ಯಾತಿವಂತರನ್ನೂ ರಾಜಕಾರಣ ಹೀನಾಯವಾಗಿ ಸೋಲಿಸಿದೆ, ಸಮಾಜವೂ ಅಷ್ಟೇ ಬೇಗ ಅಂಥವರನ್ನು ಮರೆತಿದೆ. ಮಹಾಮಹಾ ಸಿದ್ಧಾಂತಿಗಳೂ ಚುನಾವಣೆಯಲ್ಲಿ ಸ್ಪರ್ಧಿಸಿ ದಾರಿಹೋಕರಿಂದ ಸೋಲನ್ನುಂಡಿದ್ದಾರೆ. ಆಚಾರ್ಯ ಕೃಪಲಾನಿ, ಆಚಾರ್ಯ ನರೇಂದ್ರದೇವ, ಪಂ. ದೀನದಯಾಳ ಉಪಾಧ್ಯಾಯರಂಥ ಮಹಾರಥಿಗಳೇ ಸೋತಿದ್ದಾರೆ. ಸೋತವರಲ್ಲಿ ಕೆಲವರು ಕೊಲೆಯೂ ಆಗಿಹೋಗಿದ್ದಾರೆ! ಇಂಥಾ ಹೇರಳ ಉದಾಹರಣೆಗಳಿದ್ದರೂ ಉನ್ನತ ಹುದ್ದೆಗೆ ರಾಜಿನಾಮೆ ಕೊಟ್ಟ ಶ್ರೀ ಅಣ್ಣಾಮಲೈಯವರ ಮುಂದಿದ್ದದ್ದು ಬಿಜೆಪಿಯಯ ಗಂಧಗಾಳಿಯೇ ಇಲ್ಲದಿದ್ದ ತಮಿಳುನಾಡು. ಬಕೇಟು ಹಿಡಿದಿದ್ದರೆ ಅವರಿಗೆ ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲಿ ಸ್ಪರ್ಧಿಸುವ ಅವಕಾಶಗಳಿದ್ದವು.



ಅಷ್ಟೇ ಏಕೆ ಅರವಕುರುಚ್ಚಿಯ ಸಮೀಪದ ಕರೂರ್ ಕ್ಷೇತ್ರದಲ್ಲಿ ಸ್ಪರ್ಧಿಸಿ ಸುಲಭವಾಗಿ ಗೆಲ್ಲುವ ಅವಕಾಶವೂ ಇತ್ತು. ರಾಜಕೀಯ ಪಂಡಿತರು ಅಂಥ ಸಲಹೆಗಳನ್ನು ನೀಡಿದ್ದರೂ ಅವರು ಆರಿಸಿಕೊಂಡಿದ್ದು ಧೀರಪಥವನ್ನೇ. ಏಕೆಂದರೆ ಧೀರಪಥವನ್ನು ಆರಿಸಿಕೊಂಡರೆ ಮಾತ್ರ ಧ್ಯೇಯಪಥದಲ್ಲಿ ನಡೆಯಬಹುದಾಗಿತ್ತು. ಗೆದ್ದರೂ ಸೋತರೂ ಹುಟ್ಟೂರಲ್ಲೇ ಸ್ಪರ್ಧಿಸುವೆ, ಹುಟ್ಟೂರಿನ ಜನರ ಸೇವೆಗಲ್ಲದ ರಾಜಕಾರಣ ಬೇಡ ಎಂದ ಶ್ರೀ ಅಣ್ಣಾಮಲೈ ಜನರ ಕಣ್ಣಲ್ಲಿ ನಿಜವಾದ ಸಿಂಗಂ ಆದರು.

'ಕಮಲವನ್ನೇ ಕಾಣದ ಜನರೆದುರಲ್ಲಿ ಬಿಜೆಪಿ ಸಿದ್ಧಾಂತವನ್ನು ಮಂಡಿಸಬೇಕಿತ್ತು'.ಆಗ ಅವರಿಗೆ ಕಂಡಿದ್ದೇ 'ವೇಲ್' ಯಾತ್ರೆ. ಹೊರ ಪ್ರಪಂಚ ಅಂದುಕೊಂಡಂತೆ ತಮಿಳರೇನೂ ಪೆರಿಯಾರನ ಸಿದ್ಧಾಂತಕ್ಕೆ ಬದ್ಧರಾಗಿ ಬದುಕುತ್ತಿಲ್ಲ, ಆದರೆ ಆತನ ಹೆಸರಲ್ಲಿ ದ್ರಾವಿಡ ಪಕ್ಷಗಳು ಜನರ ದಿಕ್ಕು ತಪ್ಪಿಸುತ್ತಿವೆ ಎಂಬ ಸೂತ್ರದಿಂದ ಪಕ್ಷದ ಸಂಘಟನೆ ಆರಂಭಿಸಿದರು. ಎರಡು ತಿಂಗಳುಗಳ ಕಾಲ ತಮಿಳುನಾಡಿನಾದ್ಯಂತ 'ವೇಲ್' ಯಾತ್ರೆ ಯಶಸ್ವಿಯಾಗಿ ನಡೆಯಿತು. ಪೆರಿಯಾರನ ವಾದಗಳಿಗೆ ತಮಿಳು ತಲೆಗಳು ತಿಲಾಂಜಲಿ ಇಟ್ಟು ದಶಕಗಳನೇಕ ಕಳೆದಿವೆ ಎಂಬುದನ್ನು ಯಾತ್ರೆ ಸಾರಿತು. ಅದಕ್ಕೆ ಕಾರಣವಾಗಿದ್ದು ಅದೇ ಧೀರಪಥ. ಅರವಕುರುಚ್ಚಿಯಲ್ಲಿ ಶ್ರೀ ಅಣ್ಣಾಮಲೈ ಮಾಡಿದ್ದೆಲ್ಲವೂ ಸಿದ್ಧಾಂತಕ್ಕಾಗಿ. ಶ್ರೀ ಅಣ್ಣಾಮಲೈಯಂಥ ನಿಷ್ಠ-ಪ್ರಾಮಾಣಿಕ ಮತ್ತು ತಾಳ್ಮೆಯ ಮೂರ್ತಿಯ ಆವಶ್ಯಕತೆ ತಮಿಳುನಾಡಿಗಿತ್ತು. ಶ್ರೀ ಅಣ್ಣಾಮಲೈ ಆ ಸ್ಥಾನವನ್ನು ತುಂಬಿದರು, 68 ಸಾವಿರ ಮತಗಳನ್ನು ಪಡೆದು ಮುಂದಿನ ಪರಿವರ್ತನೆಗೆ ಮುನ್ನುಡಿ ಬರೆದರು. ಬಿಜೆಪಿ ಕೂಡಾ **'ವಿಜಯಕ್ಕೆ ಹಪಹಪಿಸುವವನೊಡನಲ್ಲ, ಪ್ರಾಮಾಣಿಕನೊಡನೆ ನಡೆ'**



ಎಂಬ ಆದರ್ಶದೊಡನೆ ಸಾಗಿ ಸಿದ್ಧಾಂತವನ್ನು ಗೆಲ್ಲಿಸಿತು. ಧೀರನಿಗೆ ಸೋಲೂ ಕೂಡ ಒಂದು ರೀತಿ ಗೆಲುವೇ. ಯುಧಿಷ್ಠಿರನಿಗೆ ಪಟ್ಟಾಭಿಷೇಕ ನಡೆದಿದ್ದು, ಪಾಂಡವರು ರಾಜಸೂಯವನ್ನು ಆಚರಿಸಿದ್ದೆಲ್ಲವೂ ವನವಾಸ, ಅಜ್ಞಾತವಾಸ ಮತ್ತು 18 ದಿನಗಳ ಘನಘೋರ ಕುರುಕ್ಷೇತ್ರದ ನಂತರವೇ!

ಅರವಕುರುಚ್ಚಿಯ ಚುನಾವಣಾ ಸೋಲಿನ ನಂತರ ಶ್ರೀ ಅಣ್ಣಾಮಲೈ ಕಳೆದುಹೋಗುವರು ಎಂದು ಕೆಲವು ರಾಜಕೀಯ ವಿಶ್ಲೇಷಕರು ಷರಾ ಬರೆದರು. ಆದರೆ ಶ್ರೀ ಅಣ್ಣಾಮಲೈಯವರ ಅಸಲಿ ಹೋರಾಟ ನಂತರ ಆರಂಭವಾಯಿತು! ಡಿಎಂಕೆ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ತೀವ್ರ ಹೋರಾಟವನ್ನು ಸಂಘಟಿಸಿದರು. ನೇರ ಮಾತುಗಳಿಂದ ಮಾಧ್ಯಮಗಳನ್ನು ಎದುರು ಹಾಕಿಕೊಂಡರು. ಇನ್ನೊಂದೆಡೆ ಜನ ಹಿಂಡುಹಿಂಡಾಗಿ ಇವರ ಹಿಂದೆ ಬರತೊಡಗಿದರು.

ಪಂ. ದೀನದಯಾಳ ಉಪಾಧ್ಯಾಯರು ಲೇಖನವೊಂದರಲ್ಲಿ ಲೋಕಹಿತವನ್ನು ಸಾಧಿಸುವ ರಾಜಮಾರ್ಗದ ಬಗ್ಗೆ ಹೀಗೆ ಉಲ್ಲೇಖಿಸಿದ್ದರು; 'ಅನ್ನವನ್ನು ಯೋಗ್ಯರೀತಿಯಲ್ಲಿ ತಯಾರಿಸಿದಲ್ಲಿ ಅಕ್ಕಿಯೆಲ್ಲಾ ಬೆಂದೇ ಬೇಯುತ್ತದೆ, ಅನ್ನ ತಯಾರಿಸುವ ಉತ್ತಮ ವಿಧಾನ ಇದೇ ಹೊರತು ಒಂದೊಂದೇ ಅಕ್ಕಿಯ ಕಾಳನ್ನೇ ಪ್ರತ್ಯೇಕವಾಗಿ ಬೇಯಿಸುವ ಪದ್ಧತಿ ಎಲ್ಲೂ ಬಳಕೆಯಲ್ಲಿಲ್ಲ, ಅದೇ ರೀತಿ ರಾಷ್ಟ್ರವನ್ನು ಸಮೃದ್ಧಿಗೊಳಿಸಿದಲ್ಲಿ ಒಂದೊಂದು ರಾಜ್ಯವೂ, ಪ್ರದೇಶವೂ ತಾನಾಗಿ ಶಕ್ತಿಶಾಲಿಯಾಗುತ್ತದೆ. ಸ್ವರಾಷ್ಟ್ರದ ವೈಭವದಲ್ಲಿ ಪ್ರಾದೇಶಿಕತೆಯ ವೈಭವವೂ ಇದೆ' ರಾಜಕಾರಣದಲ್ಲಿ ಸಂಘಟನೆಯ ಆವಶ್ಯಕತೆಯನ್ನು ಅವರು ಅನ್ನದ ಉದಾಹರಣೆಯ ಮೂಲಕ ಹೇಳಿದ್ದರೂ ಅದನ್ನು ಸಮರ್ಥವಾಗಿ ಅನ್ವಯಿಸಿ ಕಾರ್ಯರೂಪಕ್ಕೆ ತಂದವರು ಶ್ರೀ ಅಣ್ಣಾಮಲೈ.

ತಮಿಳುನಾಡಿನ ಬಗ್ಗೆ ಅವರಿಗೆ ಅವರದ್ದೇ ಆದ ಕನಸುಗಳಿವೆ. ಸಮಾಜದ ನೋವನ್ನು ತನ್ನ ನೋವು ಎಂದು ಭಾವಿಸುವ ಅಪರೂಪದ ಗುಣವಿದೆ. ಇಂಥ ಸಂವೇದನಶೀಲ ಗುಣಗಳೇ ಶ್ರೀ ಅಣ್ಣಾಮಲೈ ಅವರನ್ನು ಇಂದು ಉಳಿದ ರಾಜಕಾರಣಿಗಳಿಗಿಂತ ಭಿನ್ನವಾಗಿಟ್ಟಿವೆ. ಪಂ. ದೀನದಯಾಳರು ಕೂಡ ರಾಜಕಾರಣಿಯಾಗುವವನಿಗೆ ರಾಮನಿಗಿದ್ದ ಕೆಲವು ಗುಣಗಳಾದರೂ ಇರಬೇಕು ಎಂದು ಹೇಳಿದ್ದರು. ಶ್ರೀ ಅಣ್ಣಾಮಲೈಯವರ ಹಿಂದಿನ 'ವೇಲ್ ಯಾತ್ರೆ'ಯೇ ಆಗಲಿ, ಇಂದಿನ 'ಎನ್ನ ಮಣ್ಣ್, ಎನ್ನ ಮಕ್ಕಳ್' ಯಾತ್ರೆಯೇ ಆಗಲಿ ಅಥವಾ ಅವರ ಹಲವಾರು ಸಂದರ್ಶನಗಳನ್ನೇ ನೋಡಿದರೂ ಅಲ್ಲಿ ಉಳಿದ ರಾಜಕಾರಣಿಗಳಿಗಿಂತ ಭಿನ್ನವಾದ, ವಿಶೇಷವಾದ ವ್ಯಕ್ತಿತ್ವವೊಂದನ್ನು ಕಾಣುತ್ತೇವೆ. ರಾಮನಾಥಪುರದಲ್ಲಿ ಲಕ್ಷೋಪಲಕ್ಷ ಜನರೆದುರು ನಿಂತು 'ನನಗೆ ಭಯವಾಗುತ್ತಿದೆ' ಎಂದು ಎದೆಯೊಳಗಿಂದ ಹೇಳುವ ಅದೇ ಅಣ್ಣಾಮಲೈ ಮತ್ತೊಂದು ರ್‍ಯಾಲಿಯಲ್ಲಿ 'ನಾನು ಅಧಿಕಾರಕ್ಕೇರಲು ರಾಜಕಾರಣಕ್ಕೆ ಬಂದವನಲ್ಲ, ನಾಳೆ ನಾನು ಚೆನ್ನೈ ಕಾರ್ಪೊರೇಶನ್ ಚುನಾವಣೆಗೆ ನಿಂತರೂ ಗೆಲ್ಲುವ ಗ್ಯಾರಂಟಿಯಿಲ್ಲ'ಎಂದು ಯಾವ ಹಿಂಜರಿಕೆಯೂ ಇಲ್ಲದೆ ಹೇಳಿಕೆ ನೀಡುತ್ತಾರೆ! ಇಂಥ ಎದೆಗಾರಿಕೆಯಿರುವ ಓರ್ವ ನಾಯಕನನ್ನು ತಮಿಳುನಾಡು ದಶಕಗಳಿಂದ ಕಾಯುತ್ತಿತ್ತು. ಅದರ ಫಲವೇ 'ಎನ್ನ ಮಣ್ಣ್, ಎನ್ನ ಮಕ್ಕಳ್' ಯಾತ್ರೆಯ ಯಶಸ್ಸು.

ಅಷ್ಟಕ್ಕೂ ತಮಿಳುನಾಡು ಏಕೆ ಇಂಥವರನ್ನು ಕಾಯುತ್ತಿತ್ತು? ತಮಿಳುನಾಡಿನಲ್ಲಿ ರಾಷ್ಟ್ರೀಯ ಪಕ್ಷಗಳ ಅಸ್ತಿತ್ವವೇ ಇಲ್ಲದಿರಬಹುದು, ಡಿಎಂಕೆ, ಎಐಎಡಿಎಂಕೆಗಳೆರಡೇ ಹಲವು ದಶಕಗಳಿಂದ ಅಧಿಕಾರಕ್ಕೇರಿರಬಹುದು. ಅನೇಕ ಗ್ಲಾಮರಸ್ ನಾಯಕರು ಬಂದುಹೋಗಿರಬಹುದು. ಆದರೆ ಇಂದಿಗೂ ತಮಿಳುನಾಡಿನ ಜನರು ದಿ. ಕಾಮರಾಜರನ್ನು ಅತ್ಯಂತ ಗೌರವದಿಂದ ನೆನಪಿಸಿಕೊಳ್ಳುತ್ತಾರೆ. ದಿ. ಕಾಮರಾಜರ ಅಭಿವೃದ್ಧಿಯ ಕಾರ್ಯಗಳು ತಮಿಳುನಾಡಿನ ಇಂದಿನ ಪ್ರಗತಿಗೆ ಮೂಲ ಕಾರಣ ಎಂಬ ಗೌರವಗಳ ತರುವಾಯ ಕೂಡ ತಮಿಳುನಾಡಿನ ಪ್ರಜ್ಞಾವಂತರು ದಿ. ಕಾಮರಾಜರನ್ನು ಮೌಲ್ಯಾಧಾರಿತ ರಾಜಕಾರಣದ ಮೇರುಪುರುಷ ಎಂದೇ ಭಾವಿಸುತ್ತಾರೆ.

ಸ್ವಾತಂತ್ರ್ಯದ ಆರಂಭದಲ್ಲಿ ಜನಪರ ಚಿಂತನೆಯಿದ್ದ ಕಾಂಗ್ರೆಸಿಗರನ್ನೆಲ್ಲಾ ಮೂಲೆಗುಂಪು ಮಾಡುತ್ತಿದ್ದ ದಿ. ನೆಹರೂ ಎದುರೇ ಮಹಾನಾಯಕನಾಗಿ ಬೆಳೆದವರು ದಿ. ಕಾಮರಾಜರು. ಕೇಂದ್ರ ಸಚಿವರಾಗಿದ್ದ ದಿ. ಕಾಮರಾಜರಿಗೆ ತಮಿಳುನಾಡಿನ ಉದ್ಧಾರದ ತುಡಿತವಿತ್ತು. ಕಾಂಗ್ರೆಸಿನ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ದಿ. ಕಾಮರಾಜರು ನಂತರ ತಮಿಳುನಾಡಿನ ಮುಖ್ಯಮಂತ್ರಿಯೂ ಆದರು. ಆದರೆ ದಿ. ಕಾಮರಾಜರಿಗೆ ದಿನೇದಿನೇ ಕಾಂಗ್ರೆಸ್ ಕುಸಿಯುತ್ತಿದೆ ಎನಿಸಲಾರಂಭಿಸಿತು. ದೇಶದ ಸ್ವಾತಂತ್ರ್ಯದ ಕನಸು ಕಂಡ ನಾಯಕರೆಲ್ಲ ಅಧಿಕಾರ ಮದದಲ್ಲಿ ಸೋಮಾರಿಗಳಾಗುತ್ತಿದ್ದಾರೆ, ಜನಪ್ರೀತಿಯನ್ನು ಕಳೆದುಕೊಳ್ಳುತ್ತಿದ್ದಾರೆ ಎನಿಸಲಾರಂಭಿಸಿತು.



ಹಾಗೆನಿಸಿದ್ದೇ ತಡ 1963ರ ಗಾಂಧಿ ಜಯಂತಿಯಂದು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಿ ದೇಶದ ಸಮಸ್ತ ಕಾಂಗ್ರೆಸಿಗರಿಗೆ 'ಅಧಿಕಾರವನ್ನು ತ್ಯಜಿಸಿ, ಜನರ ಬಳಿ ನಡೆಯಿರಿ' ಎಂದು ಕರೆ ಕೊಟ್ಟರು.

ದಿ. ಕಾಮರಾಜರ ಕರೆಗೆ ಆರು ಜನ ಕೇಂದ್ರ ಸಚಿವರು ಮತ್ತು ಆರು ಜನ ಮುಖ್ಯಮಂತ್ರಿಗಳು ರಾಜೀನಾಮೆ ಕೊಟ್ಟು ಜನಸೇವೆಗಿಳಿದರು. ಇವೆಲ್ಲವನ್ನೂ ದಿ. ಕಾಮರಾಜರು ದಿ. ನೆಹರೂ ಇಚ್ಛೆಗೆ ವಿರುದ್ಧವಾಗಿ ಮಾಡಿದ್ದರು. ಆ ಹೆಮ್ಮೆ ಇಂದಿಗೂ ತಮಿಳರಿಗಿದೆ. ನಂತರ ಕಾಮರಾಜರು ತಮಿಳುನಾಡಿನಲ್ಲಿ ಮೋಡಿ ಮಾಡಿದರು. ಅದು ದೇಶದಲ್ಲಿ 'ಕಾಮರಾಜ ಮಾದರಿ' ಎಂದೇ ಹೆಸರಾಯಿತು.

ದಿ. ಕಾಮರಾಜರ ನಂತರ ಕಾಂಗ್ರೆಸ್ ಕಾಮರಾಜ ಮಾದರಿಗೆ ಬೆನ್ನು ಹಾಕಿತು ಮತ್ತು ಮುಂದೆ ತಮಿಳುನಾಡಿನಲ್ಲಿ ಹೇಳಹೆಸರಿಲ್ಲದಂತೆ ನಾಶವೂ ಆಯಿತು. ತಮಿಳುನಾಡಿನಲ್ಲಿ ದಿ. ಕಾಮರಾಜರ ನಂತರ ಕಾಂಗ್ರೆಸ್ ಮತ್ತೆ ಎದ್ದೇಳಲೇ ಇಲ್ಲ. ಆದರೆ ತಮಿಳುನಾಡು ಮಾತ್ರ ದಿ. ಕಾಮರಾಜರನ್ನು ಮರೆಯಲಿಲ್ಲ. ಮುಂದೆ ದ್ರಾವಿಡ ಪಕ್ಷಗಳು ದಿ. ಕಾಮರಾಜರ ಹೆಸರನ್ನು ಮುಂದಿಟ್ಟುಕೊಂಡೇ ಅಧಿಕಾರಕ್ಕೆ ಬಂದರೂ ಅವರ ಕನಸುಗಳನ್ನು ಈಡೇರಿಸಲಿಲ್ಲ. ಆದರೆ ತಮಿಳರು ಈ ಎರಡೂ ಪಕ್ಷಗಳಲ್ಲಿ ದಿ. ಕಾಮರಾಜರನ್ನು ಹುಡುಕಿದರು. ಹುಡುಕುತ್ತಲೇ ಇವೆರಡೂ ಪಕ್ಷಗಳನ್ನು ಸೋಲಿಸಿದರು. ಮತ್ತೆ ಮತ್ತೆ ಅವಕಾಶಗಳನ್ನು ನೀಡಿದರು. ಇಂಥ ಹೊತ್ತಲ್ಲಿ ದಿ. ಕಾಮರಾಜರ ಇಚ್ಛಾಶಕ್ತಿಯನ್ನು ತಮಿಳರು ಕಂಡಿದ್ದು ಐಪಿಎಸ್‌ಗೆ ರಾಜೀನಾಮೆ ನೀಡಿ ಬಂದ ಶ್ರೀ ಅಣ್ಣಾಮಲೈಯವರಲ್ಲಿ. ಸಾಮಾನ್ಯರಲ್ಲಿ ಸಾಮಾನ್ಯರಂತಿದ್ದ ದಿ. ಕಾಮರಾಜರನ್ನು ತಮಿಳರು ಕಂಡಿದ್ದು ಅಧಿಕಾರವನ್ನು ತ್ಯಜಿಸಿ ಬಂದ ಶ್ರೀ ಅಣ್ಣಾಮಲೈಯವರಲ್ಲಿ. ಅಲ್ಲದೆ ಶ್ರೀ ಅಣ್ಣಾಮಲೈ ಕೂಡ ಯಾವ ಮುಲಾಜೂ ಇಲ್ಲದೆ 'ರಾಜಕಾರಣದಲ್ಲಿ ನನಗೆ ಪ್ರೇರಣೆ ಕಾಮರಾಜರ್' ಎಂದೇ ಹೇಳತೊಡಗಿದರು. ಹೀಗೆನ್ನಲೂ ಒಂದು ತಾಕತ್ತು ಮತ್ತು ವೈಶಾಲ್ಯ ಮನೋಭಾವ ಬೇಕು! ಅಂಥ ನಾಯಕನನ್ನು ತಮಿಳುನಾಡು ಹಲವು ದಶಕಗಳಿಂದ ಕಾಯುತ್ತಲೇ ಇತ್ತು.

ರಾಷ್ಟ್ರೀಯ ಪಕ್ಷಗಳನ್ನು ದೂರವಿಡಲು ದ್ರಾವಿಡ ಪಕ್ಷಗಳು ತಮಿಳುನಾಡಿನ ಬಗ್ಗೆ ಅನೇಕ ಭ್ರಮೆಗಳನ್ನು ಹುಟ್ಟುಹಾಕಿವೆ. ಆದರೆ ವಾಸ್ತವವಾಗಿ ಈ ದ್ರಾವಿಡ ಪಕ್ಷಗಳು ಪಕ್ಕಾ ಪೆರಿಯಾರ್ ನೀತಿಗಳನ್ನೇನೂ ತಮಿಳುನಾಡಿನಲ್ಲಿ ಜಾರಿಗೆ ತಂದಿಲ್ಲ, ಅದು ಸಾಧ್ಯವೂ ಇಲ್ಲ. ಆಧ್ಯಾತ್ಮಿಕತೆ ಗಟ್ಟಿಯಾಗಿರುವ ತಮಿಳು ನೆಲದ ಜನ ಜೀವನಕ್ಕೂ ಪೆರಿಯಾರ್ ಸಿದ್ಧಾಂತಗಳಿಗೂ ವೈರುಧ್ಯವಿದೆ. ಜೊತೆಗೆ ಪೆರಿಯಾರ್ ಸಿದ್ಧಾಂತದ ಸಡಿಲತೆಯನ್ನು ಎತ್ತಿತೋರಿಸಬಲ್ಲಂತಹ ನಾಯಕತ್ವದ ಕೊರತೆ ಅಂಥ ಭ್ರಮೆಯನ್ನು ದಶಕಗಳ ಕಾಲ ಕಾಪಿಟ್ಟಿದೆ.

ಹಲವು ವರ್ಷಗಳ ಕಾಲ ದಿ. ಜಯಲಲಿತಾ ಬೆಂಬಲಕ್ಕೆ ನಿಂತ ಬಿಜೆಪಿ ತಮಿಳುನಾಡಿನಲ್ಲಿ ನಡೆಯಲೇಬೇಕಾಗಿದ್ದ ಅನೇಕ ಹೋರಾಟಗಳಿಗೆ ಬಾಗಿಲನ್ನೇ ಹಾಕಿಬಿಟ್ಟಿತ್ತು ಅಥವಾ ದ್ರಾವಿಡ ಪಕ್ಷಗಳ ವಿಕ್ಷಿಪ್ತತೆಯನ್ನು ಸಮರ್ಥವಾಗಿ ಎತ್ತಿ ತೋರಿಸಿ ಅಸಲಿ ತಮಿಳುತನವೆಂದರೆ ಇದು ಎನ್ನುವ ನಾಯಕನ ಕೊರತೆಯೂ ಇತ್ತು. ಆ ಕೊರತೆಯನ್ನು ತುಂಬಬಲ್ಲ ಎಂಜಿನಿಯರ್ ಬುದ್ಧಿಯ, ಐಐಎಂ ಚತುರತೆಯ, ಯೋಧನ ಧೈರ್ಯದ ಮತ್ತು ಕರ್ಮವನ್ನಷ್ಟೇ ಮಾಡುವ, ಫಲವನ್ನು ಅಪೇಕ್ಷಿಸಲಾರೆ ಎನ್ನುವ ಸಮಚಿತ್ತದ ನಾಯಕನೊಬ್ಬನ ಅನಿವಾರ್ಯತೆ ತಮಿಳು ನೆಲಕ್ಕಿದ್ದೇ ಇತ್ತು. ಅದನ್ನು ತುಂಬಿದವರು ಶ್ರೀ ಕುಪ್ಪುಸ್ವಾಮಿ ಅಣ್ಣಾಮಲೈ.

ಪರಿಶುದ್ಧ ಹೃದಯದಿಂದ ಜನರ ಬಳಿ ಸಾಗುವ, ಪ್ರಾಮಾಣಿಕ ಮನಸ್ಸಿನ, ಲೋಕದ ನೋವನ್ನು ತನ್ನ ನೋವೆಂದುಕೊಳ್ಳುವ ವ್ಯಕ್ತಿತ್ವಕ್ಕೆ ನಾಟಕ ಮಾಡಬೇಕಾದ ಆವಶ್ಯಕತೆ ಇರುವುದಿಲ್ಲ. 'ನೀನು ಯಾರೆಂದು ಹುಡುಕು' ಎಂದ ರಮಣರ ಅನುಯಾಯಿ ಮಾತ್ರ 'ನಾನೇ ಸಮಾಜ' ಎಂದುಕೊಳ್ಳಬಲ್ಲ! ತಿರುವಣ್ಣಾಮಲೈಯ ಅರುಣಾಚಲ ಬೆಟ್ಟದ ಸುತ್ತ 'ಗಿರಿವಲಂ' ಗೈಯುವ ಮನುಷ್ಯ ಮಾತ್ರ ಇಂಥದ್ದೊಂದು ಸ್ಥಿತಿಯನ್ನು ತಲುಪಬಲ್ಲ. ಆ ಸ್ಥಿತಿಗೆ ತಲುಪಿದವನಿಗೆ ಫಲಿತಾಂಶಗಳ ಹಂಗಿಲ್ಲ. ಅದರ ಬಗೆಗಿನ ಆಲೋಚನೆಯೂ ಇಲ್ಲ. ವ್ಯಕ್ತಿತ್ವದ ಶುದ್ಧತೆ ನಿತ್ಯ ನಡೆಯಬೇಕಾದ ಕರ್ಮ ಎನ್ನುವವನು ಮಾತ್ರ ಹೀಗೆ ಜನರನ್ನು ಹಚ್ಚಿಕೊಳ್ಳಬಲ್ಲ. ಜನರನ್ನು ಹಚ್ಚಿಕೊಳ್ಳದೆ ಸಮಾಜವನ್ನು, ದೇಶವನ್ನು ಹಚ್ಚಿಕೊಳ್ಳುವುದು ಸಾಧ್ಯವಿಲ್ಲ ಎಂಬುದು ಮೂಲತಃ ಅಧ್ಯಾತ್ಮದ ಸ್ಥಿತಿ.

ಆ ಸ್ಥಿತಿ ಭಾರತೀಯ ರಾಜಕಾರಣದಲ್ಲಿ ಕಂಡುಬರುವುದು ಪ್ರಧಾನಿ ಶ್ರೀ ಮೋದಿಯವರನ್ನು ಬಿಟ್ಟರೆ ಶ್ರೀ ಅಣ್ಣಾಮಲೈಯವರಲ್ಲಿ ಮಾತ್ರ. ಹೀಗೆ ಹಲವು ಕಾರಣಗಳಿಂದ ಶ್ರೀ ಅಣ್ಣಾಮಲೈ ಆಧುನಿಕ ರಾಜಕಾರಣದಲ್ಲಿ ವಿಶೇಷವೆನಿಸುತ್ತಾರೆ. ಅಂದು ದಿ. ಕಾಮರಾಜ ಮಾದರಿ ಹೇಗೆ ದೇಶಕ್ಕೆ ಅನಿವಾರ್ಯವಾಗಿತ್ತೋ ಇಂದು ಮತ್ತು ಮುಂದಕ್ಕೂ ಶ್ರೀ ಅಣ್ಣಾಮಲೈ ಮಾದರಿಯ ಅವಶ್ಯಕತೆ ರಾಜಕಾರಣಕ್ಕಿದೆ. ಆ ಮಾದರಿಗೆ ಜಯಾಪಜಯಗಳ ಹಂಗಿಲ್ಲ, ಯಾರಿಗೋ ಬಕೆಟ್ ಹಿಡಿಯಬೇಕಾದ ದರ್ದಿಲ್ಲ, ಮಾರುವೇಷಕ್ಕೆ ಮಾರುಹೋಗುವ ಅಗತ್ಯವಿಲ್ಲ, ಉಗ್ರ ಭಾಷಣಕಾರನಾಗಬೇಕೆಂಬ ನಿಯಮವೂ ಇಲ್ಲ. ಪಂ. ದೀನದಯಾಳರೆಂದಂತೆ ಅನ್ನವನ್ನು ಯೋಗ್ಯರೀತಿಯಲ್ಲಿ ಹೇಗೆ ಬೇಯಿಸಬೇಕೋ ಹಾಗೆ ಬೇಯಿಸಿದರೂ ಅದು ಅಣ್ಣಾಮಲೈ ಮಾದರಿಯೇ ಆಗುತ್ತದೆ. ಅದು ಲೋಕಹಿತದ ರಾಜಮಾರ್ಗ ಆಗುತ್ತದೆ. ಇದನ್ನು ಯುವ ರಾಜಕಾರಣಿಗಳು ಅರ್ಥ ಮಾಡಿಕೊಂಡಷ್ಟು ಅವರಿಗೆ ಒಳ್ಳೆಯದು. ಹಿರಿಯ ರಾಜಕಾರಣಿಗಳು ಅರ್ಥ ಮಾಡಿಕೊಂಡಷ್ಟು ದೇಶಕ್ಕೂ ಒಳ್ಳೆಯದು.



## 77ನೇ

# ಸ್ವಾತಂತ್ರ್ಯ ದಿನಾಚರಣೆ

### ಸತತ 10ನೇ ಬಾರಿ ಪ್ರಧಾನಿ ಶ್ರೀ ನರೇಂದ್ರ ಮೋದಿ ಧ್ವಜಾರೋಹಣ

> “ಇಂದು ಭಾರತ ಜಿ-20 ಶೃಂಗಸಭೆಯ ಅಧ್ಯಕ್ಷತೆ ವಹಿಸುವ ಅವಕಾಶ ಪಡೆದಿದೆ. ಭಾರತದ ಸಾಮರ್ಥ್ಯ-ಸಾಧ್ಯತೆಗಳು ನಂಬಿಕೆಯ ಹೊಸ ಶೃಂಗವನ್ನು ಮುಟ್ಟಲಿವೆ ಎಂಬುದು ಖಚಿತ. ಈ ಹೊಸ ನಂಬಿಕೆ ಹೊಸ ಸಾಮರ್ಥ್ಯದೊಂದಿಗೆ ಎತ್ತರೆತ್ತರಕ್ಕೆ ಬೆಳವಣಿಗೆ ಕಾಣಲಿದೆ. ಈವರೆಗೆ ಜಿ-20ಯ ನಾನಾ ಸಮಾವೇಶ-ಕಾರ್ಯಕ್ರಮ ಕಾಶ್ಮೀರ, ಗೋವಾ, ಕೋಲ್ಕತ್ತ, ಹಂಪಿ ಸೇರಿದಂತೆ ಭಾರತದ ವಿವಿಧ ಪ್ರವಾಸಿ ಆಕರ್ಷಣೆಯ ತಾಣಗಳಲ್ಲಿ ನಡೆದು ಭಾರತದ ಸಾಮಾನ್ಯ ಜನರ ಸಾಮರ್ಥ್ಯ ಮತ್ತು ವೈವಿಧ್ಯವನ್ನು ಜಗತ್ತಿಗೆ ತೋರಿಸಿದೆ.”
>
> -ಪ್ರಧಾನಿ ನರೇಂದ್ರ ಮೋದಿ

**77**ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ ಶುಭ ಸಂಭ್ರಮಕ್ಕೆ, ದೆಹಲಿಯ ಐತಿಹಾಸಿಕ ಕೆಂಪು ಕೋಟೆ ಮೇಲೆ ತ್ರಿವರ್ಣ ಧ್ವಜಾರೋಹಣ ಮಾಡುವ ಮೂಲಕ ಚಾಲನೆ ನೀಡಿದ ಪ್ರಧಾನಿ ಶ್ರೀ ನರೇಂದ್ರ ಮೋದಿ, ದೇಶದ ಜನರನ್ನುದ್ದೇಶಿಸಿ ಸುದೀರ್ಘವಾದ ಭಾಷಣ ಮಾಡಿದರು.

ಭಾರತದ ಭವಿಷ್ಯದ ಕುರಿತು ಪ್ರಮುಖ ಸಂಗತಿಗಳ ಮೇಲೆ ಬೆಳಕು ಚೆಲ್ಲಿದರಲ್ಲದೇ, ಜನರ ಆಶೀರ್ವಾದವಿದ್ದರೆ ಮುಂದಿನ ವರ್ಷವೂ  ಇದೇ ಕೆಂಪು ಕೋಟೆಯ ಮೇಲೆ ಮರಳಿ ತ್ರಿವರ್ಣ ಧ್ವಜವನ್ನು ಆರೋಹಣ ಮಾಡುತ್ತೇನೆ ಎಂದು ಘೋಷಿಸಿದರು.

ಸಾಂಪ್ರದಾಯಿಕ ಕೌಶಲ ಇರುವವರಿಗೆ ನೆರವಾಗಲು ಸೆಪ್ಟೆಂಬರ್‌ನಲ್ಲಿ 15,000 ಕೋ.ರೂ. ವೆಚ್ಚದಲ್ಲಿ ‘ವಿಶ್ವಕರ್ಮ’ ಎಂಬ ಯೋಜನೆಯನ್ನು ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಆರಂಭಿಸಲಿದೆ ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ಘೋಷಿಸಿದರು. ಭಾರತದ ಮುಂದಿರುವ ಬೃಹತ್ ಅವಕಾಶಗಳ ಕುರಿತು ಮಾತನಾಡುತ್ತಲೇ ರಾಜಕೀಯ ಪ್ರತಿಸ್ಪರ್ಧಿಗಳ ವಿರುದ್ಧ ವಾಗ್ದಾಳಿ ನಡೆಸಿದರು.

ಪ್ರಸ್ತುತ ಮಣಿಪುರದಲ್ಲಿನ ದುಸ್ಥಿತಿ ಹಾಗೂ ಮಣಿಪುರದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯದ ಬಗ್ಗೆ ಕಳವಳ ವ್ಯಕ್ತಪಡಿಸುತ್ತಲೇ ಮಾತು ಆರಂಭಿಸಿದ ಪ್ರಧಾನಿ ಶ್ರೀ ಮೋದಿ , ಈಗ ನಿಧಾನವಾಗಿ ಈಶಾನ್ಯ ರಾಜ್ಯ ಶಾಂತಿಯತ್ತ ಮರಳುತ್ತಿದೆ. ಮಣಿಪುರ ರಾಜ್ಯ, ಅಲ್ಲಿನ ಜನರೊಂದಿಗೆ ಭಾರತ ದೃಢವಾಗಿ ನಿಂತಿದೆ ಎಂಬುದನ್ನು ಪುನರುಚ್ಚರಿಸಿದರು.

ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ, ಜನಸಂಖ್ಯೆ ದೃಷ್ಟಿಯಿಂದ ಮುಂಚೂಣಿ ದೇಶ ಭಾರತ. ಇಷ್ಟು ದೊಡ್ಡ ದೇಶದ, ನನ್ನ ಕುಟುಂಬದ 140 ಕೋಟಿ ಸದಸ್ಯರು ಸ್ವಾತಂತ್ರ್ಯ ದಿನವನ್ನು ಬಲು ಸಂಭ್ರಮದಿಂದ ಆಚರಿಸುತ್ತಿದ್ದಾರೆ. ಸುಧಾರಣೆ- ಸಾಧನೆ-ಪರಿವರ್ತನೆ ಭಾರತವನ್ನು ಬದಲಿಸುತ್ತಿವೆ. 2014ರಲ್ಲಿ ನಾವು ಅಧಿಕಾರಕ್ಕೆ ಬಂದಾಗ ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ 10ನೇ ಸ್ಥಾನದಲ್ಲಿದ್ದೆವು. ಈಗ 140 ಕೋಟಿ ಭಾರತೀಯರ ಪರಿಶ್ರಮದ ಫಲವಾಗಿ 5ನೇ ಸ್ಥಾನಕ್ಕೇರಿದ್ದೇವೆ. ಇದೇನೂ ಸರಳ-ಸರಾಗವಾಗಿ ಸಾಧ್ಯವಾಗಿಲ್ಲ, ದೇಶವನ್ನು ಕಪಿಮುಷ್ಠಿಯಲ್ಲಿ ಹಿಡಿದುಕೊಂಡಿದ್ದ ಭ್ರಷ್ಟಾಚಾರ ಎಂಬ ರಾಕ್ಷಸನನ್ನು ಹೊಡೆದೋಡಿಸಿದ್ದರಿಂದ ಸಾಧ್ಯವಾಗಿದೆ. ದೇಶದಲ್ಲಿನ ಆರ್ಥಿಕ ಸೋರಿಕೆಯನ್ನು ನಿಲ್ಲಿಸಿದ್ದೇವೆ, ಬಲಿಷ್ಠ ಆರ್ಥಿಕತೆ ರೂಪಿಸಿದ್ದೇವೆ ಎಂದು ಪ್ರಧಾನಿ ಶ್ರೀ ಮೋದಿ ಹೆಮ್ಮೆಯಿಂದ ಹೇಳಿದರು.



**2024 ಆಗಸ್ಟ್ 15ಕ್ಕೆ ಭಾರತದ 10 ವರ್ಷಗಳ ಪ್ರಗತಿ ಚಿತ್ರಣ ನೀಡುವೆ.**

**ಸದ್ಯದಲ್ಲೇ 6ಜಿ ಸೇವೆ ದೇಶದಲ್ಲಿ ಜಾರಿಗೆ ಬರಲಿದೆ, ಸಿದ್ಧತೆ ನಡೆದಿದೆ.**

**ಭಾರತ ಕೋವಿಡ್ ಕಾಲದಲ್ಲಿ ನೆರವಾದ ರೀತಿಗೆ ಈಗ ‘ವಿಶ್ವ ಮಿತ್ರ’.**

**2047ಕ್ಕೆ ಭಾರತ ‘ಅಭಿವೃದ್ಧಿ ಹೊಂದಿದ ದೇಶ’ವಾಗುವುದು ಖಚಿತ.**

### ಪರಿವಾರ್ ಜನ್

ಪ್ರಧಾನಿ ಮೋದಿ ಮಾತಿನ ಶೈಲಿಗೆ ಹೊಸದಾಗಿ ‘ಪರಿವಾರ್ ಜನ್’(ಕುಟುಂಬ ಸದಸ್ಯರು) ಸೇರಿಕೊಂಡಿದೆ. 140 ಕೋಟಿ ಭಾರತೀಯ ಪ್ರಜೆಗಳನ್ನು **‘ಪರಿವಾರ್ ಜನ್’** ಎಂದು ಪ್ರಧಾನಿ ಶ್ರೀ ಮೋದಿ ಅವರು ಪದೇ ಪದೇ ಸಂಬೋಧಿಸಿದರು. ಹಿಂದೆಲ್ಲ ಭಾಷಣಗಳಲ್ಲಿ ಪ್ರಧಾನಿ, ದೇಶದ ಜನರನ್ನು ‘ಮೇರೆ ಪ್ಯಾರೆ ದೇಶ್ ವಾಸಿಯೋ’(ನನ್ನ ಪ್ರೀತಿಯ ದೇಶವಾಸಿಗಳೇ) ಎಂದೋ, ‘ಬಾಯಿಯೊ ಔರ್ ಬೆಹೆನೊ’ (ಪ್ರೀತಿಯ ಸೋದರ ಸೋದರಿಯರೆ) ಎಂದೋ ಸಂಬೋಧಿಸುತ್ತಿದ್ದರು.

# ದೇಶ ವಿಭಜಕರಿಂದ 'ಭಾರತ್ ಜೋಡೋ' ಯಾತ್ರೆ



**ಸ್ವಾ**ತಂತ್ರ್ಯ ಬಂದಾಗ ದೇಶ ವಿಭಜಿಸಿದವರು ಈಗ 'ಭಾರತ್ ಜೋಡೋ' ಹೆಸರಿನಲ್ಲಿ ಯಾತ್ರೆ ಮಾಡುತ್ತಿರುವುದು ವಿಪರ್ಯಾಸ ಎಂದು ಮಾಜಿ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಹೇಳಿದರು. ಸ್ವಾತಂತ್ರ್ಯೋತ್ಸವದ ಅಂಗವಾಗಿ ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಆಯೋಜಿಸಿದ್ದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ, ಬ್ರಿಟಿಷರು ಭಾರತವನ್ನು ವಿಭಜಿಸಿದರು, ಕಾಂಗ್ರೆಸ್‌ನವರು ಅಧಿಕಾರದ ಆಸೆಗೆ ದೇಶ ವಿಭಜನೆಗೆ ಒಪ್ಪಿಕೊಂಡರು. 'ಭಾರತ್ ಥೋಡೋ' ಅಂದಿನಿಂದಲೇ ಆರಂಭವಾಗಿತ್ತು. ಜಮ್ಮು-ಕಾಶ್ಮೀರ ವಿಚಾರದಲ್ಲೂ ವಿಭಜನೆ ನೀತಿ ಅನುಸರಿಸಿದರು. ಅಂಥವರು ಈಗ 'ಭಾರತ್ ಜೋಡೋ' ಯಾತ್ರೆ ಮಾಡುತ್ತಿದ್ದಾರೆ. ಇದಕ್ಕಿಂತ ದೊಡ್ಡ ವಿಪರ್ಯಾಸ ಇನ್ನೇನಿದೆ ಎಂದು ಪ್ರಶ್ನಿಸಿದರು.

ಭಾರತ ವಿಭಜನೆಯ ಸಂದರ್ಭದಲ್ಲಿ ಲಕ್ಷಾಂತರ ಜನರು ಪ್ರಾಣ ಕಳೆದುಕೊಂಡರು. ಅನೇಕ ಮಕ್ಕಳು ಅನಾಥರಾದರು. ಇಡೀ ಜಗತ್ತಿನಲ್ಲಿ ಇಂತಹ ಅತ್ಯಂತ ಕರಾಳ ಇತಿಹಾಸ ಬೇರೆ ಯಾವ ದೇಶದಲ್ಲಿಯೂ ಇಲ್ಲ. ಒಂದೇ ದಿನ ಸ್ವಾತಂತ್ರ್ಯ ಮತ್ತು ಒಂದೇ ದಿನ ವಿಭಜನೆ ಯಾವ ದೇಶದಲ್ಲಿಯೂ ಆಗಿಲ್ಲ, ಇದಕ್ಕೆಲ್ಲಾ ಕಾಂಗ್ರೆಸ್ಸೇ ಕಾರಣ ಎಂದು ಹೇಳಿದರು. ಸ್ವಾತಂತ್ರ್ಯ ಭಾರತದ ಇತಿಹಾಸದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಸಮರ್ಥ ನಾಯಕತ್ವದಲ್ಲಿ 9 ವರ್ಷಗಳಿಂದ ಸಕಾರಾತ್ಮಕ ಆಡಳಿತ ನೀಡುತ್ತಿದ್ದು, ಕಾಶ್ಮೀರದಲ್ಲಿ 370ನೇ ವಿಧಿ ರದ್ದು ಮಾಡಿದ್ದಾರೆ. ವಿಜ್ಞಾನ ತಂತ್ರಜ್ಞಾನ ಸೇರದಂತೆ ಎಲ್ಲಾ ರಂಗದಲ್ಲಿಯೂ ಅಭಿವೃದ್ಧಿ ಮಾಡಿದ್ದಾರೆ. ಪ್ರಧಾನಿ ಶ್ರೀ ಮೋದಿ ಅವರ ನಾಯಕತ್ವವನ್ನು ನಮ್ಮ ವಿರೋಧಿ ದೇಶಗಳೇ ಮೆಚ್ಚಿಕೊಳ್ಳುತ್ತಿವೆ. ಆದರೆ, ನಮ್ಮ ದೇಶದ ಕೆಲವು ನಾಯಕರು ವಿದೇಶಗಳಲ್ಲಿ ಹೋಗಿ ಭಾರತವನ್ನು ದ್ವೇಷಿಸುವ ಕೆಲಸ ಮಾಡಿದ್ದಾರೆ, ಭಾರತದಲ್ಲಿ ಅಲ್ಪಸಂಖ್ಯಾತರು ಸುರಕ್ಷಿತರಾಗಿಲ್ಲ ಎಂದು ಹೇಳುತ್ತಾರೆ. ಆದರೆ, ಮುಸ್ಲಿಮರೇ ಬಹುಸಂಖ್ಯಾತರಾಗಿರುವ ದೇಶಗಳಲ್ಲಿ ಅವರ ಪರಸ್ಥಿತಿ ಏನಿದೆ ಎನ್ನುವುದನ್ನು ನೋಡಬೇಕು. ಸಮರ್ಥ ಭಾರತ ನಿರ್ಮಾಣ ಮಾಡುವ ಪ್ರಯತ್ನ ಒಂದೆಡೆ ನಡೆಯುತ್ತಿದ್ದರೆ, ಇನ್ನೊಂದೆಡೆ ಇಸ್ಲಾಂ ರಾಷ್ಟ್ರ ಮಾಡುವ ಪ್ರಯತ್ನ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ



ಎಲ್ಲ ಧರ್ಮಗಳು ಸಂಘರ್ಷದಿಂದ ಹುಟ್ಟಿಕೊಂಡಿವೆ. ಆದರೆ, ಹಿಂದೂ ಧರ್ಮ ಮಾತ್ರ ಸಂಸ್ಕಾರದಿಂದ ಹುಟ್ಟಿಕೊಂಡಿದೆ. ಇಂತಹ ಹಿಂದೂ ಧರ್ಮದ ವಿರುದ್ಧವೇ ಷಡ್ಯಂತ್ರಗಳು ನಡೆಯುತ್ತಿರುವುದು ಆತಂಕದ ಸಂಗತಿ. ಇಂತಹ ಹುನ್ನಾರಗಳ ವಿರುದ್ಧ ಸಂಘಟಿತರಾಗಬೇಕು.

**– ಬಸವರಾಜ ಬೊಮ್ಮಾಯಿ,**
**ಮಾಜಿ ಮುಖ್ಯಮಂತ್ರಿಗಳು**

ಭಾರತಕ್ಕೆ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನಾಯಕತ್ವದ ಅಗತ್ಯವಿದೆ. ಅವರ ಜತೆಗೆ ನಾವೂ ದೇಶದ ಭವಿಷ್ಯಕ್ಕಾಗಿ ಸಂಕಲ್ಪ ಮಾಡಬೇಕು ಎಂದು ಹೇಳಿದರು.

### ಕಾಂಗ್ರೆಸ್‌ನಲ್ಲಿರುವವರೇನು ಸತ್ಯ ಹರಿಶ್ಚಂದ್ರರಾ?

ಬಿಜೆಪಿಗೆ ಮತ ಹಾಕುವವರು ರಾಕ್ಷಸರು ಎಂಬ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಶ್ರೀ ರಣದೀಪ್‌ಸಿಂಗ್ ಸುರ್ಜೇವಾಲ ಅವರ ಹೇಳಿಕೆ ಖಂಡನೀಯ. ದೇಶದ ನಾಗರಿಕರಿಗೆ ಮಾಡಿದ ಈ ಅವಮಾನವನ್ನು ಖಂಡಿಸಬೇಕು. ಕಾಂಗ್ರೆಸ್ ಏನು ಸ್ವಚ್ಛವಾಗಿ ತೊಳೆದ ಮುತ್ತೇ? ಅಲ್ಲಿ ಎಲ್ಲರೂ ಸತ್ಯ ಹರಿಶ್ಚಂದ್ರರೇ? ಕಳೆದ 75 ವರ್ಷದ ಸ್ಥಿತಿಗತಿಯನ್ನು ಪರಿಶೀಲಿಸಿದರೆ ಅತ್ಯಂತ ಭ್ರಷ್ಟ, ಜನವಿರೋಧಿ ಸರಕಾರಗಳನ್ನು ನಾವು ನೋಡಿದ್ದೇವೆ. ವಿಚಿತ್ರ ಎಂದರೆ ಅವೆಲ್ಲವೂ ಕಾಂಗ್ರೆಸ್ ಸರ್ಕಾರಗಳೇ. ಎಷ್ಟು ಜನ ಕಾಂಗ್ರೆಸ್ ನಾಯಕರು ಜೈಲಿನಲ್ಲಿದ್ದಾರೆ? ಅವರ ವಿರುದ್ಧ ಎಷ್ಟು ಕೇಸುಗಳಿವೆ? ಬಿಜೆಪಿ ವಿರುದ್ಧ ಈ ರೀತಿಯ ಹೇಳಿಕೆ ನೀಡಲು ಇವರಿಗೆ ನಾಚಿಕೆ ಆಗಬೇಕು. ಇದು ಅಮಾನವೀಯ, ಅಸಾಂವಿಧಾನಿಕ ಮತ್ತು ಅಕ್ಷಮ್ಯ ಅಪರಾಧ ಎಂದು ಕಿಡಿಕಾರಿದರು.

**ನಮ್ಮ ಇತಿಹಾಸದಲ್ಲಿನ ಅನೇಕ ಅನಾಮಧೇಯ ಸ್ವಾತಂತ್ರ್ಯ ಹೋರಾಟಗಾರರು**

- ಕಿತ್ತೂರು ರಾಣಿ ಚೆನ್ನಮ್ಮ, ರಾಯಣ್ಣ, ಬಾಲ ಗಂಗಾಧರ ತಿಲಕ್, ಭಗತ್ ಸಿಂಗ್, ರಾಜಗುರು ಇವರೆಲ್ಲರೂ ಯಾವ ಪಕ್ಷಕ್ಕೂ ಸೇರಿದವರಲ್ಲ.
- ಸುಭಾಷ್ ಚಂದ್ರ ಬೋಸ್ ಕಾಂಗ್ರೆಸ್‌ನವರಾಗಿದ್ದರೂ ಪಕ್ಷ ತೊರೆದು ಹೋರಾಟ ನಡೆಸಿದರು.
- ಅವರಂತೆ ಅನೇಕ ಅನಾಮಧೇಯರಿದ್ದು, ಇತಿಹಾಸದ ಸತ್ಯವನ್ನು ಹೇಳಲು ಮುಂದೆ ಬಂದಿಲ್ಲ.

ಬಿಜೆಪಿ ರಾಜ್ಯಾಧ್ಯಕ್ಷ ಶ್ರೀ ನಳಿನ್ ಕುಮಾರ್ ಕಟೀಲ್ ಅವರು ಧ್ವಜಾರೋಹಣ ನೆರವೇರಿಸಿದರು. ಮಾಜಿ ಸಚಿವರಾದ ಶ್ರೀ ಗೋವಿಂದ ಕಾರಜೋಳ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎನ್. ರವಿಕುಮಾರ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೇಶವ ಪ್ರಸಾದ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸಿದ್ದರಾಜು ಹಾಗೂ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## 'ಮಾಸದ ಮಾಧುರ್ಯ' 77ನೇ ಕಾರ್ಯಕ್ರಮದಲ್ಲಿ 'ಹಾಸ್ಯೋಲ್ಲಾಸ'





ಇಂದಿನ ಕೆಲಸದ ಸಾರ್ಥಕತೆಯೇ ನಾಳಿನ ಸುಂದರ ನೆನಪು. ವರ್ತಮಾನದ ಸಾಫಲ್ಯದ ಬದುಕು ಭವಿಷ್ಯದ ಬೆಳಕು. ಇಂದಿನ ಸಮಾಜಿಕ ಜೀವನದಲ್ಲಿ, ಸಂಸಾರದಲ್ಲಿ ಜೀವನೋತ್ಸಾಹ, ನಗು, ಆನಂದ, ಪರಸ್ಪರ ಪ್ರೀತಿ, ವಿಶ್ವಾಸ ಕಡಿಮೆಯಾಗುತ್ತಿದೆ. ಈ ಬಲೆಯಿಂದ ಆದಷ್ಟು ಹೊರಗೆ ಬರುವ ಪ್ರಯತ್ನಕ್ಕೆ 'ಜಗನ್ನಾಥ ಬಳಗ' ಪ್ರತಿ ತಿಂಗಳ ಮೊದಲ ಭಾನುವಾರ 'ಮಾಸದ ಮಾಧುರ್ಯ' ಕಾರ್ಯಕ್ರಮದ ಮುಖಾಂತರ ಒಂದು ಕಿರು ಪ್ರಯತ್ನ ಮಾಡುತ್ತಾ ಬಂದಿದೆ.

ದಿ. 03-09-2023ರಂದು ಕನ್ನಡ ನಾಡಿನ ಇಬ್ಬರು ಬಹುಮುಖ ವ್ಯಕ್ತಿತ್ವವುಳ್ಳ ಕಲಾವಿದರಿಂದ 'ಹಾಸ್ಯೋಲ್ಲಾಸ' ಎಂಬ ಕಾರ್ಯಕ್ರಮವನ್ನು ಜಗನ್ನಾಥ ಭವನದಲ್ಲಿ ಆಯೋಜಿಸಲಾಗಿತ್ತು. ಶ್ರೀ ಎಂ.ಎಸ್. ನರಸಿಂಹ ಮೂರ್ತಿ ಹಾಗೂ ಶ್ರೀ ವೈ.ವಿ. ಗುಂಡೂರಾವ್ ಅವರು ಕಿಕ್ಕಿರಿದು ತುಂಬಿದ ಕಲಾಭಿಮಾನಿಗಳಿಗೆ ಹೊಟ್ಟೆತುಂಬಾ, ಹೃದಯತುಂಬಾ ನಗುವಿನ ನಳಪಾಕವನ್ನು ಬಡಿಸಿದರು. ನಮ್ಮ ಸುತ್ತ ಮುತ್ತ ನಡೆಯುವ ಘಟನೆಗಳೇ ಅವರ ಬಾಯಲ್ಲಿ ಬಂದಾಗ, ಅವನ್ನು ಕೇಳಿ ನಾವು ನಕ್ಕಾಗ ನಾವು ನಮಗೆ ವಂಚಿಸಿಕೊಳ್ಳುತ್ತಿದ್ದೇವೆ ಅನ್ನಿಸಿತು. ಉತ್ತಮ ಆರೋಗ್ಯಕ್ಕೆ ನಗು, ಆನಂದ, ಸಂತೋಷ ಬಹಳ ಮುಖ್ಯ ಎಂದು ಪ್ರತಿ ವೈದ್ಯರು ಹೇಳಿದರೂ ನಾವು ಕಿವುಡಾಗಿದ್ದೇವೆ. ಒಂದೂವರೆ ಘಂಟೆಗಳ ಕಾಲ ಕುಳಿತಲ್ಲಿಂದ ಏಳದೆ, ಚಪ್ಪಾಳೆ, ನಗುವಿನ ಸದ್ದು ನಿರಂತರ ಸಾಗಿತ್ತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎನ್. ರವಿಕುಮಾರ್ ಅವರು ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ 'ನಾವು ನಿತ್ಯದ ಬದುಕಿನಲ್ಲಿ ನಗುವುದನ್ನು ಮರೆಯುತ್ತಿದ್ದೇವೆ, ನಗು ಪ್ರತಿಯೊಬ್ಬನಿಗೂ ಬೇಕೇ ಬೇಕು. ಪ್ರಾಣಿ, ಪಕ್ಷಿಗಳು ಕೂಡ ನಗುತ್ತವೆ, ಸಂತೋಷ ಪಡುತ್ತವೆ' ಎಂದು ಹೇಳಿದರು. ಜಗನ್ನಾಥ ಬಳಗ ಪ್ರತಿ ತಿಂಗಳು ಒಳ್ಳೆಯ ಕಾರ್ಯಕ್ರಮವನ್ನು ಮಾಡುತ್ತ ಬಂದಿದೆ, ಇದಕ್ಕೆ ತಾವುಗಳು ಸಾಕ್ಷಿ ಎಂದು ಕಲಾಭಿಮಾನಿಗಳತ್ತ ನೋಡಿದಾಗ ಎಲ್ಲರೂ ಚಪ್ಪಾಳೆಯ ಮೂಲಕ ಅವರ ಮಾತನ್ನ ಪುಷ್ಟೀಕರಿಸಿದರು. ಅವರೊಂದಿಗೆ ರಾಜ್ಯ ಬಿಜೆಪಿ ಕಾರ್ಯದರ್ಶಿಗಳು ಹಾಗೂ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್. ಕೇಶವಪ್ರಸಾದ ಅವರು, ರಾಜ್ಯ ಕಾರ್ಯಾಲಯ ಕಾರ್ಯದರ್ಶಿ ಶ್ರೀ ಲೋಕೇಶ್ ಅಂಬೆಕಲ್ಲು ಹಾಗೂ ಜಗನ್ನಾಥ ಬಳಗದ ಸಂಚಾಲಕರಾದ ಶ್ರೀ ದತ್ತಗುರು ಹೆಗಡೆ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.





# ಚಂದ್ರಯಾನ – 3

## ‘ಶಿವಶಕ್ತಿ’





ಭಾರತದ ಬಾಹ್ಯಾಕಾಶ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಜುಲೈ 14, 2023 ಯಾವಾಗಲೂ ಸುವರ್ಣಾಕ್ಷರಗಳಲ್ಲಿ ಬರೆದಿಡುವ ದಿನ. ಚಂದ್ರಯಾನ-3 ಮಿಷನ್ ನಮ್ಮ ರಾಷ್ಟ್ರದ ಭರವಸೆಗಳು ಮತ್ತು ಕನಸುಗಳನ್ನು ಹೊತ್ತೊಯ್ದಿದೆ. ನಮ್ಮ ವಿಜ್ಞಾನಿಗಳಿಗೆ ಧನ್ಯವಾದಗಳು, ಚಂದ್ರಯಾನ -1 ನ್ನು ಜಾಗತಿಕ ಚಂದ್ರನ ಕಾರ್ಯಾಚರಣೆಗಳಲ್ಲಿ ಪಥ್ ಬ್ರೇಕರ್ ಎಂದು ಪರಿಗಣಿಸಲಾಗಿದೆ. ಏಕೆಂದರೆ ಇದು ಚಂದ್ರನ ಮೇಲೆ ನೀರಿನ ಅಣುಗಳ ಉಪಸ್ಥಿತಿಯನ್ನು ದೃಢಪಡಿಸಿದೆ.

-ನರೇಂದ್ರ ಮೋದಿ ಭಾರತದ ಪ್ರಧಾನಿ





**ಪ್ರೊ. ಶರ್ವಾಣಿ ಗೌಡ**
ಸದಸ್ಯರು, ಪ್ರಬುದ್ಧರ ಪ್ರಕೋಷ್ಠ – ಬಿಜೆಪಿ

ಜಾಗತಿಕ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ರಂಗದಲ್ಲಿ ಹೆಮ್ಮೆ ಪಡುವಂಥ ಮತ್ತೊಂದು ಮಹತ್ವಪೂರ್ಣ ಮೈಲುಗಲ್ಲು ದಾಖಲಾಗಿದ್ದು, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ)ಯ ಮಹತ್ವಾಕಾಂಕ್ಷಿ ಯೋಜನೆ 'ಚಂದ್ರಯಾನ-3' ಅನ್ನು ನಿಗದಿತ ಕಕ್ಷೆ ಸೇರಿಸುವಲ್ಲಿ ಭಾರತೀಯ ವಿಜ್ಞಾನಿಗಳು ಯಶಸ್ವಿಯಾಗಿದ್ದಾರೆ. ನೌಕೆ 14-07-2023ರಂದು ಮಧ್ಯಾಹ್ನ 2.35ಕ್ಕೆ ಆಂಧ್ರ ಪ್ರದೇಶದ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಡಾವಣೆಯಾಯಿತು. 3,900 ಕೆ.ಜಿ. ತೂಕದ ವಿಕ್ರಂ ಲ್ಯಾಂಡರ್ ಮತ್ತು ಪ್ರಗ್ಯಾನ್ ರೋವರ್ ಅನ್ನು ಹೊತ್ತ ಜಿಎಸ್‌ಎಲ್‌ವಿ ಮಾರ್ಕ್-3 'ಬಾಹು ಬಲಿ ರಾಕೆಟ್' ಸತತ 42 ದಿನ ಪ್ರಯಾಣದ ಬಳಿಕ 23 ಆಗಸ್ಟ್ 2023 ರಂದು ಸಂಜೆ 6 ಗಂಟೆ 04 ನಿಮಿಷಕ್ಕೆ ಕರಾರುವಾಕ್ ಆಗಿ, ಅತ್ಯಂತ ನಿಖರ ಜಾಗದಲ್ಲಿ ಅತಿಜಾಗರೂಕವಾಗಿ, ಯಾವುದೇ ಸಮಸ್ಯೆ ಇಲ್ಲದೇ ಮೃದುವಾಗಿ ಚಂದ್ರನಂಗಳದ ಮೇಲೆ ಇಳಿದಿದೆ. ಛಲ ಬಿಡದ ತ್ರಿವಿಕ್ರಮನಂತೆ ಸಾಧನೆ ಮಾಡಿದ ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೋ) ವಿಜ್ಞಾನಿಗಳು ಇಡೀ ದೇಶವೇ ಹೆಮ್ಮೆ ಪಡುವ ಕ್ಷಣಗಳನ್ನು ಕಟ್ಟಿಕೊಟ್ಟರು. ಈ ಮೂಲಕ ಚಂದ್ರನಂಗಳ ತಲುಪಿದ ಜಗತ್ತಿನ ನಾಲ್ಕು ಗಣ್ಯ ರಾಷ್ಟ್ರಗಳ ಸಾಲಿಗೆ ಭಾರತ ಕೂಡ ಸೇರ್ಪಡೆ ಆಗಿದ್ದುದು ಮಾತ್ರವೇ ಅಲ್ಲ, ಚಂದ್ರನ ದಕ್ಷಿಣ ಧ್ರುವದಲ್ಲಿ ಲ್ಯಾಂಡರ್ ಇಳಿಸಿದ ಜಗತ್ತಿನ ಮೊದಲ ದೇಶವಾಗಿ ಇತಿಹಾಸ ಬರೆದಿದೆ.


ಚಂದ್ರನ ದಕ್ಷಿಣ ಧ್ರುವದಲ್ಲಿ ಉಷ್ಣಾಂಶ -230 ಡಿ.ಸೆ.ಗಿಂತ ಕಡಿಮೆ ಇದ್ದು, ಇಲ್ಲಿ ಬಹುಕಾಲದವರೆಗೆ ಹೆಪ್ಪುಗಟ್ಟಿದ ಸ್ಥಿತಿಯಲ್ಲಿ ಪಳೆಯುಳಿಕೆಗಳು ಇರುವ ಅಂದಾಜಿದೆ. ಅಲ್ಲದೆ, 2008ರ ಚಂದ್ರಯಾನ-1 ಚಂದ್ರನ ದಕ್ಷಿಣ ಧ್ರುವದಲ್ಲಿ ನೀರಿದೆ ಎಂದಿತ್ತು. ಅಲ್ಲದೆ, ದಕ್ಷಿಣ ಧ್ರುವದಲ್ಲಿ ಈವರೆಗೂ ಬೆಳಕನ್ನೆ ಕಾಣದ ಹಲವು ಪ್ರದೇಶಗಳಿರುವ ಕಾರಣ ಇದು ವಿಜ್ಞಾನಿಗಳಲ್ಲಿ ಸಾಕಷ್ಟು ಕುತೂಹಲ ಮೂಡಿಸಿದೆ.

## ಜೋಹಾನ್ಸ್ ಬರ್ಗ್‌ನಿಂದಲೇ ಇಸ್ರೋ ಸಾಧನೆ ಕೊಂಡಾಡಿದ ಪ್ರಧಾನಿ



ಬ್ರಿಕ್ಸ್ ಶೃಂಗದಲ್ಲಿ ಪಾಲ್ಗೊಂಡು ಜೋಹಾನ್ಸ್ ಬರ್ಗ್ ನಿಂದಲೇ ಪ್ರಧಾನಿ ಮೋದಿ, ಭಾರತದ ಮಹತ್ವಾಕಾಂಕ್ಷಿ ಚಂದ್ರಯಾನ-3ರ ಯಶಸ್ಸಿನ ಐತಿಹಾಸಿಕ ಕ್ಷಣವನ್ನು 'ನವ ಭಾರತದ ಉದಯ' ಎಂದು ವ್ಯಾಖ್ಯಾನಿಸಿ ಭಾರತದ ಈ ಐತಿಹಾಸಿಕ ಕ್ಷಣವನ್ನು ಅಲ್ಲಿಂದಲೇ ಕಣ್ತುಂಬಿಕೊಂಡರಲ್ಲದೇ, ವಿಕ್ರಮ್ ಲ್ಯಾಂಡರ್‌ನ ಸಾಫ್ಟ್ ಲ್ಯಾಂಡಿಗ್ ಘೋಷಣೆಯಾಗುತ್ತಿದ್ದಂತೆಯೇ ಲೈವ್ ಬಂದು ಮಾತನಾಡಿದರು. 'ಇಂತಹ ಐತಿಹಾಸಿಕ ಕ್ಷಣಗಳನ್ನು ನೋಡಿದಾಗ ನಮಗೆ ತುಂಬಾ ಹೆಮ್ಮೆಯಾಗುತ್ತದೆ. ಇದು ನವಭಾರತದ ಉದಯ' ಎಂದು ಹೇಳಿದರು.




# ಚಂದ್ರನ ಮೇಲೆ ಭಾರತದ ಹೆಜ್ಜೆ

ತಿರಂಗಾ ಪಾಯಿಂಟ್ ಚಂದ್ರನ ಮೇಲೆ ನಾಲ್ಕು ವರ್ಷಗಳ ಹಿಂದೆ ವಿಫಲವಾದ ಚಂದ್ರಯಾನ-2ರದ್ದೂ ಹೆಜ್ಜೆಗುರುತುಗಳು ಬಿದ್ದಿದ್ದು, ಆ ಸ್ಥಳವನ್ನೂ ಹೆಸರಿಸಲು ಪ್ರಸ್ತಾಪಿಸಲಾಯಿತು. ಆದರೆ, ಆ ಸಂದರ್ಭಗಳಲ್ಲಿ ನಿರ್ಧಾರ ತೆಗೆದುಕೊಳ್ಳುವ ಬದಲು, ಚಂದ್ರಯಾನ-3 ಯಶಸ್ವಿಯಾದ ಬಳಿಕವೇ ಎರಡೂ ತಾಣಗಳನ್ನು ಒಟ್ಟಿಗೆ ಹೆಸರಿಸುವ ಪ್ರತಿಜ್ಞೆ ಮಾಡಿದ್ದೆವು. ಪ್ರತಿ ಮನೆಯೂ, ಪ್ರತಿ ಮನಸ್ಸು ತ್ರಿವರ್ಣವಾಗಿರುವಾಗ ಮತ್ತು ಚಂದ್ರನ ಮೇಲೂ ತ್ರಿವರ್ಣವಿರುವಾಗ, ಚಂದ್ರಯಾನ- 2ರ ಲ್ಯಾಂಡರ್ ಬಿದ್ದ ಸ್ಥಳಕ್ಕೆ 'ತಿರಂಗಾ' ಹೊರತುಪಡಿಸಿ ಬೇರೆ ಯಾವ ಹೆಸರಿಡಲು ಸಾಧ್ಯ? ಆದ್ದರಿಂದ, ಅದನ್ನು **'ತಿರಂಗ ಪಾಯಿಂಟ್'** ಎಂದು ಕರೆಯಲಾಗುವುದು. ಈ ತ್ರಿವರ್ಣ ಬಿಂದುವು ಭಾರತದ ಪ್ರತಿಯೊಂದು ಪ್ರಯತ್ನಕ್ಕೂ ಸ್ಫೂರ್ತಿ. ಯಾವುದೇ ವೈಫಲ್ಯವೂ ಅಂತಿಮವಲ್ಲ, ಬಲವಾದ ಇಚ್ಛಾಶಕ್ತಿ ಇದ್ದರೆ ಯಶಸ್ಸು ಖಂಡಿತವಾಗಿ ದಕ್ಕುತ್ತದೆಂಬುದನ್ನು ಈ ತಾಣದ ಹೆಸರು ಸಂಕೇತಿಸುತ್ತದೆ.

'ಶಿವ' ಮಾನವ ಕಲ್ಯಾಣಕ್ಕಾಗಿನ ಸಂಕಲ್ಪದ ಪ್ರತೀಕ. 'ಶಕ್ತಿ' ನಮಗೆ ಆ ಸಂಕಲ್ಪ ಪೂರೈಸುವ ಸಾಮರ್ಥ್ಯ ನೀಡುತ್ತದೆ. ಜತೆಗೆ **'ಶಿವಶಕ್ತಿ'** ಎಂಬುದು ಹಿಮಾಲಯದ-ಕನ್ಯಾಕುಮಾರಿಯನ್ನು ಬೆಸೆಯುವ ಪ್ರತೀಕವೂ ಹೌದು. ಇಡೀ ಬ್ರಹ್ಮಾಂಡದ ಆಧಾರವೇ ಶಕ್ತಿ ಸ್ವರೂಪಿಣಿ ಮಹಿಳೆ. ಚಂದ್ರಯಾನ-3ರಲ್ಲಿ ನಮ್ಮ ಮಹಿಳಾ ವಿಜ್ಞಾನಿಗಳು, ದೇಶದ ಮಹಿಳಾ ಶಕ್ತಿಯ ಮಹತ್ವದ ಪಾತ್ರವನ್ನು ನೋಡಿದ್ದೇವೆ. ಹೀಗಾಗಿ ಚಂದ್ರನಲ್ಲಿನ 'ಶಿವಶಕ್ತಿ' ಬಿಂದುವು ಶತಮಾನಗಳಿಂದ ಭಾರತದ ವೈಜ್ಞಾನಿಕ ಮತ್ತು ತಾತ್ವಿಕ ಚಿಂತನೆಗೆ ಸಾಕ್ಷಿ. ಈ ಸ್ಥಳ ಮುಂಬರುವ ಪೀಳಿಗೆಗೆ ನಾವು ವಿಜ್ಞಾನವನ್ನು ಮಾನವ ಕಲ್ಯಾಣಕ್ಕಾಗಿ ಮಾತ್ರ ಬಳಸಬೇಕೆಂಬುದನ್ನು ಪ್ರೇರೇಪಿಸುತ್ತದೆ. ಮಾನವ ಕಲ್ಯಾಣವೇ ನಮ್ಮ ಸರ್ವೋಚ್ಚ ಬದ್ಧತೆ.

**- ಪ್ರಧಾನಿ ಮೋದಿ**




# ಆಗಸ್ಟ್ 23 ರಾಷ್ಟ್ರೀಯ ಬಾಹ್ಯಾಕಾಶ ದಿನ

ಇಸ್ರೋ ಕಮಾಂಡಿಂಗ್ ಸೆಂಟರ್‌ನಲ್ಲಿ ಚಂದ್ರಯಾನ-3ರ ಯಶಸ್ಸಿಗೆ ದುಡಿದ ವಿಜ್ಞಾನಿಗಳನ್ನು ಭೇಟಿ ಮಾಡಿ ಅಭಿನಂದಿಸಿದರು.



ಭಾರತದ ಮಹತ್ವಾಕಾಂಕ್ಷಿ ಚಂದ್ರಯಾನ-3 ಯಶಸ್ವಿಯಾದ ದಿನ ಆ. 23ನ್ನು **'ರಾಷ್ಟ್ರೀಯ ಬಾಹ್ಯಾಕಾಶ ದಿನ'**ವಾಗಿ, ಲ್ಯಾಂಡರ್ ವಿಕ್ರಮ್ ಇಳಿದ ಚಂದ್ರನ ದಕ್ಷಿಣ ಧ್ರುವದ ತಾಣವನ್ನು **'ಶಿವಶಕ್ತಿ ಪಾಯಿಂಟ್'** ಎಂದು ಹಾಗೆಯೇ 2019ರ ಚಂದ್ರಯಾನ-2 ವಿಫಲವಾಗಿದ್ದರೂ ಲ್ಯಾಂಡರ್ ವಿಕ್ರಮ್ ಅಪ್ಪಳಿಸಿದ ಸ್ಥಳಕ್ಕೆ **'ತಿರಂಗಾ ಪಾಯಿಂಟ್'** ಎಂದು ಪ್ರಧಾನಿ ಶ್ರೀ ಮೋದಿ ನಾಮಕರಣ ಮಾಡಿದರು.

ಇಸ್ರೊ, ಕೇಂದ್ರ ಸರ್ಕಾರದ ನಾನಾ ಇಲಾಖೆಗಳು ಹಾಗೂ ರಾಜ್ಯ ಸರಕಾರಗಳ ಸಹಭಾಗಿತ್ವದಲ್ಲಿ, **'ಜೀವನಮಟ್ಟ ಸುಧಾರಣೆ ಹಾಗೂ ಸುಲಲಿತ ಆಡಳಿತದಲ್ಲಿ ಬಾಹ್ಯಾಕಾಶ ವಿಜ್ಞಾನದ ಬಳಕೆ'** ಕುರಿತು ರಾಷ್ಟ್ರಮಟ್ಟದ ಹ್ಯಾಕಥಾನ್ ಆಯೋಜಿಸುವಂತೆ ಸಲಹೆ ನೀಡಿದರಲ್ಲದೇ ಆರೋಗ್ಯ, ಶಿಕ್ಷಣ, ಟೆಲಿ ಮೆಡಿಸಿನ್, ಹವಾಮಾನ ಮುನ್ಸೂಚನೆ ಸೇರಿದಂತೆ ನಾನಾ ಕ್ಷೇತ್ರಗಳಲ್ಲಿ ಬಾಹ್ಯಾಕಾಶ ವಿಜ್ಞಾನದ ಬಳಕೆಗೆ ಇರುವ ಅವಕಾಶಗಳ ಕುರಿತು ಸಂಶೋಧನೆಗೆ ಯುವಜನರಿಗೆ ಈ ಹ್ಯಾಕಥಾನ್ ವೇದಿಕೆ ಆಗಲಿ ಎಂದು ಆಶಿಸಿದರು.

ಮುಂದಿನ ಕೆಲವು ವರ್ಷಗಳಲ್ಲಿ ಭಾರತದ ಬಾಹ್ಯಾಕಾಶ ಉದ್ಯಮವು ಈಗಿನ 8 ಶತಕೋಟಿಯಿಂದ 16 ಶತಕೋಟಿಗೆ ಏರುವುದಾಗಿ ತಜ್ಞರು ಹೇಳುತ್ತಿದ್ದಾರೆ. ಈ ವಿಷಯದ ಗಂಭೀರತೆಯನ್ನು ಮನಗಂಡ ಸರ್ಕಾರ ಬಾಹ್ಯಾಕಾಶ ಕ್ಷೇತ್ರದಲ್ಲಿ ನಿರಂತರವಾಗಿ ಸುಧಾರಣೆಗಳನ್ನು ಕೈಗೊಳ್ಳುತ್ತಿದೆ ಎಂದು ಪ್ರಧಾನಿ ಶ್ರೀ ಹೇಳಿದರು. ಕಳೆದ ನಾಲ್ಕು ವರ್ಷಗಳಲ್ಲಿ ಬಾಹ್ಯಾಕಾಶ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸ್ಟಾರ್ಟ್‌ಅಪ್‌ಗಳ ಸಂಖ್ಯೆ 4 ರಿಂದ 150ಕ್ಕೆ ಏರಿದೆ. ಅಂತ್ಯವಿಲ್ಲದ ಆಕಾಶದಲ್ಲಿ ಭಾರತಕ್ಕಾಗಿ ಕಾಯುತ್ತಿರುವ ಅಂತ್ಯವಿಲ್ಲದ ಸಾಧ್ಯತೆಗಳನ್ನು ನಾವು ಊಹಿಸಬಹುದು ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ಹೇಳಿದರು.

**ಕೆರೆಗಳ ಎಣಿಕೆ:** ಆಡಳಿತದಲ್ಲಿ ಪಾರದರ್ಶಕತೆ ತರಲು ಅಂತರಿಕ್ಷದ ಸಂಶೋಧನೆಗಳು ನೆರವಿಗೆ ಬರುತ್ತವೆ ಎನ್ನುವುದನ್ನು ಮನಗಂಡಿದ್ದೆನೆ. ಶೌಚಾಲಯ ಹಾಗೂ ಮನೆಗಳನ್ನು ನಿರ್ಮಿಸುವ ಸರ್ಕಾರದ ಕಾರ್ಯಕ್ಕೆ ಬಾಹ್ಯಾಕಾಶ ತಂತ್ರಜ್ಞಾನದ ಕೊಡುಗೆಯೂ ಅಗತ್ಯವಾಗಿದೆ. ದೇಶದ ಅಮೃತ ಮಹೋತ್ಸವದ ವೇಳೆ ಘೋಷಣೆ ಮಾಡಲಾದ ಎಲ್ಲ ಅಮೃತ ನಗರಗಳಲ್ಲಿ ಹಾಗೂ ಅಮೃತ ಜಿಲ್ಲೆಗಳಲ್ಲಿನ ಕೆರೆಗಳನ್ನೂ ಕೂಡ ಅಮೃತ ಸರೋವರಗಳನ್ನಾಗಿ ಮಾಡಲಾಗುವುದು. ಈ ಎಲ್ಲ ಕೆರೆಗಳನ್ನು ಬಾಹ್ಯಾಕಾಶ ತಂತ್ರಜ್ಞಾನದ ಮೂಲಕ ಎಣಿಕೆ ಮಾಡಲಾಗುವುದು ಎಂದು ಪ್ರಧಾನಿ ಶ್ರೀ ಮೋದಿ ತಿಳಿಸಿದ್ದಾರೆ.



### ಚಂದ್ರಯಾನ-3ರ ಕೌಂಟ್‌ಡೌನ್ ಧ್ವನಿ ವಲರ್ಮತಿ ಅನಿರೀಕ್ಷಿತ ನಿಧನ

ಶ್ರೀಹರಿಕೋಟಾದಲ್ಲಿ ರಾಕೆಟ್ ಉಡಾವಣೆಗಾಗಿ ಕ್ಷಣಗಣನೆಯಲ್ಲಿ ಧ್ವನಿ ನೀಡಿದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ವಿಜ್ಞಾನಿ, ಮೂಲತಃ ತಮಿಳುನಾಡಿನ ಅರಿಯಾಲೂರ್‌ನವರಾದ ವಲರ್ಮತಿ ಅವರು 2 ಸೆಪ್ಟೆಂಬರ್ 2023ರಂದು ಹೃದಯ ಸ್ತಂಭನದಿಂದ ನಿಧನರಾಗಿದ್ದಾರೆ. ತಮಿಳುನಾಡು ಸರ್ಕಾರ ನೀಡುವ ಪ್ರತಿಷ್ಠಿತ ಅಬ್ದುಲ್ ಕಲಾಂ ಪ್ರಶಸ್ತಿಗೆ ವಲರ್ಮತಿ ಅವರು ಭಾಜನರಾಗಿದ್ದರು. 31 ಜುಲೈ 1959 ರಂದು ಜನಿಸಿದ ವಲರ್ಮತಿ ಅವರು 1984 ರಲ್ಲಿ ಇಸ್ರೋಗೆ ಸೇರಿ, ಹಲವಾರು ಕಾರ್ಯಾಚರಣೆಗಳಲ್ಲಿ ಭಾಗವಹಿಸಿದರು.





# ರಾಜ್ಯ ಪದಾಧಿಕಾರಿಗಳ ಸಭೆ

**ಭೀ**ಕರ ಬರಗಾಲ ರಾಜ್ಯವನ್ನು ಕಾಡುತ್ತಿದ್ದರೂ ಬರಗಾಲ ಘೋಷಣೆ ಮಾಡುವಲ್ಲಿ ಮೀನಾ ಮೇಷ ಎಣಿಸುತ್ತಿರುವ ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರವಾದ ಹೋರಾಟ ಅತ್ಯಗತ್ಯ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದೀಯ ಮಂಡಳಿ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ತಿಳಿಸಿದರು.



ಬೆಂಗಳೂರಿನ ಜಗನ್ನಾಥ ಭವನದಲ್ಲಿ ಬಿಜೆಪಿ ರಾಜ್ಯ ಪದಾಧಿಕಾರಿಗಳ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ರಾಜ್ಯ ಸರ್ಕಾರದ ವಿರುದ್ಧ ಹೋರಾಟಕ್ಕಾಗಿ ಕಾರ್ಯಕರ್ತರನ್ನು ಸಜ್ಜುಗೊಳಿಸಲು ಸೆಪ್ಟೆಂಬರ್ 18 ರಿಂದ ಕೂಡುಮಲೈನಿಂದ ರಾಜ್ಯಾದ್ಯಂತ ಪ್ರವಾಸವನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿ ರಾಜ್ಯ ಸರ್ಕಾರ ಬರಗಾಲ ಘೋಷಣೆ ಮಾಡುವಲ್ಲಿ ಹಿಂದೇಟು ಹಾಕುತ್ತಿದೆ, ಪರಿಶಿಷ್ಟ ಜಾತಿ, ಪಂಗಡಕ್ಕೆ ಮೀಸಲಿರಿಸಿದ್ದ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳುತ್ತಿದೆ, ಕಾವೇರಿ ನೀರನ್ನು ಡಿಎಂಕೆಯೊಂದಿಗಿನ ಸಂಬಂಧ ವೃದ್ಧಿಯ ಕಾರಣಕ್ಕೆ ತಮಿಳುನಾಡಿಗೆ ಬಿಡುಗಡೆ ಮಾಡುತ್ತಿದೆ. ರಾಜ್ಯ ಸರಕಾರದ ಈ ಜನ ವಿರೋಧಿ ನೀತಿಯನ್ನು ಖಂಡಿಸಿ ಹೋರಾಟ ನಡೆಸಲು ಕಾರ್ಯಕರ್ತರನ್ನು ಸಜ್ಜುಗೊಳಿಸಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ಶ್ರೀ ಸದಾನಂದ ಗೌಡರು ಸೋಲಿನಿಂದ ಕುಗ್ಗಿರುವ ಕಾರ್ಯಕರ್ತರಿಗೆ ನಾವಿದ್ದೇವೆಂಬ ಆತ್ಮವಿಶ್ವಾಸ ತುಂಬುವ ಕಾರ್ಯವನ್ನು ನಾವೆಲ್ಲರೂ ಮಾಡಬೇಕಾಗಿದೆ. ಬಿಜೆಪಿಗೆ ಸೋಲು ಹೊಸದೇನಲ್ಲ, ಸೋಲಿನಿಂದಲೇ ಬೆಳೆದ ಪಕ್ಷವಿದು, ಪರಿಹಾರಗಳಿಲ್ಲದ ವ್ಯವಸ್ಥೆಯೇ ಇಲ್ಲ, ಹಾಗೆಯೇ ಸೋಲುಗಳಿಲ್ಲದ ರಾಜಕೀಯವೂ ಇಲ್ಲ, ಆದರೆ ಈ ಬಾರಿಯ ಸೋಲು ಕಾರ್ಯಕರ್ತರನ್ನು ಕೊಂಚ ಮಟ್ಟಿಗೆ ಅಧೀರರನ್ನಾಗಿಸಿರುವುದು ನಿಜವಾದರೂ ಗೊಂದಲದ ಹೇಳಿಕೆಗಳಿಗೆ ಪ್ರತಿ ಹೇಳಿಕೆಗಳನ್ನು ನೀಡಿ ಪಕ್ಷದೊಳಗೆ ಮತ್ತಷ್ಟು ಗೊಂದಲಗಳನ್ನು ಉಂಟುಮಾಡುವ ಪ್ರವೃತ್ತಿಗೆ ಬದಲಾಗಿ ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಕಾರ್ಯಕರ್ತರೊಂದಿಗೆ ಸಂಪರ್ಕವನ್ನು ಹೆಚ್ಚಿಸಿಕೊಳ್ಳಬೇಕೆಂದು ತಿಳಿಸಿದರು.



ಮಾಜಿ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿಯವರು ಮಾತನಾಡಿ ರಾಜಕಾರಣದಲ್ಲಿ ಹಿನ್ನಡೆ ಉಂಟಾದಾಗ ಯಾವಾಗಲೂ ನಾವು ಛಲದಿಂದ ಮುನ್ನಡೆಯಬೇಕು. ಯಾವಾಗಲೂ ನಮಗೆ ಬಯಸಿದಂತೆ ಪರಿಸ್ಥಿತಿಯಿರುವುದಿಲ್ಲ, ಸೋಲಿನ ನಂತರ ಭವಿಷ್ಯವೇ ಇಲ್ಲ ಎಂದು ಕುಳಿತುಕೊಳ್ಳುವುದು ತರವಲ್ಲ, ರಾಜ್ಯವನ್ನು ಆರ್ಥಿಕ ಅಧೋಗತಿಗೆ ತಳ್ಳುವುದರ ಜೊತೆಗೆ ಅಭಿವೃದ್ಧಿ ಕುಂಠಿತವಾಗಿರುವ ಆಡಳಿತವನ್ನು ನೀಡುತ್ತಿರುವ ಕಾಂಗ್ರೆಸ್‌ನ ಕಾರಣದಿಂದ ನಮಗೆ ನಿರೀಕ್ಷೆಗೂ ಮೀರಿದ ಅವಕಾಶಗಳು ಬರುತ್ತವೆ, ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಅಧಿಕಾರಕ್ಕಾಗಿ ಎಲ್ಲದರಲ್ಲೂ ರಾಜಿ ಮಾಡಿಕೊಂಡಿರುವುದರ ಜೊತೆಗೆ ವ್ಯಕ್ತಿತ್ವದಲ್ಲೂ ರಾಜಿ ಮಾಡಿಕೊಂಡಿದ್ದಾರೆ ಎಂದು ಹೇಳಿದರು.






ಉದ್ಘಾಟನಾ ಅವಧಿಯನ್ನು ಬೆಂಗಳೂರು ವಿಭಾಗ ಸಹ - ಪ್ರಭಾರಿಗಳಾದ ಶ್ರೀ ರಾಜಣ್ಣ ಅವರು ನಿರೂಪಿಸಿದರು. ಶ್ರೀ ಲಿಂಗರಾಜ ಪಾಟೀಲ್ ಅವರು ಸ್ವಾಗತಿಸಿ, ಶ್ರೀ ವಿನಯ್ ಬಿದರೆ ಅವರು ವಂದಿಸಿದರು. ವಿಭಾಗ ಪ್ರಭಾರಿಗಳಿಂದ ಹಾಗೂ ಮೋರ್ಚಾ ಅಧ್ಯಕ್ಷರುಗಳಿಂದ ಕಳೆದ ಎರಡು ತಿಂಗಳಿನಲ್ಲಿ ನಡೆದ ಎಲ್ಲಾ ಚಟುವಟಿಕೆಗಳ ವರದಿಯನ್ನು ಪಡೆಯಲಾಯಿತು.

ಪ್ರಧಾನ ಕಾರ್ಯದರ್ಶಿ ಶ್ರೀ ಮಹೇಶ್ ಟೆಂಗಿನಕಾಯಿ ಮುಂದಿನ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಹೋರಾಟಗಳ ಬಗ್ಗೆ ಪ್ರಧಾನ ಕಾರ್ಯದರ್ಶಿ ಶ್ರೀ ರವಿಕುಮಾರ್, 'ನನ್ನ ಮಣ್ಣು ನನ್ನ ದೇಶ' ಕಾರ್ಯಕ್ರಮದ ಬಗ್ಗೆ ಮತ್ತೋರ್ವ ಪ್ರಧಾನ ಕಾಯದರ್ಶಿ ಶ್ರೀ ಸಿದ್ದರಾಜು, ಶಂಖನಾದ ಕಾರ್ಯಕ್ರಮದ ಬಗ್ಗೆ ಪ್ರಧಾನ ಕಾರ್ಯದರ್ಶಿ ಶ್ರೀ ಅಶ್ವಥ್ ನಾರಾಯಣ್ ಅವರು ಮಾಹಿತಿ ನೀಡಿದರು.

ಚಂದ್ರಾಯಾನ-3 ಯಶಸ್ವಿ ಉಡಾವಣೆ ಹಾಗೂ ದೆಹಲಿಯಲ್ಲಿ ಆಯೋಜಿಸಿದ್ದ ಜಿ-20 ಶೃಂಗ ಸಭೆಯ ಯಶಸ್ವಿ ಆಯೋಜನೆಯ ಅಭಿನಂದನಾ ನಿರ್ಣಯವನ್ನು ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಅಶ್ವತ್ಥ ನಾರಾಯಣ ಅವರು ಮಂಡಿಸಿದರು.

## ಪರಿಹಾರದ ಭಾಗವಾಗೋಣ



ಪದಾಧಿಕಾರಿಗಳೆಂದೂ ಸಮಸ್ಯೆಯ ಭಾಗವಾಗಬಾರದು, ಪರಿಹಾರದ ಭಾಗವಾಗಬೇಕು ಎಂದು ಬಿಜೆಪಿ ರಾಜ್ಯ ಅಧ್ಯಕ್ಷರಾದ ಶ್ರೀ ನಳಿನ್‌ಕುಮಾರ್ ಕಟೀಲ್ ತಿಳಿಸಿದರು. ರಾಜ್ಯ ಪದಾಧಿಕಾರಿಗಳ ಸಭೆಯ ಸಮಾರೋಪ ಭಾಷಣ ಮಾಡಿದ ಅವರು ಹಿರಿಯರಲ್ಲಿ ವಿಶ್ವಾಸವಿಟ್ಟು ಕಾರ್ಯಕರ್ತರಲ್ಲಿ ಸ್ಫೂರ್ತಿ ತುಂಬುವ ಕಾರ್ಯ ನಮ್ಮಿಂದ ಆಗಬೇಕು. ರಾಷ್ಟ್ರೀಯ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ರೂಪಿಸಿದ ಹೋರಾಟಗಳನ್ನು ಪರಿಣಾಮಕಾರಿಯಾಗಿ ಮಾಡಬೇಕಾದ ಹೊಣೆಗಾರಿಕೆ ಪದಾಧಿಕಾರಿಗಳದ್ದಾಗಿದೆ. ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ನಡೆದ ಬಹುತೇಕ ಚುನಾವಣೆಗಳೆಲ್ಲದರಲ್ಲೂ ಜಯ ಸಾಧಿಸಿದ್ದೇವೆ. ಆದರೆ ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದೇವೆ. ಸತತ ಪರಿಶ್ರಮ, ಪ್ರಯತ್ನಗಳಿಂದ ಬರಲಿರುವ ಲೋಕಸಭಾ ಚುನಾವಣೆಯಲ್ಲಿ ಸಂಘಟನೆಗೆ ಜಯ ತಂದುಕೊಡುವಲ್ಲಿ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸೋಣ ಎಂದು ಕರೆ ಕೊಟ್ಟರು.

## ಮುಂದಿನ ಕಾರ್ಯಕ್ರಮಗಳು

- ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಜನ್ಮ ದಿನದ ಅಂಗವಾಗಿ **ಸೆಪ್ಟೆಂಬರ್ 17 ರಿಂದ ಅಕ್ಟೋಬರ್ 2 ರವರೆಗೆ ಸೇವಾ ಪಾಕ್ಷಿಕ ಅಭಿಯಾನ.**
- ಸೆಪ್ಟೆಂಬರ್ 17 ರಂದು ಶ್ರೀ ಮೋದಿಯವರ ಜನ್ಮ ದಿನದ ಪ್ರಯುಕ್ತ ಯುವಮೋರ್ಚಾ ವತಿಯಿಂದ **ರಕ್ತದಾನ ಶಿಬಿರ**ಗಳ ಆಯೋಜನೆ.
- ಸೆಪ್ಟೆಂಬರ್ 25 ರಂದು ಪಂ. ದೀನ ದಯಾಳ ಉಪಾಧ್ಯಾಯರ ಜನ್ಮ ದಿನದ ಅಂಗವಾಗಿ ಎಲ್ಲಾ ಬೂತ್‌ಗಳಲ್ಲಿ **ಪಂಡಿತ್‌ಜೀಯವರ ಸ್ಮರಣಾ ಕಾರ್ಯಕ್ರಮ.**
- ಸೆಪ್ಟೆಂಬರ್ 26 ರಿಂದ ಅಕ್ಟೋಬರ್ 1 ರವರೆಗೆ **ಬೂತ್ ಸಶಕ್ತೀಕರಣ ಅಭಿಯಾನ** .
- ಅಕ್ಟೋಬರ್ 2 ರಂದು ಮಹಾತ್ಮ ಗಾಂಧಿ ಜಯಂತಿ ಅಂಗವಾಗಿ **ಸ್ವಚ್ಛತಾ ಅಭಿಯಾನ.**





# ವಿಜ್ಞಾನಿಗಳ ಚಂದ್ರಯಾನ

## ಕುತ್ಸಿತ ಮನಸ್ಸಿನ ರಾಜಕಾರಣ




ಅಜಿತ್ ಶೆಟ್ಟಿ ಹೆರಂಜೆ
ಸಹ ಸಂಚಾಲಕರು
ರಾಜ್ಯ ಪ್ರಕಾಶನ ಪ್ರಕೋಷ್ಠ


ಚಂದ್ರಯಾನ 3 ಲಾಂಚ್‌ಗೂ ಮುಂಚೆ ಇಸ್ರೋ ವಿಜ್ಞಾನಿಗಳು ತಿರುಪತಿಯಲ್ಲಿ ಚಂದ್ರಯಾನ 3ರ ಪ್ರತಿಕೃತಿಗೆ ಪೂಜೆ ಸಲ್ಲಿಸಿದರು. ಅದಕ್ಕೆ ಸಾಮಾಜಿಕ ಜಾಲತಾಣದಲ್ಲಿ ಒಂದಷ್ಟು ಬುದ್ಧಿಜೀವಿಗಳು ಇಸ್ರೋದ ವಿಜ್ಞಾನಿಗಳು ಹೀಗೆ ಪೂಜೆ ಮಾಡುವುದು ಮೌಢ್ಯ ಮತ್ತು ಸಂವಿಧಾನ ವಿರೋಧಿ ಎಂದರು. ಇದಕ್ಕೆ ಇಡೀ ದೇಶದಲ್ಲಿ ವ್ಯಾಪಕವಾದ ಟೀಕೆಗಳಾದವು. ಈ ಯಾನ ಚಂದ್ರನ ಮೇಲೆ ಇಳಿದ ಜಾಗವನ್ನು ಪ್ರಧಾನಿ ಮೋದಿಯವರು 'ಶಿವಶಕ್ತಿ ಪಾಯಿಂಟ್' ಎಂದು ನಾಮಕರಣ ಮಾಡಿದ್ದಕ್ಕೂ ಬುದ್ದಿಜೀವಿಗಳ ವಲಯದಲ್ಲಿ ವಿರೋಧ ವ್ಯಕ್ತವಾಯಿತು. ಈ ರೀತಿ ಹಿಂದೂ ಧಾರ್ಮಿಕತೆಗೆ ಸಂಬಂಧಿಸಿದ ಹೆಸರಿಡುವುದು ಸೆಕ್ಯುಲರ್ ತತ್ವಕ್ಕೆ ವಿರೋಧ ಎಂದರು. ಹಿಂದೆ ಚಂದ್ರಯಾನ 1 ಚಂದ್ರನ ಮೈಮೇಲೆ ಇಳಿದ ಜಾಗವನ್ನು ಅಂದಿನ ಕಾಂಗ್ರೆಸ್ ಸರಕಾರ 'ನೆಹರು ಪಾಯಿಂಟ್' ಎಂದು ನಾಮಕರಣ ಮಾಡಿದ್ದನ್ನು ಮರೆತೇ ಬಿಟ್ಟರು. ಅಂದು ಅದಕ್ಕೆ ಇಸ್ರೋ ವಿಜ್ಞಾನಿಗಳ ಹೆಸರಿಡಬೇಕಿತ್ತು ಎಂದೂ ಯಾರೂ ಹೇಳಲೇ ಇಲ್ಲ. ಇದರ ಜೊತೆಗೆ ಪ್ರಧಾನಿ ಶ್ರೀ ಮೋದಿ ಹೆಚ್ಚು ಪ್ರಚಾರ ಪಡೆಯುತ್ತಿದ್ದಾರೆ ಎಂದೂ ಕಾಂಗ್ರೆಸ್ ಆರೋಪಿಸಿತು. ರಾಜ್ಯದ ಕಾಂಗ್ರೆಸ್ ಸರ್ಕಾರದ ಮಂತ್ರಿಗಳು, ಮುಖ್ಯಮಂತ್ರಿಗಳು ಇಸ್ರೋ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ವಿಜ್ಞಾನಿಗಳನ್ನು ಗೌರವಿಸಿದ್ದನ್ನೇ ಮರುದಿನ ಕರ್ನಾಟಕದ ದಿನ ಪತ್ರಿಕೆಯಲ್ಲಿ ಜಾಹೀರಾತು ನೀಡುವ ಮೂಲಕ ಪ್ರಚಾರ ಪಡೆದರು.




**ಭಾ**ರತದ ಮಂಗಳ ಯಾನ ಯಶಸ್ಸನ್ನು ಕಂಡ ಸಂದರ್ಭದಲ್ಲಿ ಅಮೆರಿಕದ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಒಂದು ವ್ಯಂಗ್ಯ ಚಿತ್ರವೊಂದನ್ನು ಪ್ರಕಟಿಸಿತ್ತು. ಒಂದು ಕೋಣೆಯಲ್ಲಿ ಪಾಶ್ಚಾತ್ಯ ವಿಜ್ಞಾನಿಗಳು ಭಾರತದ ಮಂಗಳಯಾನದ ಸುದ್ದಿಯನ್ನು ಓದುತ್ತಿದ್ದರು. ಕೋಣೆಯ ಹೊರಗೆ ಭಾರತದ ರೈತನೊಬ್ಬ ತನ್ನ ಎತ್ತುಗಳೊಂದಿಗೆ ಆ ಕೋಣೆಯ ಒಳಗೆ ಪ್ರವೇಶ ಬಯಸಿ ಬಾಗಿಲು ಬಡಿಯುತ್ತಿದ್ದ ದೃಶ್ಯವದು. ಇದಕ್ಕೆ ಪ್ರಪಂಚದಾದ್ಯಂತ ಖಂಡನೆ ವ್ಯಕ್ತವಾಯಿತು. ನಂತರ ಆ ಪತ್ರಿಕೆ ಭಾರತಕ್ಕೆ ಕ್ಷಮೆಯನ್ನೂ ಕೇಳಿತು. ಭಾರತದ ವಿಜ್ಞಾನಿಗಳು ಮತ್ತು ಅವರ ಸಾಧನೆಗಳು ಅಪಹಾಸ್ಯಕ್ಕೆ ಕುತಂತ್ರಕ್ಕೆ ಗುರಿಯಾಗಿದ್ದು ಆವತ್ತಿಗೆ ಮೊದಲ ಬಾರಿಯೂ ಅಲ್ಲ, ಅದು ಕೊನೆಯದೂ ಅಲ್ಲ. ಭಾರತದಲ್ಲಿ ಇಸ್ರೋದಂತಹ ಸಂಸ್ಥೆಯೊಂದನ್ನು ಪ್ರಾರಂಭ ಮಾಡುವ ಚಿಂತನೆಯಿಂದ ಹಿಡಿದು ಇವತ್ತು ಆ ಸಂಸ್ಥೆ ವಿಶ್ವದಲ್ಲಿ ಅಗ್ರಗಣ್ಯ ಸಂಸ್ಥೆಯಾಗಿ ಬೆಳೆದಾಗಲು ಅದರ ವಿರುದ್ಧ ಅಪಹಾಸ್ಯ, ಕುಹಕವೂ ನಿರಂತರವಾಗಿ ಆಗುತ್ತಲೇ ಬಂದಿದೆ. ಈಗ ಚಂದ್ರಯಾನದ ಸಾಫಲ್ಯದ ನಂತರ ಅದರ ಸಾಧನೆಯನ್ನು ಅಣಕಿಸುತ್ತಿರುವುದೂ, ರಾಜಕಾರಣ ಮಾಡುವುದೂ. ಅದೇ ಮಾನಸಿಕತೆಯ ಮುಂದುವರಿದ ಭಾಗವಷ್ಟೆ.

ಭಾರತ ಚಂದ್ರನಯಾನ 3ನ್ನು ಚಂದ್ರನ ಮೇಲೆ ಯಶಸ್ವಿಯಾಗಿ ಇಳಿಸುವ ಮೂಲಕ ಈ ಸಾಧನೆ ಮಾಡಿದ ವಿಶ್ವದ ನಾಲ್ಕನೇ ರಾಷ್ಟ್ರವಾಗಿದೆ ಮತ್ತು ಇಲ್ಲಿಯ ತನಕ ಜಗತ್ತಿನ ಯಾವ ದೇಶವೂ ಹೋಗದ ಚಂದ್ರನ ದಕ್ಷಿಣ ಧ್ರುವದ ಕತ್ತಲ ಭಾಗದಲ್ಲಿ ನೌಕೆಯೊಂದನ್ನು ಸುರಕ್ಷಿತವಾಗಿ ಇಳಿಸಿದ ಜಗತ್ತಿನ ಮೊದಲ ದೇಶ ಕೂಡ ಭಾರತ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಚಂದ್ರನ ಮೈ ಮೇಲೆ ಓಡಾಡಿದ ಪ್ರಗ್ಯಾನ್ ರೋವರ್ ತನಗೆ ವಹಿಸಿದ ಅಷ್ಟೂ ಕೆಲಸಗಳನ್ನು ಅಚ್ಚುಕಟ್ಟಾಗಿ ಮುಗಿಸಿ ದಿನವಿಡಿ ಬಿಸಿಲಿನಲ್ಲಿ ಆಟವಾಡಿ ಸಂಜೆ ಅಮ್ಮನ ಮಡಿಲಿನಲ್ಲಿ ಸ್ವಚ್ಛಂದವಾಗಿ ನಿದ್ದೆ ಮಾಡುವ ಮಗುವಿನಂತೆ ಈಗ ಸ್ಲೀಪ್ ಮೋಡ್‌ಗೆ ಹೋಗಿದೆ. ಈ ಸಾಧನೆಯು ಇಸ್ರೊಗೆ ಅಗತ್ಯವಾಗಿ ಬೇಕಿತ್ತು. ಇದೇ ಉದ್ದೇಶದೊಂದಿಗೆ ನಭಕ್ಕೆ ಹಾರಿದ ಚಂದ್ರಯಾನ 2 ಕೊನೆಯ ಹಂತದಲ್ಲಿ ವಿಫಲವಾಗಿತ್ತು. ಆಗ ಭಾರತವನ್ನು, ಭಾರತದ ವಿಜ್ಞಾನಿಗಳನ್ನು, ಅದರ ಜೊತೆಗೆ ಕೇಂದ್ರದ ಪ್ರಧಾನಿ ಶ್ರೀ ಮೋದಿ ನೇತೃತ್ವದ ಸರ್ಕಾರವನ್ನು ಹಲವರು ನಿಂದಿಸಿದ್ದರು. ಈ ಚಂದ್ರಯಾನ 3 ಅಂತಹ ಅನೇಕ ಟೀಕೆಗಳಿಗೆ ಉತ್ತರವೂ ಹೌದು, ಜೊತೆಗೆ ಬಾಹ್ಯಾಕಾಶ ಕ್ಷೇತ್ರದಲ್ಲಿ ಚಂದ್ರನ ಕುರಿತಾದ ಅಧ್ಯಯನಗಳಿಗೆ ಕೈಗೊಂಡ ಅನೇಕ ಸಂಶೋಧನೆಗಳ ಪೈಕಿ ಅತ್ಯಂತ ಮಹತ್ವದ್ದೂ ಕೂಡ. ಇಲ್ಲಿ ಭಾರತೀಯ ವಿಜ್ಞಾನಿಗಳು ಕೈಗೊಳ್ಳುವ ಸಂಶೋಧನೆ ಮತ್ತು ಅದರಿಂದ ತಿಳಿಯಲಿರುವ ವಿಚಾರ ಜಗತ್ತಿನ ಇಡೀ ಬಾಹ್ಯಾಕಾಶ ಕ್ಷೇತ್ರಕ್ಕೆ ಮಹತ್ತರವಾದ ಕೊಡುಗೆಯನ್ನು ನೀಡಲಿದೆ. ಇದೇ ಕಾರಣಕ್ಕೆ ಪ್ರಧಾನಿ ಶ್ರೀ ಮೋದಿಯವರು ಆಫ್ರಿಕಾದ ಬ್ರಿಕ್ಸ್ ಸಮ್ಮೇಳನದಲ್ಲೇ ಕುಳಿತು ಈ ಐತಿಹಾಸಿಕ ಗಳಿಗೆಯನ್ನು ವೀಕ್ಷಣೆ ಮಾಡಿದರು. ಈ ಸಾಧನೆ ಕೇವಲ ಭಾರತಕ್ಕೆ ಮಾತ್ರವಲ್ಲದೇ ಇಡೀ ಮನುಕುಲಕ್ಕೆ ಇದರ ಲಾಭ ಆಗಲಿದೆ ಎಂದು ಪ್ರಧಾನಿ ಶ್ರೀ ಮೋದಿ ಹೇಳಿದರು. ಭಾರತವೇನೋ ಜಗತ್ತಿಗೇ ತನ್ನ ಸಾಧನೆಯ ಫಲವನ್ನು ಕೊಡಲು ಹೊರಟಿತು, ಆದರೆ ಜಗತ್ತಿನ ಒಂದಷ್ಟು ಮಂದಿಗೆ ಭಾರತದ ಈ ಸಾಧನೆ ಯಾಕೋ ಮೈ ಮನಕ್ಕೆ ಬೆಂಕಿ ಹತ್ತಿಸಿದೆ.

1999 ರಲ್ಲಿ, ದಿ. ವಾಜಪೇಯಿಯವರು ಪ್ರಧಾನಿಯಾಗಿದ್ದಾಗ ಚಂದ್ರಯಾನದ ಯೋಜನೆ ಸರಕಾರದ ಎದುರು ಪ್ರಸ್ತಾಪಕ್ಕೆ ಬಂದಿತು. ದಿ. ವಾಜಪೇಯಿಯವರು ಚಂದ್ರನ ಅಧ್ಯಯನದ ಯೋಜನೆಯನ್ನು ಮುಂದುವರಿಸಲು ವಿಜ್ಞಾನಿಗಳಿಗೆ ಹೇಳಿದರು. ಇದಲ್ಲದೆ, ಅವರು ಮಿಷನ್‌ನ ಹೆಸರನ್ನು 'ಸೋಮಯಾನ್' ನಿಂದ 'ಚಂದ್ರಯಾನ' ಎಂದು ಬದಲಾಯಿಸಿದ್ದರು. ಆ ಸಮಯದಲ್ಲಿ ಸೋಮಯಾನ ಎಂದು ಮರುನಾಮಕರಣ ಮಾಡುವ ಅವರ ನಿರ್ಧಾರವು ಬಾಹ್ಯಾಕಾಶ ವಿಜ್ಞಾನಿಗಳಿಗೆ ಆಶ್ಚರ್ಯವನ್ನುಂಟು ಮಾಡಿತು. ಏಕೆಂದರೆ ಅವರು ಋಗ್ವೇದದಲ್ಲಿ ಉಲ್ಲೇಖಿಸಲಾದ ಸಂಸ್ಕೃತ ಶ್ಲೋಕದಿಂದ 'ಸೋಮಯಾನ'ವನ್ನು ಅವರು ಆರಿಸಿಕೊಂಡಿದ್ದರು ಓ ಚಂದ್ರನೇ, ನಮ್ಮ ಬುದ್ಧಿಯ ಮೂಲಕ ನಾವು ನಿಮ್ಮನ್ನು ತಿಳಿದುಕೊಳ್ಳಬೇಕು. ನೀವು ನಮಗೆ ಜ್ಞಾನವನ್ನು ನೀಡುತ್ತೀರಿ. ಸರಿಯಾದ ಮಾರ್ಗದ ಮೂಲಕ ಎಂಬರ್ಥದ ಶ್ಲೋಕವಾಗಿತ್ತು.

ದೇಶವು ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿರುವುದರಿಂದ ಈ ಮಿಷನ್ ಅನ್ನು ಚಂದ್ರಯಾನ ಎಂದು ಕರೆಯಬೇಕು, ಸೋಮಯಾನ ಎಂದು ಕರೆಯಬಾರದು ಮತ್ತು ಚಂದ್ರನತ್ತ ಅನೇಕ ಸಂಶೋಧನಾ ಯೋಜನೆಗಳನ್ನು ಮಾಡುವುದಾಗಿ ದಿ. ವಾಜಪೇಯಿ ಹೇಳಿದ್ದರು. ಇದನ್ನು ಇಸ್ರೋದ ಮಾಜಿ ಅಧ್ಯಕ್ಷ ಡಾ. ಕಸ್ತೂರಿ ರಂಗನ್ ಅವರು ಹೇಳಿದ್ದರು. ನವಂಬರ್ 2003 ರಲ್ಲಿ, ಚೊಚ್ಚಲ ಚಂದ್ರಯಾನಕ್ಕಾಗಿ ಋಋಋಔ ಪ್ರಸ್ತಾವನೆಯನ್ನು ಸರ್ಕಾರ ಅನುಮೋದಿಸಿತು. 2003 ರಲ್ಲಿ ಭಾರತದ 56ನೇ ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ, ದಿ. ವಾಜಪೇಯಿ ಅವರು ದೆಹಲಿಯ ಕೆಂಪು ಕೋಟೆಯಿಂದ, ನಮ್ಮ ದೇಶ ಈಗ ವಿಜ್ಞಾನ ಕ್ಷೇತ್ರದಲ್ಲಿ ಎತ್ತರಕ್ಕೆ ಹಾರಲು ಸಾಧ್ಯವಾಗಿದೆ. 2008ರ ವೇಳೆಗೆ ಭಾರತವು ತನ್ನ ಬಾಹ್ಯಾಕಾಶ ನೌಕೆಯನ್ನು ಚಂದ್ರನಿಗೆ ಕಳುಹಿಸಲಿದೆ ಎಂದು ಘೋಷಿಸಲು ನನಗೆ ಸಂತೋಷವಾಗಿದೆ. ಅದಕ್ಕೆ 'ಚಂದ್ರಯಾನ' ಎಂದು ಹೆಸರಿಡಲಾಗುತ್ತಿದೆ ಎಂದು ಹೇಳಿದ್ದರು.




ಅಕ್ಟೋಬರ್ 8, 2008 ಕ್ಕೆ ಮೊದಲ ಚಂದ್ರಯಾನ ನಭಕ್ಕೆ ಹಾರಿತು. ಇದಾಗಿ 2 ನೇ ಚಂದ್ರಯಾನ ಉಡಾವಣೆ 11 ವರ್ಷಗಳ ನಂತರ ಅಂದರೆ 22 ಜುಲೈ 2019, ಅದು ಭಾಗಶಃ ಯಶಸ್ವಿಯಾಯಿತು. ಈ ಸಂದರ್ಭದಲ್ಲಿ ಅಂದಿನ ಇಸ್ರೋ ನಿರ್ದೇಶಕ ಶ್ರೀ ಸಿವನ್ ಅವರನ್ನು ಪ್ರಧಾನಿ ಶ್ರೀ ಮೋದಿ ಸಂತೈಸಿದ ರೀತಿಗೆ ಜಗತ್ತೇ ಭಾವುಕವಾಗಿತ್ತು. ಇದಾಗಿ ಕೇವಲ 4 ವರ್ಷದಲ್ಲಿ ಮೂರನೇ ಚಂದ್ರಯಾನ ಯಶಸ್ವಿಯಾಯಿತು. ಆದರೆ ಮೊದಲ ಚಂದ್ರಯಾನ ಮತ್ತು 2ನೇ ಚಂದ್ರಯಾನದ ನಡುವ ಯಾಕಿಷ್ಟು ಅಂತರ?, ಇದು ದೇಶದ ಪ್ರತಿಯೊಬ್ಬ ಪ್ರಾಜ್ಞರೂ ಯೋಚಿಸಬೇಕಾದ ವಿಚಾರ. 2004 ರಿಂದ 2014ರ ತನಕ ದೇಶದಲ್ಲಿ ಚಂದ್ರಯಾನ ಕಾರ್ಯಗತವಾಗಲಿಲ್ಲ. ಇದಕ್ಕೊಂದು ಕಾರಣ ಇದೆ, ಅದೇ 2004ರಿಂದ 2014ರ ತನಕ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರಕ್ಕೆ ಇದ್ದ ಚೀನೀ ಪ್ರೇಮ ಮತ್ತು ಅಂದಿನ ಚೀನಿ ಕಮ್ಯುನಿಸ್ಟ್ ಪಕ್ಷ ಮತ್ತು ಸೋನಿಯಾ ಗಾಂಧಿಯವರ ಜೊತೆ ಏರ್ಪಟಿದ್ದ ಒಂದು ಗುಪ್ತವಾದ ಒಪ್ಪಂದ. ಚೀನ ತನ್ನ ಚಂದ್ರಯಾನದ ಮೊದಲ ನೌಕೆ ಹಾರಿಸಿದ್ದು ಭಾರತಕ್ಕಿಂತ ಸರಿಯಾಗಿ ಒಂದು ವರ್ಷ ಮುಂಚೆ ಅಂದರೆ ಅಕ್ಟೋಬರ್ 2007ಕ್ಕೆ, ಎರಡನೆಯದ್ದು ಅಕ್ಟೋಬರ್ 2010ಕ್ಕೆ ಹಾರಿಸಿತು, ಡಿಸೆಂಬರ್ 2013ಕ್ಕೆ ಚೀನ ತನ್ನ 3ನೇ ನೌಕೆಯನ್ನು ಹಾರಿಸಿ ಚಂದ್ರನ ಉತ್ತರದ ಧ್ರುವದ ಮೇಲೆ ಇಳಿಸಿತು. ಡಿಸೆಂಬರ್ 2018ರಲ್ಲಿ 4ನೇ ಮತ್ತು 2020ರಲ್ಲಿ 5ನೇ ನೌಕೆಯನ್ನು ಹಾರಿಸಿತು. ಮತ್ತು ಮೂರು ಬಾರಿ ಚಂದ್ರನ ಮೇಲೆ ನೌಕೆಯನ್ನು ಇಳಿಸಿತು. ಆದರೆ ಭಾರತದ ಇಸ್ರೋಗೆ 2008ರ ನಂತರ ಮತ್ತೆ ಚಂದ್ರನ ಮೇಲೆ ನೌಕೆ ಕಳುಹಿಸಲು ಅಂದಿನ ಕಾಂಗ್ರೆಸ್ ಸರಕಾರದಿಂದ ಅನುಮೋದನೆ ಸಿಗಲಿಲ್ಲ. ಆ ಕಾರಣಕ್ಕಾಗಿ ಚೀನಾ ಭಾರತಕ್ಕಿಂತ ಮೊದಲು ಚಂದ್ರನ ಮೇಲೆ ನೌಕೆ ಇಳಿಸಿತು. ಅಂದು ಕಾಂಗ್ರೆಸ್ ಸರ್ಕಾರ ಇಸ್ರೋಗೆ ಪೂರ್ಣವಾದ ಬೆಂಬಲ ಕೊಟ್ಟಿದ್ದರೆ, ಭಾರತ ಚೀನಕ್ಕಿಂತಲೂ ಮುಂಚೆ ಚಂದ್ರನ ಮೇಲೆ ನೌಕೆಯನ್ನು ಇಳಿಸುತ್ತಿತ್ತು. ಇದೇ ಕಾಲಘಟ್ಟದಲ್ಲಿ ಇಂತಹಾ ಅತಿ ತೂಕದ ಉಪಗ್ರಹಗಳನ್ನು ಕಕ್ಷೆಗೆ ಒಯ್ಯುವ ಕ್ರಯೋಜನಿಕ್ ಎಂಜಿನ್ ಅಭಿವೃದ್ದಿಪಡಿಸುತ್ತಿದ್ದ ಇಸ್ರೋದ ವಿಜ್ಞಾನಿ ಡಾ. ನಂಬಿ ನಾರಾಯಣ್ ಅವರ ಮೇಲೆ ದೇಶ ವಿರೋಧಿ ಶಕ್ತಿಗಳ ಜೊತೆಗೆ ಸೇರಿ ಕಾಂಗ್ರೆಸ್ ಸರ್ಕಾರ ಸುಳ್ಳು ಕೇಸುಗಳನ್ನು ಹಾಕಿ ಅವರಿಗೆ ಇನ್ನಿಲ್ಲದ ಕಿರುಕುಳ ಕೊಟ್ಟಿತು. ಇದು ಕ್ರಯೋಜನಿಕ್ ಎಂಜಿನ್ ಅಭಿವೃದ್ದಿಯ ಮೇಲೂ ಪರಿಣಾಮ ಬೀರಿತು.

ಹೀಗೆ ಚಂದ್ರಯಾನದ ಸುತ್ತ ಆರಂಭವಾದ ರಾಜಕಾರಣಗಳು, ವಿರೋಧಗಳು ಚಂದ್ರಯಾನ 3ರ ಹೊತ್ತಿಗೆ ಕೊಂಚ ಹೆಚ್ಚೇ ಕಾಣಲು ಸಿಗುತ್ತದೆ. ಚಂದ್ರಯಾನ 3 ಲಾಂಚ್‌ಗೂ ಮುಂಚೆ ಇಸ್ರೋ ವಿಜ್ಞಾನಿಗಳು ತಿರುಪತಿಯಲ್ಲಿ ಚಂದ್ರಯಾನ 3ರ ಪ್ರತಿಕೃತಿಗೆ ಪೂಜೆ ಸಲ್ಲಿಸಿದರು. ಅದಕ್ಕೆ ಸಾಮಾಜಿಕ ಜಾಲತಾಣದಲ್ಲಿ ಒಂದಷ್ಟು ಬುದ್ದಿಜೀವಿಗಳು ಇಸ್ರೋದ ವಿಜ್ಞಾನಿಗಳು ಹೀಗೆ ಪೂಜೆ ಮಾಡುವುದು ಮೌಢ್ಯ ಮತ್ತು ಸಂವಿಧಾನ ವಿರೋಧ ಎಂದು ಹೇಳಿದರು. ಈ ಯಾನ ಚಂದ್ರನ ಮೇಲೆ ಇಳಿದ ಜಾಗವನ್ನು ಪ್ರಧಾನಿ ಮೋದಿಯವರು 'ಶಿವಶಕ್ತಿ ಪಾಯಿಂಟ್' ಎಂದು ನಾಮಕರಣ ಮಾಡಿದ್ದಕ್ಕೂ ಬುದ್ದಿಜೀವಿಗಳ ವಲಯದಲ್ಲಿ ವಿರೋಧ ವ್ಯಕ್ತವಾಯಿತು. ಈ ರೀತಿ ಹಿಂದೂ ಧಾರ್ಮಿಕತೆಗೆ ಸಂಬಂಧಿಸಿದ ಹೆಸರಿಡುವುದು ಸೆಕ್ಯುಲರ್ ತತ್ವಕ್ಕೆ ವಿರೋಧ ಎಂದರು.




ಹಿಂದೆ ಚಂದ್ರಯಾನ 1 ಚಂದ್ರನ ಮೈಮೇಲೆ ಇಳಿದ ಜಾಗವನ್ನು ಅಂದಿನ ಕಾಂಗ್ರೆಸ್ ಸರ್ಕಾರ 'ಜವಾಹರ್ ಪಾಯಿಂಟ್' ಎಂದು ನಾಮಕರಣ ಮಾಡಿದ್ದನ್ನು ಮರೆತೇ ಬಿಟ್ಟರು. ಅಂದು ಅದಕ್ಕೆ ಇಸ್ರೋ ವಿಜ್ಞಾನಿಗಳ ಹೆಸರಿಡಬೇಕಿತ್ತು ಎಂದೂ ಯಾರೂ ಹೇಳಲೇ ಇಲ್ಲ. ಪ್ರಧಾನಿ ಶ್ರೀ ಮೋದಿ ಹೆಚ್ಚು ಪ್ರಚಾರ ಪಡೆಯುತ್ತಿದ್ದಾರೆ ಎಂದೂ ಕಾಂಗ್ರೆಸ್ ಆರೋಪಿಸಿತು. ರಾಜ್ಯದ ಕಾಂಗ್ರೆಸ್ ಸರ್ಕಾರದ ಮಂತ್ರಿಗಳು, ಮುಖ್ಯಮಂತ್ರಿಗಳು ಇಸ್ರೋಗೆ ಭೇಟಿ ನೀಡಿ ಅಲ್ಲಿನ ವಿಜ್ಞಾನಿಗಳನ್ನು ಗೌರವಿಸಿದರೂ, ಮರುದಿನ ಕರ್ನಾಟಕದ ದಿನ ಪತ್ರಿಕೆಯಲ್ಲಿ ಜಾಹೀರಾತು ನೀಡುವ ಮೂಲಕ ಇಬ್ಬಂಧಿತನ ತೋರಿದರು. ಈ ಜಾಹೀರಾತು ನೋಡಿದವರಿಗೆ ಚಂದ್ರಯಾನದ ಸಾಧನೆ ಮಾಡಿದ್ದು ಇಸ್ರೋ ವಿಜ್ಞಾನಿಗಳೋ ಅಥವಾ ಕರ್ನಾಟಕದ ಕಾಂಗ್ರೆಸ್ ಸರಕಾರವೋ ಎಂಬ ಅನುಮಾನ ಬರುವಂತಿತ್ತು.

ಭಾರತದ ಮಂಗಳಯಾನದಂತೆ ಚಂದ್ರಯಾನವೂ ಪಾಶ್ಚಾತ್ಯರಲ್ಲಿ ಅಸಹನೆಯ ಕಿಡಿ ಹೊತ್ತಿಸಿದೆ. ಬ್ರಿಟನ್ನಿನ ರಾಜಕಾರಣಿ ಶ್ರೀ ನೈಜಲ್ ಫರಾಜ್ ಭಾರತದಲ್ಲಿ ಕಿತ್ತು ತಿನ್ನುವ ಬಡತನವಿದ್ದರೂ ಭಾರತ ಬಾಹ್ಯಾಕಾಶ ಕ್ಷೇತ್ರದಲ್ಲಿ ಹಣ ಪೋಲು ಮಾಡುತ್ತಿದೆ ಎಂದು ಹೇಳಿದ್ದರು. ಪ್ಯಾಟ್ರಿಕ್ ಕ್ರಿಸ್ಟಿ ಎನ್ನುವ ಯುರೋಪಿನ ಪತ್ರಕರ್ತನೊಬ್ಬ ಭಾರತ ಚಂದ್ರನ ಮೇಲೆ ನೌಕೆಯನ್ನು ಇಳಿಸಲು ಸಮರ್ಥವಾಗಿದೆ ಅಂದ ಮೇಲೆ ಅದು ಇಂಗ್ಲೆಂಡಿನಿಂದ ಪಡೆದ 2 ಬಿಲಿಯನ್ ಪೌಂಡ್ ಹಿಂದಿರುಗಿಸಬೇಕು ಎನ್ನುವ ಇಂತಹ ಬಹಳಷ್ಟು ಟೀಕೆಗಳು ಬಂದವು. ಭಾರತ ಚಂದ್ರನ ಮೇಲೆ ನೌಕೆಯನ್ನೇ ಇಳಿಸಿಲ್ಲ, ಇದು ಭಾರತ ಸೃಷ್ಟಿ ಮಾಡಿದ ಮಾಯಾಜಾಲ ಅಂದವರೂ ಇದ್ದಾರೆ. ಆದರೆ ಭಾರತ ಇವರನ್ನೆಲ್ಲ ಹಿಂದೆ ಹಾಕಿ ಸಾಧನೆ ಮಾಡುತ್ತಿರುವುದು ಬಹಳಷ್ಟು ಜನರಿಗೆ ಅರಗಿಸಿಕೊಳ್ಳಲು ಆಗುತ್ತಿಲ್ಲ. ಇವರ ಕುಹಕ ಟೀಕೆಗೆ ಇಸ್ರೋ ಕಾಲ ಕಾಲಕ್ಕೆ ಪ್ರಜ್ಞಾ ರೋವರ್ ಕಳುಹಿಸುತ್ತಿದ್ದ ಚಿತ್ರಗಳನ್ನು ಹಂಚಿಕೊಂಡು ಉತ್ತರ ಕೊಟ್ಟಿತು.




# ಕಚ್ಚತೀವು ದ್ವೀಪ

## ಇತಿಹಾಸ, ವಾಸ್ತವ ಮತ್ತು ರಾಜಕಾರಣ




**1974ರಲ್ಲಿ ಭಾರತದ ಅಂದಿನ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಶ್ರೀಲಂಕಾದ ಅಂದಿನ ಪ್ರಧಾನಮಂತ್ರಿಯಾಗಿದ್ದ ಸಿರಿಮಾವೋ ಬಂಡಾರನಾಯಿಕೆ ಜೊತೆ ಅಸಂವಿಧಾನಿಕ ಒಪ್ಪಂದಕ್ಕೆ ಸಹಿ ಹಾಕಿ ಕಚ್ಚತೀವು ದ್ವೀಪವು ಶ್ರೀಲಂಕಾಗೆ ಸೇರಿದ ದ್ವೀಪ ಎಂದು ದೇಶದ ಒಂದು ದ್ವೀಪವನ್ನೇ ತಮ್ಮ ಸ್ವಯಾರ್ಜಿತ ಸ್ವತ್ತೆಂಬಂತೆ ಸರ್ವಾಧಿಕಾರಿ ಧೋರಣೆಯ ಸಾಕ್ಷಿಯಾಗಿ ಬಿಟ್ಟುಕೊಟ್ಟರು. ಮುಂದುವರೆದು 1976ರಲ್ಲಿ ಮತ್ತೊಂದು ಒಪ್ಪಂದದ ಮೂಲಕ ಭಾರತ ಕಚ್ಚತೀವು ಪ್ರದೇಶದಲ್ಲಿ ತನ್ನ ಮೀನುಗಾರಿಕೆಯ ಹಕ್ಕುಗಳನ್ನು ಸಹ ಬಿಟ್ಟುಕೊಟ್ಟಿತು. ಹೇಳಬೇಕೆಂದರೆ ದಿ. ಶ್ರೀಮತಿ ಇಂದಿರಾಗಾಂಧಿ ಅವರು ಈ ದ್ವೀಪವನ್ನು ತಮ್ಮ ಪಿತ್ರಾರ್ಜಿತ ಆಸ್ತಿ ಎಂಬಂತೆ ಶ್ರೀಲಂಕಾಗೆ ಬಳುವಳಿಯಾಗಿ ನೀಡಿದರು.**



**ಅಶ್ವಿನಿ ಶಂಕರ್**
ಸದಸ್ಯರು
ರಾಜ್ಯ ಪ್ರಕಾಶನ ಪ್ರಕೋಷ್ಠ

**ಭಾ**ರತದ ತಮಿಳುನಾಡು ಮತ್ತು ಉತ್ತರ ಶ್ರೀಲಂಕಾವನ್ನು ವಿಭಜಿಸುವ ಪಾಕ್ ಜಲಸಂಧಿ (Pak Strait)ಯಲ್ಲಿ ಒಂದು ಪುಟ್ಟ, ಸುಂದರ, ನೈಸರ್ಗಿಕ ಸಂಪತ್ತಿನಿಂದ ಕೂಡಿದ, ರಮ್ಯ ಮನೋಹರವಾದ 163 ಎಕರೆಗಳಷ್ಟು ವಿಸ್ತೀರ್ಣವುಳ್ಳ ದ್ವೀಪದ ಹೆಸರು 'ಕಚ್ಚತೀವು' ಭಾರತದಿಂದ ಬರೀ 10 ಮೈಲಿಗಳಷ್ಟು ದೂರದಲ್ಲಿದೆ. ಈ ದ್ವೀಪ ಬಂಗಾಳಕೊಲ್ಲಿಯನ್ನು ಅರಬ್ಬಿ ಸಮುದ್ರದ ಜೊತೆ ಬೆಸೆಯುತ್ತದೆ. ಇಂತಹಾ ಒಂದು ರಮಣೀಯ ದ್ವೀಪವು ವಿವಾದದ ಕೇಂದ್ರ ಬಿಂದುವಾಗಿದೆ. ಈ ದ್ವೀಪದ ವಿವಾದಕ್ಕೆ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರೊಬ್ಬರೇ ಒಂದು ಶಾಶ್ವತ ಪರಿಹಾರ ಕಲ್ಪಿಸಲು ಸಾಧ್ಯವೆಂದು ಹೇಳಲಾಗುತ್ತಿದೆ ಹಾಗೂ ಇದು ವಾಸ್ತವೂ ಹೌದು.

ಇತಿಹಾಸದ ಪುಟಗಳನ್ನು ತೆರೆದಾಗ ಗಮನಕ್ಕೆ ಬರುವ ಸತ್ಯವೇನೆಂದರೆ 17ನೇ ಶತಮಾನದಿಂದ ಕಚ್ಚತೀವು ದ್ವೀಪವು ಭಾರತದ ಮಧುರೈ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿದ್ದ ರಾಮನಾಡ್ ಸಾಮ್ರಾಜ್ಯದ ಭಾಗವಾಗಿತ್ತು. ನಂತರ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಈ ದ್ವೀಪವು ಮದ್ರಾಸ್ ಪ್ರೆಸಿಡೆನ್ಸಿಯ ಭಾಗವಾಯಿತು. ಬ್ರಿಟಿಷರ ಆಳ್ವಿಕೆಯ ಅವಧಿಯಲ್ಲಿ ಭಾರತ ಮತ್ತು ಶ್ರೀಲಂಕಾ ಜಂಟಿಯಾಗಿ ಬ್ರಿಟಿಷರ ನಿಯಮಾನುಸಾರ ಆಡಳಿತ ನಡೆಸುತ್ತಿತ್ತು. 1947ರಲ್ಲಿ ಭಾರತವು ಸ್ವತಂತ್ರವಾದ ಸಂದರ್ಭದಲ್ಲಿಯೂ ಸಹ ಭಾರತದ ಗೆಜೆಟ್‌ನಲ್ಲಿ ಕಚ್ಚತೀವು ಭಾರತ ದೇಶದ ಅವಿಭಾಜ್ಯ ಅಂಗ ಆದರೆ ಶ್ರೀಲಂಕಾ 1997ರಿಂದಲೂ ಕಚ್ಚತೀವು ಶ್ರೀಲಂಕಾ ತನಗೆ ಸೇರಿದ ದ್ವೀಪವೆಂದು ವಾದಿಸಿತ್ತು.



**ಕಚ್ಚತೀವು ಐತಿಹಾಸಿಕವಾಗಿ ರಾಜಾ ರಾಮಾನಂದ ಪ್ರಾಂತ್ಯದ ಭಾಗ.**

**ಆಯಾಕಟ್ಟಿನ ಸ್ಥಳದ ಕಾರಣದಿಂದ ಶ್ರೀಲಂಕಾ ಕಚ್ಚತೀವನ್ನು ತನ್ನದೆನ್ನಲು ಪ್ರಾರಂಭಿಸಿತು.**

**1974ರಲ್ಲಿ ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿ ದೊಡ್ಡ ಒಪ್ಪಂದದ ಭಾಗವಾಗಿ ಕಚ್ಚತೀವು ದ್ವೀಪವನ್ನು ಶ್ರೀಲಂಕಾಕ್ಕೆ ನೀಡಿದರು.**

**ತಮಿಳುನಾಡಿನ ಮೀನುಗಾರರು ಇದನ್ನು ನಿರಾಕರಿಸಿ ಕಚ್ಚತೀವು ದ್ವೀಪದಲ್ಲಿ ಮೀನು ಹಿಡಿಯಲು ತೊಡಗಿದರು.**

**ವಿವಾದದ ಕಾರಣ :** 1974ರಲ್ಲಿ ಭಾರತದ ಅಂದಿನ ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಶ್ರೀಲಂಕಾದ ಅಂದಿನ ಪ್ರಧಾನಿ ಶ್ರೀಮತಿ ಸಿರಿಮಾವೋ ಬಂಡಾರನಾಯಿಕೆ ಜೊತೆ ಅಸಂವಿಧಾನಿಕ ಒಪ್ಪಂದಕ್ಕೆ ಸಹಿ ಹಾಕಿ ಕಚ್ಚತೀವು ದ್ವೀಪವು ಶ್ರೀಲಂಕಾಗೆ ಸೇರಿದ ದ್ವೀಪ ಎಂದು ದೇಶದ ಒಂದು ದ್ವೀಪವನ್ನೇ ತಮ್ಮ ಸ್ವಯಾರ್ಜಿತ ಸ್ವತ್ತೆಂಬಂತೆ ಸರ್ವಾಧಿಕಾರಿ ಧೋರಣೆಯ ಸಾಕ್ಷಿಯಾಗಿ ಬಿಟ್ಟುಕೊಟ್ಟರು. ಮುಂದುವರೆದು 1976ರಲ್ಲಿ ಮತ್ತೊಂದು ಒಪ್ಪಂದದ ಮೂಲಕ ಭಾರತ ಕಚ್ಚತೀವು ಪ್ರದೇಶದಲ್ಲಿ ತನ್ನ ಮೀನುಗಾರಿಕೆಯ ಹಕ್ಕುಗಳನ್ನು ಸಹ ಬಿಟ್ಟುಕೊಟ್ಟಿತು. ಹೇಳಬೇಕೆಂದರೆ ದಿ. ಶ್ರೀಮತಿ ಇಂದಿರಾಗಾಂಧಿ ಅವರು ಈ ದ್ವೀಪವನ್ನು ತಮ್ಮ ಪಿತ್ರಾರ್ಜಿತ ಆಸ್ತಿ ಎಂಬಂತೆ ಶ್ರೀಲಂಕಾಗೆ ಬಳುವಳಿಯಾಗಿ ನೀಡಿದರು. ಇದನ್ನು ಆಗಿನ ತಮಿಳುನಾಡು ಮುಖ್ಯಮಂತ್ರಿಗಳು, ಡಿಎಂಕೆ ಪಕ್ಷದ ನಾಯಕರಾದ ಶ್ರೀ ಕರುಣಾನಿಧಿ ಅವರು ಕಚ್ಚತೀವು ಭಾರತಕ್ಕೆ ಸೇರುವುದರ ಕುರಿತು ಸಂಪೂರ್ಣ ದಾಖಲೆಗಳನ್ನು ಕೇಂದ್ರಕ್ಕೆ ನೀಡಿ, ಕಚ್ಚತೀವು ದ್ವೀಪವನ್ನು ಮರುಪಡೆಯಲು ಪ್ರಧಾನಮಂತ್ರಿಗಳಿಗೆ ಮನವಿ ಸಲ್ಲಿಸಿದ್ದರು ಮತ್ತು ಉಭಯ ದೇಶಗಳ ನಡುವಿನ ಒಪ್ಪಂದವನ್ನೂ ಅಸಂವಿಧಾನಿಕವೆಂದು ಘೋಷಿಸಬೇಕೆಂದು ಆಗ್ರಹಿಸಿದರು.

ಕಚ್ಚತೀವು ದ್ವೀಪವನ್ನು ದಿ. ಇಂದಿರಾಗಾಂಧಿ ಶ್ರೀಲಂಕಾಗೆ ಬಿಟ್ಟುಕೊಟ್ಟಿದ್ದರ ಕುರಿತು ಅಮೆರಿಕ ಕೂಡ ಕಳವಳ ವ್ಯಕ್ತಪಡಿಸಿತ್ತು. ಆ ಕಾಲಘಟ್ಟದಲ್ಲಿ ದಿ. ಇಂದಿರಾಗಾಂಧಿ ತಮ್ಮ ಸರ್ವಾಧಿಕಾರಿ ಧೋರಣೆಯಿಂದ ಅಸಂವಿಧಾನಿಕ ರೀತಿಯಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳುವುದರ ಪರಿಣಾಮವಾಗಿ ಭಾರತಕ್ಕೆ ದೊಡ್ಡ ಮಟ್ಟದಲ್ಲಿ ನಷ್ಟ ತಂದೊಡ್ಡಿತು. ಕರುಣಾನಿಧಿ ಅವರ ಆಗ್ರಹಕ್ಕೆ ಸಿಡಿಮಿಡಿಗೊಂಡ ದಿ. ಇಂದಿರಾಗಾಂಧಿ ದೇಶದಲ್ಲಿ ತುರ್ತುಪರಿಸ್ಥಿತಿ ಹೇರುತ್ತಾರೆ. ಇವರ ಇಂತಹ ಸ್ವಾರ್ಥದಿಂದ ಕೂಡಿದ ನಿರ್ಣಯದ ಪರಿಣಾಮ 1,300 ಚ.ಕಿ.ಮೀ.ನಷ್ಟು ವಿಸ್ತೀರ್ಣದ ಭಾರತದ ವಿಶೇಷ ಆರ್ಥಿಕ ವಲಯದ ಬೃಹತ್ ಭಾಗವು ಅನ್ಯಾಯವಾಗಿ ಶ್ರೀಲಂಕಾದ ಪಾಲಾಯಿತು. ಇದಷ್ಟೇ ಅಲ್ಲದೆ, ಅಲ್ಲಿನ ಸಂಪದ್ಭರಿತ ಖನಿಜಗಳು, ಪೆಟ್ರೋಲಿಯಂ ಮತ್ತು ಇನ್ನಷ್ಟು ಬೆಲೆ ಬಾಳುವ ಅಂಶಗಳನ್ನು ಶ್ರೀಲಂಕೆಯ ವಶಕ್ಕೆ ನೀಡಲಾಯಿತು. ಇಷ್ಟಕ್ಕೂ ದಿ. ಇಂದಿರಾ ಗಾಂಧಿ ಹೀಗೆ ಮಾಡಿದ್ದರ ಹಿಂದಿನ ಅಸಲಿಯತ್ತೇನೆಂದರೆ ಶ್ರೀಲಂಕಾದ ಆಗಿನ ಪ್ರಧಾನಮಂತ್ರಿ ಶ್ರೀಮತಿ ಸಿರಿಮಾವೋ ಬಂಡಾವನಾಯಿಕೆ ನೆಹರೂ ಕುಟುಂಬಕ್ಕೆ ಬಹಳ ಹತ್ತಿರವಾದವರು. ಅಧಿಕಾರ ದುರುಪಯೋಗಪಡಿಸಿಕೊಂಡು ದಿ. ಇಂದಿರಾಗಾಂಧಿಯವರ ರೀತಿಯಲ್ಲೇ ಸರ್ವಾಧಿಕಾರಿ ಧೋರಣೆಯಿಂದ ಶ್ರೀಮತಿ ಬಂಡಾರನಾಯಿಕೆಯೂ ಸಹ ಶ್ರೀಲಂಕಾದಲ್ಲಿ ತುರ್ತುಪರಿಸ್ಥಿತಿ ಘೋಷಿಸಿ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದ್ದರು.

ಈಗ ಪ್ರಸ್ತುತದಲ್ಲಿ ಶ್ರೀಲಂಕಾ ಕಚ್ಚತೀವು ದ್ವೀಪದಲ್ಲಿ ತನ್ನ ನೌಕಾನೆಲೆಯನ್ನು ಸ್ಥಾಪಿಸಿದ್ದು, ಯಾವುದೇ ಕಾರಣಕ್ಕೂ ಈ ದ್ವೀಪವನ್ನು ಭಾರತಕ್ಕೆ ಹಿಂತಿರುಗಿಸಲು ಸಾಧ್ಯವಿಲ್ಲ ಎನ್ನುತ್ತಿದೆ. ರಾಮೇಶ್ವರಂನ ಮೀನುಗಾರರ ನಾಯಕರಾದ ಶ್ರೀ ಪಿ. ಜೇಸುದಾಸನ್ ಅವರು ಹೇಳುವ ಪ್ರಕಾರ ಮೊದಲೆಲ್ಲಾ ಭಾರತೀಯ ಮೀನುಗಾರರು

ಮೀನು ಹಿಡಿದು, ತಮ್ಮ ಮೀನಿನ ಬಲೆಗಳನ್ನು ಒಣಹಾಕಿ, ಅಲ್ಲಿಯೇ ವಿಶ್ರಮಿಸುತ್ತಿದ್ದರಂತೆ. ಆದರೆ ಶ್ರೀಲಂಕಾದಲ್ಲಿ ನಾಗರಿಕ ಯುದ್ಧ ನಡೆದ ನಂತರ ಪರಿಸ್ಥಿತಿ ಸಂಪೂರ್ಣ ಬದಲಾಗಿದ್ದು, ಭಾರತೀಯ ಮೀನುಗಾರರು ಅಕಸ್ಮಾತ್ ಅಂತರರಾಷ್ಟ್ರೀಯ ಕಡಲ ಗಡಿ ರೇಖೆ ದಾಟಿ ಹೋದಲ್ಲಿ ಅವರ ಬಲೆಗಳನ್ನೂ ನಾಶಪಡಿಸಿ, ಶ್ರೀಲಂಕಾ ಸರ್ಕಾರವು ಮೀನುಗಾರರನ್ನು, ಅವರ ದೋಣಿಗಳನ್ನು ವಶಕ್ಕೆ ಪಡೆದುಕೊಂಡು ಬಂಧಿಸುತ್ತಾರಂತೆ!!! ಭಾರತೀಯ ಮೀನುಗಾರರ ಈ ನಡೆಯಿಂದ ಶ್ರೀಲಂಕಾದ ಮೀನುಗಾರರ ಆದಾಯಕ್ಕೆ ಧಕ್ಕೆಯುಂಟಾಗಿದೆ ಎಂದು ಆಪಾದಿಸುತ್ತಿದ್ದಾರಂತೆ.

ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ನಿಟ್ಟಿನಲ್ಲಿ 3ನೇ ಮಾರ್ಚ್ 2023ರಂದು ಶ್ರೀಲಂಕಾದ ಮೀನುಗಾರಿಕೆ ಸಚಿವರಾದ ಶ್ರೀ ಡೌಗ್ಲಾಸ್ ದೇವಾನಂದ ಅವರು ತಮ್ಮ ನೌಕಾಪಡೆಯ ಅಧಿಕಾರಿಗಳೊಂದಿಗೆ ಸೇರಿ ಉಭಯ ದೇಶಗಳ ಮೀನುಗಾರರೊಂದಿಗೆ ಕೂಡಿ ಸಭೆ ನಡೆಸಿದರು. ಆ ಸಭೆಯಲ್ಲಿ ಅವರು ಭಾರತದಲ್ಲಿನ ತಮ್ಮ ಸಹವರ್ತಿಗಳೊಡನೆ ಚರ್ಚಿಸಿ ಮೀನುಗಾರರ ಬಹುಕಾಲಿಕ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವುದಾಗಿ ತಿಳಿಸಿದರು. ಇದರ ಪರಿಣಾಮವಾಗಿ, ಮೀನುಗಾರರಿಗೆ ಶಾಶ್ವತ ಪರಿಹಾರ ಕಲ್ಪಿಸಲು ಭಾರತದ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯವು ಮತ್ತು ಮೀನುಗಾರಿಕೆ ಸಚಿವಾಲಯ ಹಾಗೂ ಶ್ರೀಲಂಕಾದ ಜಲಸಂಪನ್ಮೂಲಗಳ ಅಭಿವೃದ್ಧಿ ಸಚಿವಾಲಯದ ನಡುವೆ ಒಂದು ಜಂಟಿ ಕಾರ್ಯಸಮಿತಿಯನ್ನು ರಚಿಸಲು ನಿರ್ಧರಿಸಲಾಗಿದೆ.

**ಭಾರತಕ್ಕೆ ಕಳವಳ :** ಕಮ್ಯುನಿಸಂನಿಂದ ಹಿಡಿದು ಕರೋನಾ ವೈರಾಣುವನ್ನು ಪ್ರಪಂಚಕ್ಕೆ, ಮನುಕುಲಕ್ಕೆ ಮಾರಕವಾದದನ್ನು ಪೋಷಿಸಿ, ಪೈಶಾಚಿಕ ಕೃತ್ಯಗಳಿಗೆ ಸಾಕ್ಷಿಯಾಗುತ್ತಿರುವ ದೇಶವೆಂದರೆ ಅದು ಏಕಮಾತ್ರ ಚೀನಾ!!!

ಈಗ ಕಚ್ಚತೀವು ದ್ವೀಪದ ಮೇಲೆ ಚೀನಾದ ವಕ್ರದೃಷ್ಟಿ ಬಿದ್ದಿದೆ. ಈ ದ್ವೀಪಕ್ಕೆ ಚೀನಾ ಪ್ರವೇಶಿಸಿದೆ. ಚೀನಾ ದೇಶವು ಭಾರತ ಅಭಿವೃದ್ಧಿ ಹೊಂದುತ್ತಿರುವುದನ್ನು ಸಹಿಸಲಾರದೆ ಕೊತ ಕೊತ ಕುದಿಯುತ್ತಿದೆ. ಅದು, ಭಾರತದ ನೌಕಾಪಡೆಯ ಚಟುವಟಿಕೆಗಳ ಮೇಲೆ ಹದ್ದಿನ ಕಣ್ಣಿಡಲು ಶ್ರೀಲಂಕಾಗೆ ಆರ್ಥಿಕ ನೆರವು ನೀಡುವ ನಾಟಕವಾಡುತ್ತಾ, ಶ್ರೀಲಂಕಾಗೆ ಸೇರಿದ ಅನೇಕ ಭೂ ಭಾಗಗಳನ್ನು ಒಂದೊಂದಾಗಿ ಖರೀದಿಸುತ್ತಾ, ಅವುಗಳ ಮೇಲೆ ತನ್ನ ಹಿಡಿತ ಸಾಧಿಸುತ್ತಿದೆ. ವಾಸ್ತವವೆಂದರೆ ಚೀನಾ ಕಚ್ಚತೀವು ದ್ವೀಪವನ್ನು  ತನ್ನ ವಶಕ್ಕೆ ತೆಗೆದುಕೊಳ್ಳಲು ಹರಸಾಹಸ ಪಡುತ್ತಿದ್ದು, ಆ ದ್ವೀಪದಲ್ಲಿ ಚೀನಾದ ನೌಕಾನೆಲೆ ಸ್ಥಾಪಿಸಲು ಹುನ್ನಾರ ನಡೆಸಿದೆ. ಅಲ್ಲಿನ ಸಮಸ್ಯೆಗಳನ್ನು ತನ್ನ ಹತೋಟಿಗೆ ತೆಗೆದುಕೊಳ್ಳಲು ಭಗೀರಥ ಪ್ರಯತ್ನ ನಡೆಸುತ್ತಿದೆ.

ಭಾರತದಿಂದ ಕೇವಲ 10 ಮೈಲಿ ದೂರದಲ್ಲಿರುವ ಈ ಕಚ್ಚತೀವು ದ್ವೀಪದ ಮೇಲೆ ಈಗ ಚೀನೀ ಕಂಪನಿಯೊಂದು ಅತೀ ಕಡಿಮೆ ವೆಚ್ಚದಲ್ಲಿ ಬೃಹತ್ ಸೌರಶಕ್ತಿಯ ಘಟಕವನ್ನು ಸ್ಥಾಪಿಸಲು ನಿರ್ಣಯಿಸಿದೆ.



**ಪ್ರಧಾನಿ ಶ್ರೀ ಮೋದಿ ನೇತೃತ್ವದ ಸರ್ಕಾರದಿಂದ ಮಾತ್ರವೇ ಇದಕ್ಕೆ ಪರಿಹಾರ ಸಾಧ್ಯವೆಂಬ ನಂಬಿಕೆ**

2014 ರಿಂದ ಪ್ರಧಾನಿ ಶ್ರೀ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಈ ರೀತಿಯ ಇತರೆ ಸಮಸ್ಯೆಗಳಾದ ಪಾಕಿಸ್ತಾನದಿಂದ ಪಾಕ್ ಆಕ್ರಮಿತ ಕಾಶ್ಮೀರ, ಚೀನಾದಿಂದ ನಿಜವಾದ ನಿಯಂತ್ರಣ ರೇಖೆಯನ್ನು  ಮತ್ತು ಶ್ರೀಲಂಕಾದಿಂದ ಕಚ್ಚತೀವು ದ್ವೀಪವನ್ನು ಭಾರತ ಹಿಂಪಡೆದುಕೊಳ್ಳಬೇಕೆಂಬ ಕೂಗು ತೀವ್ರವಾಗಿ ಕೇಳತೊಡಗಿದೆ. ಏಕೆಂದರೆ ಇಂತಹ ಸಮಸ್ಯೆಗಳಿಗೆಲ್ಲಾ ಬಿಜೆಪಿಯಿಂದಲೇ, ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ಚಾಣಾಕ್ಷತನದಿಂದ ಮಾತ್ರವೇ ಪರಿಹಾರ ಸಾಧ್ಯವೆಂದು ಈ ದೇಶದ 140 ಕೋಟಿ ಜನ ನಾಗರಿಕರು ತಮ್ಮ ನಾಯಕನ ಮೇಲೆ ವಿಶ್ವಾಸ ಹೊಂದಿದ್ದಾರೆ.

ಕಚ್ಚತೀವು ದ್ವೀಪವನ್ನು ಶ್ರೀಲಂಕಾದಿಂದ ಮರುಪಡೆಯಲು ಭಾರತವು ಕಂಕಣಬದ್ಧವಾಗಿದೆ ಎಂದು ಜನರಲ್ ವಿ.ಕೆ. ಸಿಂಗ್ ಹೇಳಿದ್ದಾರೆ. ಅವರು ಮಂಡಿಸಿರುವ ಸತ್ಯವೆಂದರೆ ಶ್ರೀಲಂಕಾದ ಮೀನುಗಾರರಿಗೆ ಎಲ್ಲಾ ದಿಕ್ಕುಗಳಿಂದ ಸಮುದ್ರ ಸುತ್ತುವರೆದಿದೆ, ಅಲ್ಲಿನ ಮೀನುಗಾರರು ಯಾವ ದಿಕ್ಕಿನಲ್ಲಾದರೂ ಮೀನು ಹಿಡಿಯಬಹುದು. ಆದರೆ ತಮಿಳುನಾಡಿನ ಮೀನುಗಾರರಿಗೆ ಇದೊಂದೇ ಜಾಗ ಲಭ್ಯವಿರುವುದು. ಆದರೆ ಅಲ್ಲಿ ಮೀನು ಹಿಡಿಯಲು ಹೋದ ಭಾರತೀಯ ಮೀನುಗಾರರನ್ನು ಬಂಧಿಸಲಾಗುತ್ತಿದೆ. ಆದ್ದರಿಂದ ತಮಿಳುನಾಡು ಸರ್ಕಾರ ಅನೇಕ ಬಾರಿ ಈ ವಿವಾದಕ್ಕೆ ಶಾಶ್ವತ ಪರಿಹಾರ ನೀಡಬೇಕೆಂದು ಕೇಂದ್ರಕ್ಕೆ ಮನವಿ ಮಾಡುತ್ತಲೇ ಬಂದಿದೆ. ಹಾಗಾಗಿ ಈ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವುದು ಅತ್ಯಾವಶ್ಯಕವಾಗಿದೆ. ಭಾರತ ಮತ್ತು ಶ್ರೀಲಂಕಾ ನಡುವಿನ ಸಾಂಸ್ಕೃತಿಕ ಬಾಂಧವ್ಯ ಪುರಾತನವಾಗಿದ್ದು, ಅದನ್ನು ಮತ್ತಷ್ಟು ಬಲಪಡಿಸಬೇಕಿದೆ. ಇದಲ್ಲದೆ ಎರಡೂ ದೇಶಗಳ ನಡುವೆ ಐತಿಹಾಸಿಕ, ವಾಣಿಜ್ಯ ವ್ಯವಹಾರಗಳೂ ಸಾಕಷ್ಟು ವರ್ಷಗಳಿಂದ ನಡೆಯುತ್ತಾ ಬಂದಿದ್ದು, ಅದು ಗಾಢವಾಗಿ ಬೇರೂರಿದೆ. ಭಾರತ ಮತ್ತು ಶ್ರೀಲಂಕಾ ಉಭಯ ದೇಶಗಳು ಸೇರಿಕೊಂಡು ಅನೇಕ




ರೀತಿಯ ಮುಕ್ತವಾದ ವಾಣಿಜ್ಯ ಒಪ್ಪಂದಗಳಿಗೆ ಸಹಿ ಹಾಕಿವೆ. ಇವುಗಳನ್ನೆಲ್ಲಾ ಬಳಸಿಕೊಂಡು ಉಭಯ ದೇಶಗಳ ನಡುವಿನ ಮೀನುಗಾರರ ಸಮಸ್ಯೆಗೆ ಒಂದು ಅಂತಿಮ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿ ಪ್ರಧಾನಿ ಶ್ರೀ ಮೋದಿ ಪಣತೊಟ್ಟಿದ್ದಾರೆ.

2014 ರವರೆಗೂ ಭಾರತ ಮತ್ತು ಶ್ರೀಲಂಕಾಗಳಲ್ಲಿ ಒಂದೇ ರೀತಿಯ ಆಗುಹೋಗುಗಳು, ಸರ್ಕಾರಗಳು ಅಸ್ತಿತ್ವದಲ್ಲಿದ್ದವು. ಆದರೆ 2014ರಲ್ಲಿ ಇಲ್ಲಿನ ಸರ್ಕಾರ ಬದಲಾಗುತ್ತದೆ, ಶ್ರೀಲಂಕಾದಲ್ಲಿ ಸರ್ಕಾರದ ಪತನವಾಗಿ, ಅವರ ಪರಿಸ್ಥಿತಿ ಶೋಚನೀಯ ಸ್ಥಿತಿಗೆ ತಲುಪುತ್ತದೆ ಮತ್ತು ಶ್ರೀಲಂಕಾ ಗುಳ್ಳೆ ನರಿಯಾದ ಚೀನಾ ದೇಶದ ಕಪಿ ಮುಷ್ಠಿಯಲ್ಲಿ ಸಿಲುಕಿಕೊಂಡು ಚೀನಾದ ಕೈಗೊಂಬೆಯಾಗಿ ಬಿಟ್ಟಿದೆ. ಇತ್ತ ಭಾರತವು ವಿಶ್ವದಲ್ಲಿ ಸೂಪರ್ ಪವರ್ ರಾಷ್ಟ್ರವಾಗಿ, ಪ್ರಧಾನಿ ಶ್ರೀ ಮೋದಿ ಅವರ ದಕ್ಷ ಆಡಳಿತದ ಪರಿಣಾಮವಾಗಿ ವಿಶ್ವದ 5ನೇ ಅಗ್ರ ಆರ್ಥಿಕ ಸಧೃಡ ರಾಷ್ಟ್ರವಾಗಿ ಹೊರಹೊಮ್ಮಿದೆ, ಹಾಗಾಗಿ ಚೀನಾ ಹೇಗಾದರೂ ಸರಿ ಕಚ್ಚತೀವು ದ್ವೀಪವನ್ನು ತನ್ನ ಕೈವಶಪಡಿಸಿಕೊಂಡು ಭಾರತದ ಮೇಲೆ ತೀವ್ರ ನಿಗಾವಹಿಸಲು ಇನ್ನಿಲ್ಲದ ಹರ ಸಹಾಸ ಪಡುತ್ತಿದೆ.

ಈ ಎಲ್ಲಾ ಅಂಶಗಳು ಒಂದೆಡೆಯಾದರೆ ಸಂಸತ್ತಿನಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ 'ಕಚ್ಚತೀವು' ದ್ವೀಪವೆಂದರೇನು? ಎಂದು ಪ್ರಶ್ನಿಸಿದಾಗ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ರಾಹುಲ್ ಗಾಂಧಿ ಸದ್ದಿಲ್ಲದೇ, ಜಾಣ ಕಿವುಡುತನ ಪ್ರದರ್ಶಿಸುತ್ತಾ ಸಂಸತ್ತಿನಿಂದ ಮೆಲ್ಲಗೆ ತಮ್ಮ ಜಾಗ ಖಾಲಿ ಮಾಡಿದ್ದನ್ನು ನಾವೆಲ್ಲಾ ನೋಡಿದ್ದೇವೆ. ಕಾಂಗ್ರೆಸ್ ಈ ವಿವಾದ ಪರಿಹಾರವಾಗದಂತೆ ಹಿಂದಿನಿಂದಲೂ ಹುನ್ನಾರ ನಡೆಸುತ್ತಿದೆ. ಕಾಂಗ್ರೆಸ್‌ನ ಅಧಿನಾಯಕಿ, ತನ್ನ ಅಜ್ಜಿಯ ನಿರ್ಣಯಕ್ಕೆ ಧಕ್ಕೆಯಾಗುವುದೆಂದು ಭಾವಿಸಿ ಇದಕ್ಕೆ ವಿರೋಧಿಸಿ, ಈ ವಿವಾದನ್ನು ಬಗೆಹರಿಸದಹಾಗೆ ಅಡ್ಡಿಪಡಿಸುತ್ತಿದೆ. ಇದು ಕಾಂಗ್ರೆಸ್‌ನ ಅತ್ಯಂತ ನಾಚಿಕೆಗೇಡಿನ, ದೇಶ ವಿರೋಧಿ ನಿಲುವಾಗಿದೆ.

ಏನೇ ಆಗಲಿ, ದೇಶದ ಒಂದು ಭೂ ಭಾಗವಾಗಿದ್ದ ಸುಂದರ ದ್ವೀಪವಾದ 'ಕಚ್ಚತೀವು' ಅಸಂವಿಧಾನಿಕ ರೀತಿಯಲ್ಲಿ ಸಹಿತಾಸಕ್ತಿಯ ದೃಷ್ಟಿಯಿಂದ ಶ್ರೀಲಂಕಾಗೆ ರೀತಿ ರಿವಾಜಿಲ್ಲದೆ ಬಳುವಳಿಯಾಗಿ ನೀಡಿದ್ದು ಎಷ್ಟು ಸರಿ? ಇದನ್ನು ದೇಶದ ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕ ಸಹ ಧಿಕ್ಕರಿಸುವಂತಹ, ಖಂಡಿಸುವಂತಹ, ಎಂದಿಗೂ ಕ್ಷಮಿಸಲಾಗದಂತಹ ದ್ರೋಹ ಎಂಬ ನಿಲುವಿಗೆ ಬರುತ್ತಾರೆ.

ಈ 'ಕಚ್ಚತೀವು' ದ್ವೀಪದ ವಿವಾದವನ್ನು ಶಾಶ್ವತವಾಗಿ ಬಗೆಹರಿಸಲು ಸನ್ಮಾನ್ಯ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಇಂದಿನ ತಮಿಳುನಾಡಿನ ಮುಖ್ಯಮಂತ್ರಿಯಾದ ಶ್ರೀ ಸ್ಟಾಲಿನ್ ಅವರು INDIA ಒಕ್ಕೂಟದ ಸದಸ್ಯರಾಗಿದ್ದರೂ, ಕಾಂಗ್ರೆಸ್ ಪಕ್ಷ ಮೈತ್ರಿ ಮಾಡಿಕೊಂಡಿದ್ದರೂ ಸಹ ಪ್ರಧಾನಿ ಶ್ರೀ ನರೇಂದ್ರ ಮೋದಿಯವರಲ್ಲಿ ನಂಬಿಕೆ ಇಟ್ಟಿರುವುದು ಪ್ರಧಾನಿ ಶ್ರೀ ನರೇಂದ್ರ ಮೋದಿಯವರಿಂದಲೇ ಪರಿಹಾರ ಸಾಧ್ಯವೆಂಬುದನ್ನು ಸೂಚಿಸಲು ಹಿಡಿದಂತಹ ಕೈಗನ್ನಡಿಯಾಗಿದೆ.

**'ಕಚ್ಚತೀವು' ದ್ವೀಪ ಮತ್ತೊಮ್ಮೆ ಭಾರತಕ್ಕೆ ಸೇರಲಿ ಎಂದು ಆಶಿಸೋಣ...**



# ಒಂದು ದೇಶ ಚುನಾವಣೆ

## ಇತಿಹಾಸದ ಪುನರಾವರ್ತನೆಯಷ್ಟೆ...




ಸಿ.ಟಿ. ರವಿ

ಬಿಜೆಪಿ ನಾಯಕರು


**ದೇಶದಲ್ಲಿ 125 ಬಾರಿ ರಾಷ್ಟ್ರಪತಿ ಆಡಳಿತವನ್ನು ಹೇರಲಾಗಿದೆ. ಅದರಲ್ಲಿ 90 ಬಾರಿ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗಲೇ ಚುನಾಯಿತ ಸರ್ಕಾರದ ಮೇಲೆ ರಾಷ್ಟ್ರಪತಿ ಆಡಳಿತವನ್ನು ಹೇರಲಾಗಿದೆ. ಇದರಲ್ಲಿ ಕೆಲವೊಂದು ಸಂದರ್ಭಗಳಲ್ಲಿ ರಾಜಕೀಯ ಬಿಕ್ಕಟ್ಟುಗಳ ಕಾರಣದಿಂದ ಆಗಿರುವುದನ್ನು ಹೊರತು ಪಡಿಸಿದರೆ, ಉಳಿದಂತೆ ಪೂರ್ಣವಾಗಿ ರಾಜಕೀಯ ದ್ವೇಷ ಮತ್ತು ಅಸಹಿಷ್ಣುತೆಯ ಕಾರಣಕ್ಕೆ ಚುನಾಯಿತ ಸರ್ಕಾರಗಳ ವಜಾ ಆಗಿರುವುದು ಇತಿಹಾಸದ ಸತ್ಯದ ಸಂಗತಿ. ಏಕ ಕಾಲದಲ್ಲಿ ನಡೆಯುತ್ತಿದ್ದ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳ ಹಳಿ ತಪ್ಪಿದ್ದು ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಕಾಲಕ್ಕೆ ಅತಿರೇಕಕ್ಕೆ ಹೋದ ಇಂತಹ ಆಡಳಿತದಿಂದಲೇ ಎಂಬುದೂ ಉಲ್ಲೇಖನೀಯ.**



# ಆರ್ಟಿಕಲ್ 356

**ಕೇಂ**ದ್ರ ಸರ್ಕಾರ ದೇಶದೊಳಗೆ '**ಒಂದು ದೇಶ ಒಂದು ಚುನಾವಣೆ**' ವ್ಯವಸ್ಥೆಯ ಕುರಿತು ಅಧ್ಯಯನ ನಡೆಸಲು ಮಾಜಿ ರಾಷ್ಟ್ರಪತಿ ಶ್ರೀ ರಾಮನಾಥ ಕೋವಿಂದರ ನೇತೃತ್ವದ ಸಮಿತಿಯನ್ನು ನೇಮಿಸಿದೆ. ಇದರ ಜೊತೆಗೆ ಸೆಪ್ಟೆಂಬರ್ 18 ರಿಂದ 22ರ ತನಕ ವಿಶೇಷ ಸಂಸತ್ ಅಧಿವೇಶನವನ್ನು ಕರೆಯಲಾಗಿದೆ. ಇದು ದೇಶಾದ್ಯಂತ ಒಂದಷ್ಟು ಚರ್ಚೆಯನ್ನೂ ಹುಟ್ಟು ಹಾಕಿದೆ. ಇಂತಹ ಸಕಾರಾತ್ಮಕ ಚರ್ಚೆಗಳು ಅದಾಗಲೇ ದೇಶದ ಜನ ಮಾನಸದೊಳಗೆ ಈ ವಿಚಾರವಾಗಿ ಒಂದು ಸ್ಪಷ್ಟತೆ ಮೂಡಿಸಲು ಸಾಧ್ಯವಾಗುವುದು. ಇಂದಿನ ಚುನಾವಣಾ ವ್ಯವಸ್ಥೆಯನ್ನು ಗಮನಿಸಿದಾಗ ಭಾರತದಂತಹ ದೇಶದಲ್ಲಿ 28 ರಾಜ್ಯಗಳು, 8 ಕೇಂದ್ರಾಡಳಿತ ಪ್ರದೇಶ ಜೊತೆಗೆ ಸಾವಿರಾರು ಸಂಖ್ಯೆಯಲ್ಲಿರುವ ಸ್ಥಳೀಯ ಆಡಳಿತ ಸಂಸ್ಥೆಗಳು. ಈ ಪ್ರಮಾಣದಲ್ಲಿ ವ್ಯವಸ್ಥೆಯಲ್ಲಿ ಏಕರೂಪದ ಚುನಾವಣೆ ವ್ಯವಸ್ಥೆ ಮಾಡಲು ಸಾಧ್ಯವಿದೆಯಾ ಅನ್ನುವ ಪ್ರಶ್ನೆ ಮೂಡುವುದು ಸಹಜವಾದರೂ ದೇಶದ ಸ್ವಾತಂತ್ರ್ಯಾ ನಂತರ ನಡದ ಮೊದಲ ಚುನಾವಣೆಯಿಂದ ಅನೇಕ ಬಾರಿ ಇಡೀ ದೇಶದಲ್ಲಿ ಒಂದು ಚುನಾವಣಾ ಪದ್ಧತಿಯೇ ಜಾರಿಯಲ್ಲಿತ್ತು ಎಂಬುದೂ ಸತ್ಯದ ಸಂಗತಿ.

ಭಾರತದಲ್ಲಿ ಮೊದಲ ಬಾರಿಗೆ ಸಾರ್ವತ್ರಿಕ ಚುನಾವಣೆ ನಡೆದದ್ದು 25 ಅಕ್ಟೋಬರ್ 1951 ಮತ್ತು 21 ಫೆಬ್ರವರಿ 1952ರ ನಡುವೆ. 68 ಹಂತದಲ್ಲಿ ನಡೆದ ಈ ಚುನಾವಣೆಯಲ್ಲಿ ಸುಮಾರು 35 ಕೋಟಿ ಇದ್ದ ಭಾರತದ ಜನ ಸಂಖ್ಯೆಯಲ್ಲಿ 16 ಕೋಟಿ ಮಂದಿ ಚುನಾವಣೆಯಲ್ಲಿ ಭಾಗಿಯಾಗಿದ್ದರು. ನಂತರ 1957ರಲ್ಲಿ ರಾಜ್ಯ ಮತ್ತು ಲೋಕಸಭೆಗಳಿಗೆ ಏಕಕಾಲದಲ್ಲಿಯೇ ನಡೆದ ಚುನಾವಣೆಯೂ ಸೇರಿದಂತೆ ದೇಶದಲ್ಲಿ 2 ಬಾರಿ 'ಒಂದು ದೇಶ ಒಂದು ಚುನಾವಣೆ' ಯಶಸ್ವಿಯಾಗಿ ನಡೆದಿವೆ. ಆದರೆ ಇದರ ಆವರ್ತನೆ ತಪ್ಪಿದ್ದು ಇದರ ನಂತರದ ಚುನಾವಣೆಯಲ್ಲಿ.


1959ರಲ್ಲಿ ಪ್ರಧಾನಿ ನೆಹರು ಆರ್ಟಿಕಲ್ 356ನ್ನು ಬಳಿಸಿ 1957ರಲ್ಲಿ ಚುನಾಯಿತವಾದ ಕೇರಳದ ಕಮ್ಯುನಿಸ್ಟ್ ಸರ್ಕಾರವನ್ನು ವಜಾ ಮಾಡಿತು. ಇಲ್ಲಿಂದ ದೇಶದೊಳಗೆ ಏಕ ಕಾಲದ ಚುನಾವಣೆಯ ಲಯ ತಪ್ಪಿತು. ಇದರಿಂದಾಚೆಗೆ ತಮ್ಮ ದ್ವೇಷದ ರಾಜಕಾರಣಕ್ಕೆ ಆರ್ಟಿಕಲ್ 356ನ್ನು ದುರ್ಬಳಕೆ ಮಾಡಿಕೊಳ್ಳುವ ಯುಗವನ್ನೇ ಕಾಂಗ್ರೆಸ್ ಪ್ರಾರಂಭಿಸಿತು.

ಈ ದೇಶದಲ್ಲಿ ಇಲ್ಲಿಯ ತನಕ 125 ಭಾರಿ ಆರ್ಟಿಕಲ್ 356 ಬಳಸಿ ರಾಜ್ಯದ ಮೇಲೆ ರಾಷ್ಟ್ರಪತಿ ಆಡಳಿತವನ್ನು ಹೇರಲಾಗಿದೆ. ಇದರಲ್ಲಿ ಅತಿ ಹೆಚ್ಚು ಬಾರಿ ರಾಷ್ಟ್ರಪತಿ ಆಡಳಿತ ಹೇರಿದ್ದು ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ. 1966ರ ನಂತರ ಇಂದಿರಾ ಗಾಂಧಿ ಆಡಳಿತ ಪ್ರಾರಂಭ ಆದ ಮೇಲಂತೂ ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾಯಿತಗೊಂಡ ರಾಜ್ಯಗಳಿಗೆ ಮಾನ್ಯತೆಯೇ ಇಲ್ಲ ಎಂಬ ವಾತಾವರಣ ಸೃಷ್ಟಿಯಾಯಿತು.

**ರಾಷ್ಟ್ರಪತಿ ಆಡಳಿತದ ಹೇರಿಕೆಯ ಇತಿಹಾಸ**

| ಕಾಲ | ಪ್ರಧಾನಿ | ಸಂಖ್ಯೆ |
|---|---|---|
| 1947–1964 | ನೆಹರು | 8 |
| 1964–1966 | ಲಾಲ್ ಬಹದ್ದೂರ್ ಶಾಸ್ತ್ರಿ | 1 |
| 1966–1977 | ಇಂದಿರಾಗಾಂಧಿ | 35 |
| 1977–1979 | ಮುರಾರ್ಜಿ ದೇಸಾಯಿ | 16 |
| 1979–1980 | ಚಂದ್ರಶೇಖರ್ | 4 |
| 1980–1984 | ಇಂದಿರಾ ಗಾಂಧಿ | 15 |
| 1984–1989 | ರಾಜೀವ ಗಾಂಧಿ | 6 |
| 1989–1990 | ವಿ ಪಿ ಸಿಂಗ್ | 2 |
| 1990–1996 | ಪಿ.ವಿ ನರಸಿಂಹ ರಾವ್ | 11 |
| 1996–1997 | ಹೆಚ್.ಡಿ. ದೇವೇ ಗೌಡ | 1 |
| 1999–2004 | ಅಟಲ್ ಬಿಹಾರಿ ವಾಜಪೇಯಿ | 4 |
| 2004–2014 | ಮನಮೋಹನ್ ಸಿಂಗ್ | 12 |

ಈ ದೇಶದಲ್ಲಿ 125 ಬಾರಿ ರಾಷ್ಟ್ರಪತಿ ಆಡಳಿತವನ್ನು ಹೇರಲಾಗಿದೆ. ಅದರಲ್ಲಿ 90 ಬಾರಿ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾದಲ್ಲಿದ್ದಾಲೇ ಚುನಾಯಿತ ಸರಕಾರದ ಮೇಲೆ ರಾಷ್ಟ್ರಪತಿ ಆಡಳಿತವನ್ನು ಹೇರಲಾಗಿದೆ. ಇದರಲ್ಲಿ ಕೆಲವೊಂದು ಸಂದರ್ಭಗಳಲ್ಲಿ ರಾಜಕೀಯ ಬಿಕ್ಕಟ್ಟುಗಳ ಕಾರಣದಿಂದ ಆಗಿರುವುದನ್ನು ಹೊರತು ಪಡಿಸಿದರೆ, ಉಳಿದಂತೆ ಪೂರ್ಣವಾಗಿ ರಾಜಕೀಯ ದ್ವೇಷ ಮತ್ತು ಅಸಹಿಷ್ಣುತೆಯ ಕಾರಣಕ್ಕೆ ಚುನಾಯಿತ ಸರಕಾರಗಳ ವಜಾ ಆಗಿರುವುದು ಇತಿಹಾಸದ ಸತ್ಯದ ಸಂಗತಿ. ಏಕ ಕಾಲದಲ್ಲಿ ನಡೆಯುತ್ತಿದ್ದ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳ ಹಳಿ ತಪ್ಪಿದ್ದು ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಕಾಲಕ್ಕೆ ಅತಿರೇಕಕ್ಕೆ ಹೋದ ಇಂತಹ ಆಡಳಿತದಿಂದಲೇ ಎಂಬುದೂ ಉಲ್ಲೇಖನೀಯ.




ಇನ್ನೊಂದು ಪ್ರಮುಖ ಕಾರಣ 1975ರಲ್ಲಿ. ಅಲಹಬಾದ್ ಹೈಕೋರ್ಟ್ ಅಂದಿನ ಪ್ರಧಾನಿ ಇಂದಿರಾ ಗಾಂಧಿ ಚುನಾವಣೆ ಅಕ್ರಮ ಮಾಡಿದರು ಎನ್ನುವ ಕಾರಣಕ್ಕೆ ಅವರ ಸಂಸತ್ ಸದಸ್ಯತ್ವವನ್ನು ರದ್ದು ಮಾಡುವ ತೀರ್ಪು ಕೊಟ್ಟಿತು. ಇದರಿಂದ ಪಾರಾಗಲು ಆಕೆ ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದರು. ಈ ಸಂದರ್ಭದಲ್ಲಿ ದೇಶದ ಎಲ್ಲಾ ಸಂವಿಧಾನಿಕ ಸಂಸ್ಥೆಗಳ ಅಧಿಕಾರವನ್ನು ಮೊಟಕು ಗೊಳಿಸಲಾಯಿತು. ಇಲ್ಲ ಕಸಿಯಲಾಯಿತು. ಹೀಗೆ ಮಾಡುವಾಗ ದೇಶದಲ್ಲಿ ಇಂದಿರಾ ಗಾಂಧಿಯವರ ರಾಜಕೀಯ ವಿರೋಽಗಳ ರಾಜ್ಯ ಸರಕಾರವನ್ನು ಕಿತ್ತೊಗೆದರು. ಇದು ದೇಶದಲ್ಲಿಯ ಚುನಾವಣಾ ವ್ಯವಸ್ಥೆಯ ಮೇಲೆ ಇನ್ನೊಂದು ಗಂಭೀರ ಪರಿಣಾಮ ಬೀರಿತು. ಇದರ ಜೊತೆಗೆ ದೇಶದೊಳಗೇ ಭಾಷಾವಾರು ಪ್ರಾಂತ್ಯಗಳಿಂದ ಹೊಸ ರಾಜ್ಯಗಳು ಕೇಂದ್ರಾಡಳಿತ ಪ್ರದೇಶಗಳು ಹುಟ್ಟಿಕೊಂಡವು. ಇವುಗಳು ದೇಶದೊಳಗಿನ ಈ ಅನಿಯಮಿತ ಚುನಾವಣಾ ಆವರ್ತನ ವ್ಯವಸ್ಥೆಗೆ ಕೊಡುಗೆಗಳನ್ನು ಕೊಟ್ಟವು. ಭಾಷಾವಾರು ಪ್ರಾಂತ್ಯಗಳಾಚೆಗೆ ದೇಶದಲ್ಲಿ ಜನಸಂಖ್ಯೆ ಮತ್ತು ಪ್ರಾದೇಶಿಕ ರಾಜಕೀಯದ ಕಾರಣಕ್ಕೆ ಹೊಸ ರಾಜ್ಯಗಳ ರಚನೆ ಮಾಡಬೇಕಾದ ಅನಿವಾರ್ಯತೆಯನ್ನು ದೇಶ ಕಂಡಿತು. ಉತ್ತರಾಖಂಡ, ಛತ್ತೀಸಘಡ್, ಜಾರ್ಖಂಡ್, ತೆಲಂಗಾಣದಂತಹಾ ರಾಜ್ಯಗಳ ಸೃಷ್ಟಿ ಆಯಿತು. ಇವುಗಳೂ ಪ್ರತ್ಯೇಕ ಚುನಾವಣಾ ಆವರ್ತನದೊಳಗೆ ಸಿಲುಕಿಕೊಂಡವು. ಈ ಎಲ್ಲಾ ಘಟನೆಗಳು ಕಾಲ ಕ್ರಮದಲ್ಲಿ, 1951 ರಿಂದ ಏಕಕಾಲದಲ್ಲಿ ದೇಶದಲ್ಲಿ ನಡೆಯುತ್ತಿದ್ದ ವಿಧಾನಸಸಭೆ ಮತ್ತು ಲೋಕಸಭೆಗೆ ಚುನಾವಣೆಯ ಆವರ್ತನದ ಹಳಿ ತಪ್ಪಿದವು.

### ಕಾರ್ಯಾಂಗಕ್ಕೆ ಕಷ್ಟವೇನಲ್ಲ

ಪ್ರಸ್ತುತ ಕೇವಲ ಬೆರಳೆಣಿಕೆಯ ರಾಜ್ಯಗಳಿಗೆ ಮಾತ್ರ ಲೋಕಸಭಾ ಚುನಾವಣೆಯ ಜೊತೆಯಲ್ಲಿ ಚುನಾವಣೆ ನಡೆಯುತ್ತವೆ. ಉಳಿದ ರಾಜ್ಯಗಳಿಗೆ ಚುನಾವಣೆ ಪ್ರತ್ಯೇಕವಾಗಿ ನಡೆಯುತ್ತದೆ. ಈ ಕಾರಣದಿಂದಾಗಿಯೇ ದೇಶದಲ್ಲಿ ಪ್ರತೀ ವರ್ಷ ಯಾವುದಾದರೂ ಒಂದು ರಾಜ್ಯದಲ್ಲಿ ಚುನಾವಣೆ ನಡೆಯುತ್ತಿರುತ್ತದೆ. ಈಗ ಭಾರತೀಯ ಚುನಾವಣಾ ವ್ಯವಸ್ಥೆಯಲ್ಲಿ ಇವಿಎಮ್ ಬಂದ ಕಾರಣಕ್ಕೆ ಈ ಪರಿಯ ಚುನಾವಣಾ ಒತ್ತಡಗಳನ್ನು ನಿಭಾಯಿಸುವುದು ಸರಕಾರಿ ವ್ಯವಸ್ಥೆಗಳಿಗೆ ಅಸಾಧ್ಯವೇನಿಲ್ಲ. ಇಂದು ಭಾರತದ ಜಗತ್ತಿನಲ್ಲೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ಭಾರತ 2019ರ ಲೋಕಸಭಾ ಚುನಾವಣೆಯಲ್ಲಿ ಸುಮಾರು 91 ಕೋಟಿ ಮತದಾರರು ಭಾಗವಹಿಸಿದ್ದರು. 2024ರ ಹೊತ್ತಿಗೆ ಅದರ ಪ್ರಮಾಣ ಇನ್ನೂ ಹೆಚ್ಚಾಗಲಿದೆ.

ಒಂದು ಲೋಕಸಭಾ ಚುನಾವಣೆಗೆ ಚುನಾವಣಾ ಆಯೋಗಕ್ಕೆ ತಗಲುವ ವೆಚ್ಚ ಸುಮಾರು 60 ಸಾವಿರ ಕೋಟಿ ರೂಪಾಯಿಗಳು. 1.1ಕೋಟಿ ಸಿಬ್ಬಂಧಿಗಳು 2019ರ ಚುನಾವಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ. ಇದರಲ್ಲಿ 20 ಲಕ್ಷ ಮಂದಿ ಭದ್ರತಾ ಸಿಬ್ಬಂದಿಗಳಿದ್ದರು. ಈ ಪ್ರಮಾಣದಲ್ಲಿ ಚುನಾವಣೆ ನಡೆಸಲು ಸರಕಾರಿ ಯಂತ್ರಗಳು 1 ವರ್ಷ ಇರುವಾಗಲೇ ಪೂರ್ವ ತಯಾರಿ ನಡೆಯುತ್ತದೆ. ಸುಮಾರು ಮೂರು ತಿಂಗಳುಗಳ ಕಾಲ ನೀತಿಸಂಹಿತೆ ಜಾರಿಯಲ್ಲಿರುತ್ತದೆ. ಈ ಸಮಯದಲ್ಲಿ ಸರ್ಕಾರದ ಅಭಿವೃದ್ಧಿ ಕೆಲಸಗಳು ಸಂಪೂರ್ಣ ಸ್ತಬ್ಧವಾಗುತ್ತದೆ. ಸರಕಾರದ ರಾಜಕೀಯ ನೇತೃತ್ವ ದೇಶದ ಆಡಳಿತದ ಬಗ್ಗೆ ಗಮನ ಹರಿಸುವ ಬದಲು ಚುನಾವಣೆಯತ್ತ ತಮ್ಮ ಗಮನ ಕೇಂದ್ರೀಕರಣ ಮಾಡಬೇಕಾಗುತ್ತದೆ. ಇದರ ಜೊತೆ ರಾಜಕೀಯ ಪಕ್ಷದ ಕಾರ್ಯಕರ್ತರು ಬೃಹತ್ ಪ್ರಮಾಣದಲ್ಲಿ ತಮ್ಮ ಎಲ್ಲಾ ದೈನಂದಿನ ಕೆಲಸಗಳನ್ನು ಬಿಟ್ಟು ಚುನಾವಣೆಗೆ ಧುಮುಕುತ್ತಾರೆ.

ರಾಜ್ಯದ ವಿಧಾನಸಭಾ ಚುಮಾವಣೆಗಳು ಮೇಲೆ ಉಲ್ಲೇಖಿಸಿದ ಕಾರಣಗಳಿಂದಾಗಿ ಲೋಕಸಭಾ ಚುನಾವಣೆಯ ಜೊತೆಗೆ ಆಗುತ್ತಿಲ್ಲವಾದುದರಿಂದ ಇವಗಳನ್ನು ಪ್ರತ್ಯೇಕವಾಗಿ ಮಾಡಬೇಕಾಗುತ್ತಿದೆ. ದೇಶದ 28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶಗಳಿಗೆ ಬೇರೆ ಬೇರೆ ಕಾಲದಲ್ಲಿ ಚುನಾವಣೆ ಮಾಡಬೇಕಾದ ಕಾರಣ ನಮ್ಮ ದೇಶದಲ್ಲಿ ಪ್ರತೀ 6 ತಿಂಗಳಿಗೊಮ್ಮೆ ಒಂದಲ್ಲ ಒಂದು ರಾಜ್ಯ ಚುನಾವಣೆಗೆ ಹೋಗುತ್ತದೆ. ರಾಜ್ಯ ಚುನಾವಣೆಯಾಗಲಿ, ಲೋಕ ಸಭಾ ಚುನಾವಣೆಯಾಗಲಿ ತಯಾರಿಯ ಪ್ರಮಾಣದಲ್ಲಿ ವ್ಯತ್ಯಾಸವಿರುವುದಿಲ್ಲ. ಹೀಗೆ ಪ್ರತೀ ವರ್ಷದಲ್ಲಿ 6 ತಿಂಗಳು ದೇಶದ ಒಂದಲ್ಲ ಒಂದು ರಾಜ್ಯದಲ್ಲಿ ನೀತಿ ಸಂಹಿತೆಯನ್ನು ಹೇರುತ್ತಲೇ ಹೋದರೆ 5 ವರ್ಷಗಳಿಗೆ ಆಯ್ಕೆಯಾದ ಕೇಂದ್ರ ಸರಕಾರದ ಅರ್ಧ ಆಯುಷ್ಯ ಈ ಚುನಾವಣೆಗಳನ್ನು ನಿಭಾಯಿಸುವುದರಲ್ಲೇ ಕಳೆದುಹೋಗಿ ಬಿಡುತ್ತದೆ.

ಸ್ವಾತಂತ್ರ್ಯದ ಈ ಅಮೃತ ಕಾಲದಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುತ್ತಿದೆ. 2014ರಲ್ಲಿ ವಿಶ್ವದ 9 ಆರ್ಥಿಕ ಶಕ್ತಿಯಾಗಿದ್ದ ಭಾರತ ಈಗ ಜಗತ್ತಿನ 5 ಪ್ರಮುಖ ಆರ್ಥಿಕ ಶಕ್ತಿಯಲ್ಲಿ

ಒಂದು. ಮುಂದಿನ 5 ವರ್ಷದಲ್ಲಿ ಭಾರತ ಜಗತ್ತಿನ ಮೂರನೇ ಪ್ರಮುಖ ಆರ್ಥಿಕ ಶಕ್ತಿಯಾಗುವ ಗುರಿ ಇಟ್ಟುಕೊಂಡಿದೆ. ಇಂತಹ ಸಂಕೀರ್ಣ ಕಾಲಘಟ್ಟದಲ್ಲಿರುವ ದೇಶದ ಆಡಳಿತ ಯಂತ್ರ ತನ್ನ ಬಹುತೇಕ ಸಮಯ ಮತ್ತು ಸಂಪನ್ಮೂಲಗಳನ್ನು ಚುನಾವಣೆಗೆ ವ್ಯಯಿಸಿದರೆ ದೇಶದಲ್ಲಿ ಆಡಳಿತ ಮತ್ತು ಅಭಿವೃದ್ಧಿಯ ಕೆಲಸಗಳು ಖಂಡಿತವಾಗಿಯೂ ಕುಂಠಿತಗೊಳ್ಳಲಿದೆ. ಜೊತೆಗೆ 1951 ರಿಂದ 1995 ರ ತನಕ ಎರಡು ಬಾರಿ ಈ ದೇಶದಲ್ಲಿ ಆಚರಣೆಯಲ್ಲಿ ಇದ್ದ ಜಂಟಿ ವಿಧಾನ ಸಭೆ ಮತ್ತು ಲೋಕಸಭಾ ಚುನಾವಣಾ ವ್ಯವಸ್ಥೆಯನ್ನು ಮರಳಿ ಜಾರಿಗೆ ತರುವುದು ಜಗತ್ತಿನಲ್ಲೇ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾದರಿಯಾಗಿರುವ ಭಾರತ ಇದನ್ನು ಇನ್ನೊಂದು ಆಯಾಮಕ್ಕೆ ಒಯ್ಯುತ್ತದೆ.

### ವಿರೋಧಿಸುವುದೇ ವಿರೋಧಿಗಳ ಹಳೇ ಚಾಳಿ



ಇದನ್ನ ಈಗ ನಖಶಿಖಾಂತವಾಗಿ ವಿರೋಧ ಮಾಡುತ್ತಿರುವ ವಿರೋಧ ಪಕ್ಷಗಳು ಅದರಲ್ಲೂ ಕಾಂಗ್ರೆಸ್ ಪಕ್ಷಕ್ಕೆ ಒಂದು ವಿಚಾರ ನೆನಪಿನಲ್ಲಿ ಇರಬೇಕು. ಭಾರತದಲ್ಲಿ ಆರಂಭದಲ್ಲಿ ಇದ್ದ ಚುನಾವಣೆಯಗಳ ಏಕತಾನತೆ ಹಳಿ ತಪ್ಪಿದ್ದು ತನ್ನ ಸರಕಾರಗಳ ಅಧಿಕಾರದ ಲೋಲುಪತೆಯಿಂದ ಎಂಬುದು. ಇವತ್ತು ಕೇಂದ್ರದಲ್ಲೂ ಮೋದಿ ಸರಕಾರ ಜಾರಿಗೆ ತಂದ ಯೋಜನೆಗಳೆಲ್ಲವನ್ನೂ ಪೂರ್ವಗ್ರಹ ಪೀಡಿತರಾಗಿ ವಿರೋಧ ಮಾಡುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಶೋಭೆ ತರುವ ವಿಚಾರ ಅಲ್ಲ. ಹಿಂದೆ ಕಾಶ್ಮೀರದಲ್ಲಿ ಆರ್ಟಿಕಲ್ 370 ಅನ್ನು ಹಿಂಪಡೆದರೆ ಕಣಿವೆಯಲ್ಲಿ ರಕ್ತಪಾತ ಆಗುತ್ತದೆ ಎಂದು ದೇಶದ ದಿಕ್ಕು ತಪ್ಪಿಸುತ್ತಿದ್ದ ಕಾಂಗ್ರೆಸ್ ಪ್ರಸ್ತುತ ಪರಿಸ್ಥಿತಿಯನ್ನು ಅರಿಯುವುದು ಒಳ್ಳೆಯದು.

ಇಂದು ಕಾಶ್ಮೀರ ಅತ್ಯಂತ ಶಾಂತವಾಗಿದೆ. ಅಲ್ಲಿಗೆ ವಿದೇಶಗಳಿಂದ ಸಾವಿರಾರು ಕೋಟಿ ರೂಪಾಯಿಗಳ ಬಂಡವಾಳ ಹರಿದು ಬರುತ್ತಿದೆ. ಜಿ20 ಸಮ್ಮೇಳನ ಅತ್ಯಂತ ಯಶಸ್ವಿ ಆಯಿತು, ಮೋದಿ ಸರಕಾರ ಡಿಜಿಟಲ್ ಪೇಮೆಂಟ್ ವ್ಯವಸ್ಥೆ ಜಾರಿಗೆ ತರಲು ಹೊರಟಾಗ ಕಾಂಗ್ರೆಸಿನ ಮಾಜಿ ವಿತ್ತ ಸಚಿವರು ಮೋದಿ ಸರಕಾರದ ಈ ನಿರ್ಧಾರವನ್ನು ಸಂಸತ್ತಿನಲ್ಲಿ ಗೇಲಿ ಮಾಡಿದ್ದರು. ಆದರೆ ಇವತ್ತು ಇದು ವಿಶ್ವದಲ್ಲಿ ಅತ್ಯಂತ ವಿಶ್ವಸನೀಯ ಮತ್ತು ಸರಳವಾಗಿ ಹಣ ಪಾವತಿಸುವ ವ್ಯವಸ್ಥೆಯಾಗಿ ಬೆಳೆದಿದೆ. ಕರೋನ ಕಾಲದಲ್ಲಿ ಭಾರತೀಯ ವಿಜ್ಞಾನಿಗಳು ತಯಾರು ಮಾಡಿದ ಲಸಿಕೆಯನ್ನು ಬಿಜೆಪಿ ಲಸಿಕೆ, ಇದನ್ನು ಹಾಕಿಸಿದರೆ ಆರೋಗ್ಯ ಬಿಗಡಾಯಿಸಲಿದೆ ಎನ್ನಲಾಯಿತು. ನಂತರ ಏನಾಯಿತು ಎಂಬುದು ಜಗತ್ತಿಗೆ ಗೊತ್ತಿದೆ.

ಮೋದಿಯನ್ನು, ಅವರ ಸರಕಾರದ ನೀತಿಗಳನ್ನು ವಿರೋಧಿಸುವ ಭರದಲ್ಲಿ ಕಾಂಗ್ರೆಸ್ ನಾಯಕರಾದ ಶ್ರೀ ಮಣಿಶಂಕರ ಅಯ್ಯರ್, ಶ್ರೀ ಸಲ್ಮಾನ್ ಖುರ್ಷಿದ್, ಶ್ರೀ ರಾಹುಲ್ ಗಾಂಧಿ ಮೊದಲಾದವರು ಹೇಗೆ ವಿದೇಶಗಳಿಗೆ ಹೋಗಿ ಭಾರತ ವಿರೋಧಿ ಹೇಳಿಕೆ ಕೊಟ್ಟಿದ್ದರು ಎಂಬುದನ್ನು ಮತ್ತೆ ನೆನಪಿಸುವ ಆವಶ್ಯಕತೆ ಇಲ್ಲ. ಕಾಂಗ್ರೆಸ್ ಪಕ್ಷ ಸೇರಿದಂತೆ ಎಲ್ಲಾ ವಿರೋಧ ಪಕ್ಷಗಳು ಇವತ್ತು ಇದನ್ನು ತನ್ನ ಎಂದಿನ ರಾಜಕಾರಣದ ಭಾಗವಾಗಿ ನೋಡದೆ, ದೇಶದ ಹಿತದ ದೃಷ್ಟಿಯಿಂದ ನೋಡಿದರೆ ಇದರ ಆವಶ್ಯಕತೆ ಹಿಂದೆಂದಿಗಿಂತಲೂ ಇವತ್ತು ದೇಶಕ್ಕೆ ಹೆಚ್ಚು ಆವಶ್ಯಕ ಎಂಬುದರ ಅರಿವಾಗುತ್ತದೆ. ಜೊತೆಗೆ ತಾನು ಹಿಂದೆ ಮಾಡಿದ ತಪ್ಪುಗಳನ್ನು ಸರಿಪಡಿಸಿಕೊಂಡು ಮುನ್ನೆಡೆಯಲೂ ಇದೊಂದು ಸುವರ್ಣ ಅವಕಾಶ.




ಕೇವಲ ವಿರೋಧ ಮಾಡಬೇಕು ಎಂಬ ಕಾರಣಕ್ಕೆ ಇಂದು ದೇಶ ಒಂದು ಚುನಾವಣೆ ನೀತಿಯನ್ನು ವಿರೋಧಿಸದೆ ದೇಶದ ಹಿತಾಸಕ್ತಿಯ ದೃಷ್ಟಿಯಿಂದ ಕಾಂಗ್ರೆಸ್ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳು ಇದನ್ನು ಬೆಂಬಲಿದರೆ ಸ್ವಾತಂತ್ರ್ಯದ ಅಮೃತಕಾಲದಲ್ಲಿರುವ ಈ ಅಮೃತ ಗಳಿಗೆಯಲ್ಲಿ ನಾವು ನಮ್ಮ ಭವಿಷ್ಯಕ್ಕೆ ಕೊಡುವ ಉತ್ತಮ ಉಡುಗೊರೆಯಾಗಲಿದೆ.

## ಚರ್ಚೆಗೊಂದು ಸಾಲು...

**ಅಲ್ಲಿ 'ಎನ್ನ ಮಣ್ಣ್, ಎನ್ನ ಮಕ್ಕಳ್' ಯಾತ್ರೆ – ಇಲ್ಲಿ 'ನನ್ನ ಮಣ್ಣು, ನನ್ನ ದೇಶ' ಅಭಿಯಾನ...**

# ಜನ ವಿರೋಧಿ, ರೈತ ವಿರೋಧಿ ಧೋರಣೆ

## ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ



**ಬೆಂಗಳೂರು:** ತಮಿಳುನಾಡಿಗೆ ಕಾವೇರಿ ನೀರು ಹರಿಸಿರುವುದೂ ಸೇರಿದಂತೆ ರಾಜ್ಯ ಕಾಂಗ್ರೆಸ್ ಸರಕಾರದ ಜನವಿರೋಧಿ ಧೋರಣೆ ಖಂಡಿಸಿ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಶ್ರೀ ಬಿ.ಎಸ್.ಯಡಿಯೂರಪ್ಪ ನೇತೃತ್ವದಲ್ಲಿ ರಾಜಧಾನಿಯ ಸ್ವಾತಂತ್ರ್ಯ ಉದ್ಯಾನದಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ ನಡೆಸಿತು. ಬಿಜೆಪಿ ಸರಕಾರ ಜಾರಿಗೊಳಿಸಿದ್ದ ಜನಪರ ಯೋಜನೆಗಳನ್ನು ರದ್ದುಗೊಳಿಸಿರುವ ಮತ್ತು ಜನರ ಸಮಸ್ಯೆಗಳಿಗೆ ಸ್ಪಂದಿಸದ ಸರಕಾರದ ವಿರುದ್ಧ ಹೋರಾಟ ಆರಂಭವಾಗಿದ್ದು, ಕಾಂಗ್ರೆಸ್ ಸರ್ಕಾರ ತೊಲಗುವವರೆಗೂ ಮುಂದುವರಿಯಲಿದೆ ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

ಮಾಜಿ ಮುಖ್ಯಮಂತ್ರಿ, ಶ್ರೀ ಬಿ.ಎಸ್. ಯಡಿಯೂರಪ್ಪ, ಶುಕ್ರವಾರ ಸಾಂಕೇತಿಕ ಪ್ರತಿಭಟನೆ ನಡೆಸಿದ್ದು, ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ತೀವ್ರ ಹೋರಾಟ ಮುಂದುವರಿಯಲಿದೆ. ರಾಜ್ಯದಲ್ಲಿ ಬರ ತಾಂಡವವಾಡುತ್ತಿದ್ದು, ಸರ್ಕಾರ ಎಚ್ಚೆತ್ತಿಲ್ಲ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೂ ಬರ ಸಮಸ್ಯೆಯನ್ನು ತಿಳಿಸದೆ ತಮಿಳುನಾಡಿಗೆ ನೀರು ಬಿಡುವಂತಾಗಿದೆ. ಈ ಸರ್ಕಾರಕ್ಕೆ ಕೇವಲ ಹಣ ಮಾಡುವ ಉದ್ದೇಶವಿದೆಯೇ ಹೊರತು ಜನಪರ ಕಾಳಜಿ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಡಿ.ವಿ. ಸದಾನಂದಗೌಡ, ಮಾಜಿ ಸಚಿವರಾದ ಶ್ರೀ ಗೋವಿಂದ ಕಾರಜೋಳ, ಶ್ರೀ ಆರ್.ಅಶೋಕ್, ಡಾ. ಸಿ.ಎನ್. ಅಶ್ವತ್ಥನಾರಾಯಣ, ಶ್ರೀ ಕೆ. ಗೋಪಾಲಯ್ಯ, ಶ್ರೀ ಬೈರತಿ ಬಸವರಾಜು, ಶ್ರೀ ಮುನಿರತ್ನ ಸೇರಿದಂತೆ ಪಕ್ಷದ ಶಾಸಕರು, ಪದಾಧಿಕಾರಿಗಳು, ಪ್ರಮುಖರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಸೆ. 16ರಿಂದ ರಾಜ್ಯ ಪ್ರವಾಸ :** ರಾಜ್ಯ ಸರಕಾರದ ವಿರುದ್ಧ ಜನ ಜಾಗೃತಿ ಮತ್ತು ಮುಂಬರುವ ಲೋಕಸಭೆ ಚುನಾವಣೆಗೆ ಪಕ್ಷ ಸಂಘಟನೆಗೆ ಸೆಪ್ಟೆಂಬರ್ 16 ರಿಂದ ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ರಾಜ್ಯವ್ಯಾಪಿ ಪ್ರವಾಸ ಆರಂಭಿಸುವುದಾಗಿ ತಿಳಿಸಿದ್ದಾರೆ. 'ಅಂದು ಮುಳಬಾಗಲು ತಾಲೂಕು ಕುರುಡುಮಲೆ ವಿನಾಯಕ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಪ್ರವಾಸಕ್ಕೆ ಚಾಲನೆ ನೀಡುತ್ತೇನೆ' ಎಂದು ಅವರು ಘೋಷಿಸಿದರು. ಈ ಸರ್ಕಾರ ಅಧಿಕಾರ ಕಳೆದುಕೊಂಡು ಮನೆಗೆ ಹೋಗುವವರೆಗೂ ಹೋರಾಟ ಮಾಡುತ್ತೇವೆ. ಇದೇ ವೇಳೆ ಲೋಕಸಭೆಗೆ ರಾಜ್ಯದಿಂದ 20 ರಿಂದ 25 ಸದಸ್ಯರ ಕಳುಹಿಸುವ ನಿಟ್ಟಿನಲ್ಲಿ ಸ್ಥಾನ ಗೆಲ್ಲಲು ಪಕ್ಷ ಸಂಘಟನೆ ಮಾಡಲಾಗುವುದು ಎಂದು ತಿಳಿಸಿದರು.



**ಹಾವೇರಿ :** ಈ ಹಿಂದೆ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಹಲವಾರು ರೈತಪರ ಯೋಜನೆಗಳನ್ನು ರದ್ದು ಮಾಡುವ ಮೂಲಕ ಕೃಷಿ ಕ್ಷೇತ್ರವನ್ನು ನಿರ್ಲಕ್ಷಿಸಲಾಗಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದಲ್ಲಿ ಸುಮಾರು 42 ಜನ ರೈತರ ಆತ್ಮಹತ್ಯೆ ಪ್ರಕರಣಗಳ ವರದಿಯಾಗಿರುವುದು ಅತ್ಯಂತ ಆತಂಕಕಾರಿ ಸಂಗತಿಯಾದ್ದು ಸರ್ಕಾರ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದ ನಿಟ್ಟಿನಲ್ಲಿ ತಹಶೀಲ್ದಾರ ಕಛೇರಿ ಎದುರು ಪ್ರತಿಭಟನೆ ನಡೆಸಿ ಮನವಿ ಪತ್ರವನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಶ್ರೀ ಸಿದ್ದರಾಜ ಕಲಕೋಟಿ, ಹಾವೇರಿ ವಿಧಾನಸಭಾ ಕ್ಷೇತ್ರದ ಮುಖಂಡರಾದ ಶ್ರೀ ಗವಿಸಿದ್ದಪ್ಪ ದ್ಯಾಮಣ್ಣವರ, ಹಾವೇರಿ ಗ್ರಾಮೀಣ ಮಂಡಲ ಅಧ್ಯಕ್ಷರಾದ ಶ್ರೀ ಬಸವರಾಜ ಕಳಸೂರ, ನಗರ ಮಂಡಲ ಅಧ್ಯಕ್ಷರಾದ ಶ್ರೀ ಗಿರೀಶ ತುಪ್ಪದ, ಗ್ರಾಮೀಣ ಮಂಡಲದ ರೈತ ಮೋರ್ಚಾ

ಅಧ್ಯಕ್ಷರಾದ ಶ್ರೀ ವಸಂತಗೌಡ ಪಾಟೀಲ, ನಗರ ಮಂಡಲ ರೈತ ಮೋರ್ಚಾ ಅಧ್ಯಕ್ಷರಾದ ಶ್ರೀ ಗುರುಬಸವ ನವಲೆ, ಜಿಲ್ಲಾ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವಿಜಯಕುಮಾರ ಚಿನ್ನಿಕಟ್ಟಿ, ಶ್ರೀ ಹನಮಂತಪ್ಪ ತಳವಾರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀ ರುದ್ರೇಶ ಚಿನ್ನಣ್ಣನವರ, ಜಿಲ್ಲಾ ಕಾರ್ಯದರ್ಶಿ ಡಾ. ಸಂತೋಷ ಆಲದಕಟ್ಟಿ, ಜಿಲ್ಲಾ ಉಪಾಧ್ಯಕ್ಷರಾದ ಶ್ರೀಮತಿ ಸೌಭಾಗ್ಯಮ್ಮ ಹಿರೇಮಠ, ಶ್ರೀ ಕೆ.ಸಿ. ಕೋರಿ, ಜಿಲ್ಲಾ ವಕ್ತಾರಾದ ಶ್ರೀ ಪ್ರಭು ಹಿಟ್ನಳ್ಳಿ, ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿ ಶ್ರೀ ರಮೇಶ ಪಾಲನಕರ, ಜಿಲ್ಲಾ ರೈತ ಮೋರ್ಚಾ ಉಪಾಧ್ಯಕ್ಷರಾದ ಶ್ರೀ ವೀರಣ್ಣ ಅಂಗಡಿ ಮತ್ತು ಪಕ್ಷದ ಮುಖಂಡು, ರೈತರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಭಾಗವಹಿಸಿದ್ದರು.

**ಮೈಸೂರು :** ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಯನ್ನು ಖಂಡಿಸಿ, ತಮಿಳುನಾಡಿಗೆ ನೀರು ಬಿಡುತ್ತಿರುವುದನ್ನು ವಿರೋಧಿಸಿ ಬಿಜೆಪಿ ರೈತ ಮೋರ್ಚಾದ ಮುಖಂಡರು ಹಾಗೂ ಕಾರ್ಯಕರ್ತರು ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ. ಅಂಬೇಡ್ಕರ್ ಪ್ರತಿಮೆ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.



ಶಾಸಕ ಶ್ರೀ ಟಿ.ಎಸ್. ಶ್ರೀವತ್ಸ, ಮೇಯರ್ ಶ್ರೀ ಶಿವಕುಮಾರ್, ಮಾಜಿ ಶಾಸಕ ಶ್ರೀ ಎಲ್. ನಾಗೇಂದ್ರ, ಮುಖಂಡರಾದ ರ್. ರಘು, ಶ್ರೀಮತಿ ಯಶಸ್ವಿ ಸೋಮೇಶಖರ್, ಶ್ರೀ ಮಿರ್ಲೆ ಶ್ರೀನಿವಾಸಗೌಡ, ಶ್ರೀ ಹೇಮಂತ್ ಕುಮಾರ್‌ಗೌಡ, ಡಾ. ಅನಿಲ್ ಥಾಮಸ್, ಶ್ರೀ ಅನೂಜ್ ಸಾರಸ್ವತ್, ಶ್ರೀ ಗಿರಿಧರ್, ಶ್ರೀ ವಾಣೀಶ್, ಶ್ರೀ ಸೋಮಶೇಖರ್, ಶ್ರೀ ಕವೀಶ್‌ಗೌಡ, ಶ್ರೀ ಎಂ. ಶಿವಕುಮಾರ್, ಶ್ರೀ ಮೋಹನ್ ಕುಮಾರ್ ಗೌಡ, ಶ್ರೀಮತಿ ಹೇಮಾ ನಂದೀಶ್, ಶ್ರೀ ಜೋಗಿ ಮಂಜು, ಶ್ರೀ ಜಗದೀಶ್ ಗೆಜ್ಜಗಳ್ಳಿ ಮಹೇಶ್, ಶ್ರೀ ಎಸ್.ಡಿ. ಮಹೇಂದ್ರ ಹಾಗೂ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

**ಯಾದಗಿರಿ:** ರಾಜ್ಯದ ರೈತರಿಗೆ ಮಳೆಯ ಅಭಾವದಿಂದ ಬರಗಾಲದ ಸಮಸ್ಯೆ, ವಿದ್ಯುತ್ ಅಭಾವದಿಂದ ರೈತರ ಪಂಪಸೆಟ್‌ಗಳಿಗೆ ಅನಿಯಮಿತ ಲೋಡ್ ಶೆಡ್ಡಿಂಗ್, ರೈತಪರ ಯೋಜನೆಗಳನ್ನು ರದ್ದುಗೊಳಿಸಿರುವುದು, ರಾಜ್ಯದಲ್ಲಿ ಹೆಚ್ಚುತ್ತಿರುವ ರೈತರ ಆತ್ಮಹತ್ಯೆ ಪ್ರಕರಣಗಳನ್ನು ತಡೆಯುವ ಕುರಿತು ಯಾದಗಿರಿ, ಶಹಾಪುರ, ಸುರಪುರ, ಗುರುಮಿಠಕಲ್, ಮತಕ್ಷೇತ್ರಗಳಲ್ಲಿ ರೈತ ವಿರೋಧಿ ಕಾಂಗ್ರೆಸ್ ಸರ್ಕಾರ ವಿರುದ್ಧ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು ಎಂದು ಜಿಲ್ಲಾಧ್ಯಕ್ಷರಾದ ಡಾ. ಶರಣಭೂಪಾಲರೆಡ್ಡಿ ಅವರು ತಿಳಿಸಿದ್ದಾರೆ.

**ಚಿಕ್ಕಮಗಳೂರು :** ರಾಜ್ಯ ಕಾಂಗ್ರೆಸ್ ಸರ್ಕಾರದ ರೈತ ವಿರೋಧಿ ನೀತಿಯನ್ನು ಖಂಡಿಸಿ ತಹಸೀಲ್ದಾರ್ ಕಚೇರಿಯಿಂದ ಆಜಾದ್ ಪಾರ್ಕ್ ಸರ್ಕಲ್‌ವರೆಗೆ ಮೆರವಣಿಗೆ ನಡೆಸಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಶ್ರೀ ಈಶ್ವರಹಳ್ಳಿ ಮಹೇಶ್ ಅವರು ಮಾತನಾಡಿ ರೈತರು ಹಣಕ್ಕಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂದು ಹಗುರವಾಗಿ ಮಾತನಾಡಿರುವ ಸಚಿವ ಶ್ರೀ ಶಿವಾನಂದ ಪಾಟೀಲ್ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಬಿಜೆಪಿ ಮುಖಂಡರಾದ ಶ್ರೀ ಪುಷ್ಪರಾಜ್, ಶ್ರೀ ದಿನೇಶ್ ಪಾದಮನೆ, ಶ್ರೀ ಸಂತೋಷ್ ಕೋಟ್ಯಾನ್, ಶ್ರೀ ಶಿವಕುಮಾರ್, ಶ್ರೀ ಗೋಪಿ, ಶ್ರೀ ಈಶ, ನಗರಸಭೆ ಸದಸ್ಯರಾದ ಶ್ರೀ ರಾಜು ಹಾಗೂ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

**ಬಳ್ಳಾರಿ :** ರಾಜ್ಯದ ಕಾಂಗ್ರೆಸ್ ಸರ್ಕಾರ ರೈತ ವಿರೋಧಿ ನೀತಿಗಳನ್ನು ಜಾರಿಗೊಳಿಸುತ್ತಿದೆ ಎಂದು ಆರೋಪಿಸಿ ಬಿಜೆಪಿ ರೈತ ಮೋರ್ಚಾ ನಗರದ ಜಿಲ್ಲಾಡಳಿತ ಸಂಕೀರ್ಣದೆದುರು ಪ್ರತಿಭಟನೆ ನಡೆಸಿತು. ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಮಾಜಿ ಶಾಸಕ ಶ್ರೀ ಜಿ. ಸೋಮಶೇಖರ ರೆಡ್ಡಿ, ವಿಧಾನಪರಿಷತ್ ಸದಸ್ಯ ಶ್ರೀ ವೈ.ಎಂ. ಸತೀಶ್, ಬಿಜೆಪಿ ಜಿಲ್ಲಾಧ್ಯಕ್ಷ ಶ್ರೀ ಮುರಹರಗೌಡ ಗೋನಾಳ್ ಹಾಗೂ ರೈತ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಗುರುಲಿಂಗನಗೌಡ ಹಾಗೂ ಕಾರ್ಯಕರ್ತರು ರಾಜ್ಯ ಸರ್ಕಾರದ ರೈತ ವಿರೋಧಿ ಧೋರಣೆಗಳನ್ನು ಖಂಡಿಸಿದರು. ರೈತ ಮೋರ್ಚಾದ ಜಿಲ್ಲಾಧ್ಯಕ್ಷ ಶ್ರೀ ಪ್ರಕಾಶಗೌಡ ಹಾಗೂ ನಗರ ಘಟಕದ ಅಧ್ಯಕ್ಷರಾದ ಶ್ರೀ ಟಿ. ಸತ್ಯನಾರಾಯಣ ಪ್ರತಿಭಟನೆಯ ನೇತೃತ್ವವಹಿಸಿದ್ದರು.

**ತುಮಕೂರು :** ಸಮರ್ಪಕ ವಿದ್ಯುತ್ ಪೂರೈಕೆ ಮಾಡದ, ಸಂಕಷ್ಟದ ನಡುವೆಯೂ ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ಜನವಿರೋಧಿ ನೀತಿಗಳನ್ನು ಖಂಡಿಸಿ ಬಿಜೆಪಿ ಜಿಲ್ಲಾ ರೈತ ಮೋರ್ಚಾ ವತಿಯಿಂದ ಬೆಸ್ಕಾಂ ಕಚೇರಿಯ ಎದುರು ಪ್ರತಿಭಟನೆ



ನಡೆಸಲಾಯಿತು.

ಹಿರಿಯ ಬಿಜೆಪಿ ಮುಖಂಡರಾದ ಶ್ರೀ ಎಂ.ಬಿ. ನಂದೀಶ್, ಶ್ರೀ ನರಸಿಂಹ ಮೂರ್ತಿ, ಶ್ರೀ ಸತ್ಯಮಂಗಲ ಜಗದೀಶ್, ಶ್ರೀ ಬಿ.ಎಸ್. ನಾಗಣ್ಣ, ಶ್ರೀ ಹನುಮಂತರಾಜು, ಶ್ರೀ ವಿನಯ್ ಬಿದರೆ, ಮಹಿಳಾ ಘಟಕದ ಶ್ರೀ ಅಂಬಿಕಾ ಹುಲಿನಾಯ್ಕರ್ ಹಾಗೂ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



# ರಾಷ್ಟ್ರೀಯ ಕಾರ್ಯದರ್ಶಿಗಳ

# ರಾಜ್ಯ ಕಾರ್ಯಾಲಯ ಭೇಟಿ




ರಾಷ್ಟ್ರೀಯ ಕಾರ್ಯದರ್ಶಿಗಳಾದ ಶ್ರೀಮತಿ ವಿಜಯಾ ರಾಹಟ್ಕರ್ ಮತ್ತು ಶ್ರೀ ಅರವಿಂದ ಮೆನನ್ ಅವರುಗಳು ದಿ. 30.08.2023 ರಂದು ರಾಜ್ಯ ಕಾರ್ಯಾಲಯ ಜಗನ್ನಾಥ ಭವನಕ್ಕೆ ಭೇಟಿ ನೀಡಿ ಕಾರ್ಯಾಲಯದ ಕಾರ್ಯವೈಖರಿಯ ಬಗ್ಗೆ ಅವಲೋಕನಾ ಸಭೆ ನಡೆಸಿದರು. ಈ ಸಭೆಯಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಕೇಶವಪ್ರಸಾದ್, ರಾಜ್ಯ ಕಾರ್ಯಾಲಯ ಕಾರ್ಯದರ್ಶಿ ಶ್ರೀ ಲೋಕೇಶ್ ಅಂಬೇಕಲ್ಲು, ರಾಜ್ಯ ಕಾರ್ಯಾಲಯ ತಂಡದ ಶ್ರೀ ಗಿರೀಶ್ ಪಟೇಲ್, ಶ್ರೀ ಅಮರನಾಥ ಪಾಟೀಲ್, ಶ್ರೀ ಹೀರೇಂದ್ರ ಷಹಾ, ಶ್ರೀ ಉದಯ್‌ಕುಮಾರ್ ಶೆಟ್ಟಿ ಅವರು ಉಪಸ್ಥಿತರಿದ್ದರು.

ಈ ಹಿಂದೆ ದಿ. 7.8.2023ರಂದು ನಡೆದಿದ್ದ ಸಭೆಯಲ್ಲಿ ಚರ್ಚಿತವಾಗಿದ್ದ ವಿಷಯಗಳ ಕುರಿತು ಒಮ್ಮೆ ಅವಲೋಕನ ಮಾಡಲಾಯಿತು. ರಾಜ್ಯ ಕಾರ್ಯಾಲಯಕ್ಕೆ ಸಂಬಂಧಿಸಿದಂತೆ ಇರುವ ವಿಭಾಗಗಳು, ಅವುಗಳ ಕಾರ್ಯ, ಕೆಲಸ ಮಾಡುತ್ತಿರುವ ಸಿಬ್ಬಂದಿ, ಕಾರ್ಯಕರ್ತರು ಸೇರಿದಂತೆ ಅನೇಕ ವಿಷಯಗಳ ಬಗ್ಗೆ ಚರ್ಚೆ ನಡೆಯಿತು. ಕೇಂದ್ರ ಕಾರ್ಯಾಲಯದಿಂದ ರಾಜ್ಯ ಕಾರ್ಯಾಲಯಗಳ ಸುಗಮ ಮತ್ತು ವ್ಯವಸ್ಥಿತ ನಿರ್ವಹಣೆಗೆ ರೂಪಿಸಿರುವ ಅಂಶಗಳನ್ನು ರಾಜ್ಯ ಕಾರ್ಯಾಲಯ ತಂಡದ ಗಮನಕ್ಕೆ ರಾಷ್ಟ್ರೀಯ ಪ್ರಮುಖರು ಪ್ರಸ್ತಾಪ ಮಾಡಿದರು.

ರಾಜ್ಯ ಕಾರ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು, ಲೆಕ್ಕಪತ್ರ ವಿಭಾಗ, ಗಣಕಯಂತ್ರ ವಿಭಾಗ, ಸ್ವಾಗತ ವಿಭಾಗ, ಪಾಕಶಾಲ ವಿಭಾಗ, ಭದ್ರತಾ ವಿಭಾಗ ಹಾಗೂ ಸ್ವಚ್ಛತಾ ವಿಭಾಗಗಳೊಡನೆ ಪ್ರತ್ಯೇಕ ಸಭೆ ನಡೆಯಿತು. ಕಾರ್ಯಾಲಯದ ಪ್ರಮುಖ ವಿಭಾಗಗಳಾದ ಗಣಕಯಂತ್ರ, ಕಾಲ್ ಸೆಂಟರ್ ವಿಭಾಗಗಳಿಗೆ ಶ್ರೀಮತಿ ವಿಜಯಾ ರಾಹಟ್ಕರ್ ಹಾಗೂ ಶ್ರೀ ಅರವಿಂದ್ ಮೆನನ್ ಅವರು ಭೇಟಿ ನೀಡಿ ಆ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳೊಂದಿಗೆ ವಿವರವಾಗಿ ಚರ್ಚಿಸಿದರು.

ಜಗನ್ನಾಥ ಭವನದ ನೆಲ ಮಹಡಿ ಸೇರಿದಂತೆ 5 ಮಹಡಿಗಳನ್ನು ಅತ್ಯಂತ ವಿವರವಾಗಿ, ಕೂಲಂಕುಶವಾಗಿ ಇಬ್ಬರೂ ರಾಷ್ಟ್ರೀಯ ಕಾರ್ಯದರ್ಶಿಗಳು ಪರಿಶೀಲನೆಯನ್ನು ನಡೆಸಿದರು. ಸಿಬ್ಬಂದಿ ವಸತಿ, ಡಾರ್ಮೆಟ್ರಿ, ಮಹಿಳಾ ವಸತಿ, ಪದಾಧಿಕಾರಿಗಳ ಕೊಠಡಿ, ವಿವಿಧ ಮೋರ್ಚಾಗಳ ಕ್ಯಾಬಿನ್, ಕಾರ್ಯಾಲಯ ಕಾರ್ಯದರ್ಶಿಗಳ ಕೊಠಡಿ, ಲೆಕ್ಕಪತ್ರ ವಿಭಾಗ, ಪಾಕ ಶಾಲೆ, ಭೋಜನ ಕೊಠಡಿಗಳು, ಗ್ರೀನ್ ರೂಂ, ಗ್ರಂಥಾಲಯ, ಬೋರ್ಡ್ ರೂಂ, 2 ಸಭಾಂಗಣಗಳು, ಮಾಧ್ಯಮ ಕೊಠಡಿ ಸೇರಿದಂತೆ ವಿವಿಧ ವಿಭಾಗಗಳಿಗೆ ಭೇಟಿ ನೀಡಿ ಅಲ್ಲಿನವರೊಂದಿಗೆ ಮಾತುಕತೆ ನಡೆಸಿದರು. ಎಲ್ಲರೊಡನೆ ಚರ್ಚಿಸುವಾಗ ಅವರ ಕೆಲಸ, ಅದರಲ್ಲಿನ ವಿಶೇಷತೆಗಳು, ಹೊಸ ಪ್ರಯೋಗಗಳು ಇತ್ಯಾದಿ ಸಂಗತಿಗಳ ಬಗ್ಗೆ ವಿವರ ಪಡೆದರು.

ನಂತರದ ಸಭೆಯಲ್ಲಿ ಎಲ್ಲ ಜಿಲ್ಲೆಗಳಿಂದ ಕಾರ್ಯಾಲಯ ತಂಡಗಳನ್ನು ತಕ್ಷಣವೇ ರಚಿಸಬೇಕೆಂದು ರಾಷ್ಟ್ರೀಯ ಪ್ರಮುಖರು ಸೂಚಿಸಿದರು ಹಾಗೆಯೇ ರಾಜ್ಯ ತಂಡದವರೊಡನೆ ರಾಜ್ಯ ಪದಾಧಿಕಾರಿಗಳು ಮತ್ತು ರಾಜ್ಯದ ವಿವಿಧ ಜವಾಬ್ದಾರಿ ಹೊಂದಿರುವ ಇಬ್ಬರು ಪ್ರತಿ ಜಿಲ್ಲಾ ಕಾರ್ಯಾಲಯಗಳ ವ್ಯವಸ್ಥಾ ಅವಲೋಕನವನ್ನು ಸೆಪ್ಟೆಂಬರ್ 15ರೊಳಗೆ ಮಾಡಬೇಕೆಂದು ನಿರ್ಧರಿಸಲಾಯಿತು. ಈ ಅವಲೋಕನ ನಂತರ ಮತ್ತೆ ರಾಷ್ಟ್ರೀಯ ಪ್ರಮುಖರು ಬೆಂಗಳೂರಿಗೆ ಆಗಮಿಸಿ ಮತ್ತೊಮ್ಮೆ ಸಭೆಯನ್ನು ನಡೆಸಿದರು. ಜಿಲ್ಲಾ ಕಾರ್ಯಾಲಯಗಳ ಅವಲೋಕನ ಸಂದರ್ಭದಲ್ಲಿ ಕಾರ್ಯಾಲಯ ತಂಡ, ಸಿಬ್ಬಂದಿ, ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣ ತಂಡ, ಕಾಲ್ ಸೆಂಟರ್, ಪ್ರತಿನಿತ್ಯ ಕಾರ್ಯಾಲಯಕ್ಕೆ ಬಂದು ಹೋಗುವವರ ಸಭೆ ನಡೆಸಿ ಅವರ ಅಭಿಪ್ರಾಯವನ್ನು ಸಂಗ್ರಹಿಸಬೇಕೆಂದು ನಿರ್ಧರಿಸಲಾಯಿತು.




# ಶ್ರಾವಣಕ್ಕೆ ಸಂಭ್ರಮಕ್ಕೆ ಕಳೆ ತಂದ ಚಂದ್ರಯಾನ

**ಶ್ರಾ**ವಣ ಮಹಾಶಿವನ, ಮಾಸ, ಸಂಭ್ರಮಾಚರಣೆ ಮತ್ತು ಸಂತಸ, ಸಡಗರಗಳ ತಿಂಗಳಿದು, ಚಂದ್ರಯಾನದ ಯಶಸ್ಸು ಈ ಸಂಭ್ರಮದ ವಾತಾವರಣಕ್ಕೆ ಮತ್ತಷ್ಟು ಕಳೆ ತಂದಿದೆ. ಚಂದ್ರಯಾನ ಚಂದ್ರನನ್ನು ತಲುಪಿ ಮೂರು ದಿನಗಳಿಗಿಂತ ಹೆಚ್ಚು ಸಮಯ ಕಳೆದಿದೆ. ಈ ಯಶಸ್ಸು ತುಂಬಾ ದೊಡ್ಡದಾಗಿದೆ, ಅದರ ಬಗ್ಗೆ ಎಷ್ಟು ಚರ್ಚೆ ಮಾಡಿದರೂ ಕಡಿಮೆಯೇ. ಮಿಷನ್ ಚಂದ್ರಯಾನವು ನವ ಭಾರತದ ಚೈತನ್ಯದ ಸಂಕೇತವಾಗಿದೆ. ಅದು ಎಲ್ಲ ಸಂದರ್ಭಗಳಲ್ಲೂ ಯಶಸ್ಸು ಸಾಧಿಸಲು ಸಿದ್ದವಾಗಿದ್ದು, ಯಾವುದೇ ಪರಿಸ್ಥಿತಿಯಲ್ಲಿ ಹೇಗೆ ಗೆಲ್ಲಬೇಕೆಂಬುದನ್ನು ತಿಳಿದಿದೆ ಎಂಬುದಾಗಿ ಪ್ರಧಾನಿ ಶ್ರೀ ನರೇಂದ್ರ ಮೋದಿ ತಮ್ಮ ಮನ್ ಕಿ ಬಾತ್ 104ನೇ ಅವೃತ್ತಿಯಲ್ಲಿ ದೇಶವಾಸಿಗಳೊಂದಿಗೆ ತಮ್ಮ ಅನಿಸಿಕೆ, ಆಲೋಚನೆಗಳನ್ನು ಹಂಚಿಕೊಂಡಿದ್ದಾರೆ.

ಚಂದ್ರಯಾನ 3 ಯಶಸ್ಸಿನಿಂದಾಗಿ ಭಾರತೀಯರಲ್ಲಿ ಹೊಸ ಸ್ಫೂರ್ತಿ, ಉತ್ಸಾಹ ತುಂಬಿದೆ. ಭವಿಷ್ಯದ ದಿನಗಳಲ್ಲೂ ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ಇನ್ನಷ್ಟು ಸಾಧನೆಯನ್ನು ಮಾಡಲಿದೆ. ಈ ಸಾಧನೆ ಮತ್ತು ಯಶಸ್ಸು ಎಲ್ಲರ ಪರಿಶ್ರಮದಿಂದ ಲಭಿಸಿರುವಂಥದ್ದು ಎಂದು ಶ್ಲಾಘಿಸಿದ್ದಾರೆ.

**ಕ್ರೀಡಾಪಟುಗಳಿಗೆ ಅಭಿನಂದನೆ :** ಈ ಬಾರಿ ಚೀನಾದಲ್ಲಿ ನಡೆದ ವರ್ಲ್ಡ್ ಯೂನಿವರ್ಸಿಟಿ ಗೇಮ್ಸ್‌ನಲ್ಲಿ ಭಾಗಿಯಾಗಿ ಅತಿ ಹೆಚ್ಚು ಪದಕ ಗೆದ್ದು ಸಾಧನೆಗೈದ ಕ್ರೀಡಾಪಟುಗಳಿಗೆ ಪ್ರಧಾನಿ ಶ್ರೀ ಮೋದಿ ಅವರು ಅಭಿನಂದನೆ ಸಲ್ಲಿಸಿದರು. ವರ್ಲ್ಡ್ ಯೂನಿವರ್ಸಿಟಿ ಗೇಮ್ಸ್‌ನಲ್ಲಿ ಭಾಗಿಯಾಗಿದ್ದ ಉತ್ತರ ಪ್ರದೇಶದ ಕ್ರೀಡಾಪಟು ಅರ್ಚರ್ ಪ್ರಗತಿ ಅವರೊಂದಿಗೆ ಪ್ರಧಾನಿ ಶ್ರೀ ಮೋದಿ ಅವರು ಸಂವಾದ ನಡೆಸಿದರು, ಈಗೆ ಮೇ ತಿಂಗಳಿನಲ್ಲಿ ಬ್ರೈನ್ ಹ್ಯಾಮರೇಜ್‌ಗೆ ತುತ್ತಾದರೂ ಅದನ್ನು ಮೀರಿ ಈ ಬಾರಿ ಪದಕ ಗೆದ್ದಿದ್ದಾರೆ ಎಂದು ಅಭಿನಂದನೆ ವ್ಯಕ್ತಪಡಿಸಿದರು.

**ಯಾರೀ ಧನ್‌ಪಾಲ್ :** ಪ್ರಧಾನಿ ಶ್ರೀ ಮೋದಿ ಅವರು ತಮ್ಮ ಮನ್ ಕೀ ಬಾತ್‌ನಲ್ಲಿ ಬೆಂಗಳೂರಿನ ಧನ್‌ಪಾಲ್ ಕುರಿತು ಪ್ರಸ್ತಾಪಿಸಿದರು. ಬೆಂಗಳೂರಿನ ಧನ್‌ಪಾಲ್ ಅವರು ಟ್ರಾನ್ಸ್‌ಪೋರ್ಟ್ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು.ಅವರಿಗೆ ಬೆಂಗಳೂರು ದರ್ಶಿನಿಯಲ್ಲಿ ಬೇರೆ ರಾಜ್ಯ ಹಾಗೂ ಬೇರೆ ದೇಶಗಳ ಜನರಿಗೆ ಬೆಂಗಳೂರು ದರ್ಶನ ಮಾಡುವ ಅವಕಾಶ ಲಭಿಸಿತ್ತು. ಬೆಂಗಳೂರಿನಲ್ಲಿ ಹಲವು ಶಿಲಾ ಶಾಸನಗಳನ್ನು ಹೊರತೆಗೆದ ಹೆಗ್ಗಳಿಕೆಗೆ ಪಾತ್ರರಾಗಿರುವ ನಿವೃತ್ತ ಬಿಎಂಟಿಸಿಯ ಬೆಂಗಳೂರು ದರ್ಶಿನಿಯ ಚಾಲಕ ಮತ್ತು ಪ್ರವಾಸಿ ಮಾರ್ಗದರ್ಶಿ ಕೆ. ಧನ್‌ಪಾಲ್ ಅವರ ಸಾಧನೆ ಪ್ರೇರಣಾದಾಯಿ. ಬೆಂಗಳೂರು ಮಹಾನಗರ ಸಾರಿಗೆ ನಿಗಮದ ಬಸ್ ಚಾಲಕ ಧನಪಾಲ್ ಅವರನ್ನು 2006ರಲ್ಲಿ ಅದರ ದೃಶ್ಯ ವೀಕ್ಷಣೆ (ಈಗ ಬೆಂಗಳೂರು ದರ್ಶಿನಿಯ ವಿಭಾಗಕ್ಕೆ ವರ್ಗಾಯಿಸಲಾಗಿತ್ತು. ಆದರೆ ಅವರು ಬಿಎಂಟಿಸಿಯಲ್ಲಿ ದೈನಂದಿನ ಪಾಳಿಯ ಕೆಲಸದ ನಂತರ ಬೆಂಗಳೂರಿನ ಪರಂಪರೆ ಅನ್ವೇಷಿಸಲು ಸಮಯ ವಿನಿಯೋಗಿಸಲಾರಂಭಿಸಿದರು. ತಮ್ಮ ಸ್ನೇಹಿತ ಮತ್ತು ಮಾರ್ಗದರ್ಶಕ ಪ್ರೊ. ಕೆ.ಆರ್. ನರಸಿಂಹನ್ ಅವರ ಸಾಯದಿಂದ ವಿವಿಧ ಕಾಲಕ್ಕೆ ಸೇರಿದ 100 ಕ್ಕೂ ಹೆಚ್ಚು ಶಿಲಾಶಾಸನ ಪತ್ತೆ ಹಚ್ಚಿದ್ದಾರೆ. ಇನ್ನಷ್ಟು ತಿಳಿಯುವ ನಿಟ್ಟಿನಲ್ಲಿ ಧನಪಾಲ್ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಸಂಜೆ ಕಾಲೇಜು ಸೇರಿಕೊಂಡು 2020 ರಲ್ಲಿ ಎಪಿಗ್ರಫಿಯಲ್ಲಿ ಡಿಪ್ಲೊಮಾ ಪೂರೈಸಿದರು. ಇದೀಗ ಬಿಎಂಟಿಸಿಯಿಂದ ನಿವೃತ್ತರಾಗಿರುವ ಅವರು ಈಗ ತಮ್ಮ ಸಂಪೂರ್ಣ ಸಮಯವನ್ನು ಬೆಂಗಳೂರಿನ ಅನ್ವೇಷಣೆಯಲ್ಲಿ ಕಳೆಯುತ್ತಿದ್ದಾರೆ.


**ದಿಲ್ಲಿಯ ಜಿ20 ಸಭೆ ಬಹಳ ಮುಖ್ಯ:** ಸೆಪ್ಟೆಂಬರ್ 8–10ರ ನಡುವೆ ನಡೆಯುವ ಜಿ20 ಸಭೆ ಬಹಳ ಪ್ರಾಮುಖ್ಯತೆ ಪಡೆದುಕೊಂಡಿದೆ. ದಿಲ್ಲಿಯಲ್ಲಿ ನಡೆಯುವ ಈ ಸಭೆಯಲ್ಲಿ 40ಕ್ಕೂ ಹೆಚ್ಚಿರ ವಿವಿಧ ದೇಶಗಳು ಭಾಗಿಯಾಗಲಿದೆ. ವಾರಾಣಸಿಯಲ್ಲಿ ನಡೆದ ಜಿ20 ಶೃಂಗಸಭೆಯಲ್ಲಿ 800 ಶಾಲೆಗಳ ಮಕ್ಕಳು ಭಾಗಿಯಾಗಿದ್ದರು. ಹಾಗೆಯೇ ಸೂರತ್ ನಲ್ಲಿ ನಡೆದ ಸಭೆಯಲ್ಲಿ 15 ರಾಜ್ಯಗಳ 15 ಲಕ್ಷ ಮಹಿಳೆಯರು ಭಾಗಿಯಾಗಿದ್ದರು. 41 ರಾಷ್ಟ್ರಗಳ ಅಧ್ಯಕ್ಷರು ಜಿ20 ಶೃಂಗಸಭೆಯಲ್ಲಿ ಭಾಗಿಯಾಗುತ್ತಾರೆ.

**10 ಕೋಟಿ ಸೆಲ್ಫಿ :** ‘ನನ್ನ ಮಣ್ಣು ನನ್ನ ದೇಶ’ ಸ್ವಾತಂತ್ರೋತ್ಸವ ನಿಮಿತ್ತ ‘ಹರ್ ಘರ್ ತಿರಂಗಾ’ ಅಭಿಯಾನಕ್ಕೆ ಕರೆನೀಡಲಾಗಿತ್ತು. ಇದರಂತೆ, ಈ ಬಾರಿ ಅತಿ ಹೆಚ್ಚು ಧ್ವಜಗಳನ್ನು ಖರೀದಿಸಲಾಗಿತ್ತು. ರಾಷ್ಟ್ರಧ್ವಜ ದೊಂದಿಗೆ 10 ಕೋಟಿ ಸೆಲ್ಫಿಗಳನ್ನು ದಾಖಲಿಸಲಾಗಿದೆ. ‘ನನ್ನ ಮಣ್ಣು ನನ್ನ ದೇಶ ’ ಅಭಿಯಾನದಲ್ಲಿ ದೇಶದ ವಿವಿಧ ಪ್ರದೇಶಗಳಿಂದ ಮಣ್ಣು ಸಂಗ್ರಹಿಸಲಾಗಿದೆ. ಈ ಮಣ್ಣಿನಿಂದ ಅದ್ಭುತವಾದ ವಾಟಿಕಾ ನಿರ್ಮಾಣ ಮಾಡಲಾಗುತ್ತದೆ ಎಂದು ತಿಳಿಸಿದರು.

## ಚಂದ್ರಯಾನ ಯಶಸ್ಸಿನಲ್ಲಿ ನಾರಿ ಶಕ್ತಿ



ಚಂದ್ರಯಾನ 3ರ ಯಶಸ್ಸು, ನಾರಿ ಶಕ್ತಿಗೆ ಜೀವಂತ ಉದಾಹರಣೆ ಎಂಬುದಾಗಿ ಸಂತಸ ಹಂಚಿಕೊಂಡ ಪ್ರಧಾನಿಯವರು, ಚಂದ್ರಯಾನ 3 ಯಶಸ್ಸಿನ ಹಿಂದೆ ಇಸ್ರೋದ ಮಹಿಳೆಯರ ಕಾರ್ಯ ಮಹತ್ತರವಾದುದು. ಇಸ್ರೋನ ಈ ಸಾಧಕಿಯರು ಮತ್ತು ವಿಜ್ಞಾನಿಗಳು ಅಸಾಧ್ಯವಾದದ್ದನ್ನು ಸಾಧ್ಯವೆಂದು ತೋರಿಸಿದ್ದಾರೆ. ಚಂದ್ರಯಾನ 3ರಲ್ಲಿ ಹಲವು ಮಹಿಳಾ ವಿಜ್ಞಾನಿಗಳು ಹಾಗೂ ಇಂಜಿನಿಯರ್‌ಗಳು ಮಾಡಿರುವ ಕೆಲಸ ಅನನ್ಯವಾದುದು ಎಂದು ಉಲ್ಲೇಖಿಸಿದರು.



ರಾಜ್ಯ ಬಿಜೆಪಿ ವತಿಯಿಂದ ಆಯೋಜಿಸಿದ್ದ ಪತ್ರಿಕಾ ಗೋಷ್ಠಿಯಲ್ಲಿ 'ಕಾಂಗ್ರೆಸ್ ಸರ್ಕಾರದ ವೈಫಲ್ಯದ 100 ದಿನಗಳ ಸಾಧನೆ ಪುಸ್ತಕ ಬಿಡುಗಡೆ

## 'ನನ್ನ ಮಣ್ಣು - ನನ್ನ ದೇಶ' ಅಭಿಯಾನ



ಬೀದರ್



ಚಿಕ್ಕೋಡಿ



ಬೆಳಗಾವಿ



ಬಾಗಲಕೋಟೆ



ಯಾದಗಿರಿ



ಹುಬ್ಬಳ್ಳಿ - ಧಾರವಾಡ




# ಭರವಸೆ..... ರಾಜ್ಯ ರಾಜಕಾರಣ

**ಬಿ**ಜೆಪಿಯ ಪಾಲಿಗೆ ಕೊಂಚ ದಿಕ್ಕು ತಪ್ಪಿ, ಪರಿಸ್ಥಿತಿಗಳು ವಿಷಮವಾಗಿ, ಚುನಾವಣೆ ತಲೆಕೆಳಗಾಗಿ, ಕಾರ್ಮುಗಿಲ ಛಾಯೆಯೊಳಗೆ ಕಾರ್ಯಕರ್ತರು ಬೆಳಕಿನ ಆಶಾಕಿರಣ ಹುಡುಕುವ ಕಾಲಘಟ್ಟ ನಡೆಯುತ್ತಿದೆ. ಯಾರು ಹಿತವರು, ಯಾರು ಸಂಘಟಕರು, ಯಾರು ಕರುನಾಡ ಬಿಜೆಪಿಯನ್ನು ಮೇಲೆತ್ತಿ ನಡೆಸುವವರು, ಯಾರು ಮುಂದಿನ ಸೇನಾಪತಿ, ಯಾರು ವಿರೋಧ ಪಕ್ಷದ ನಾಯಕ ಎಂದೆಲ್ಲ ಉದ್ಭವಿಸುತ್ತಿರುವ ಸಹಜ ಪ್ರಶ್ನೆಗಳಿಗೆ ಸಹಜ ಉತ್ತರಗಳೂ ಕಾಣದ ಪರಿಸ್ಥಿತಿಗೆ ರಾಜ್ಯ ಸಂಘಟನೆ, ಸ್ಥಳೀಯ ನಾಯಕರು ಬಂದು ಬಿಟ್ಟರೇನೋ ಎಂಬೆಲ್ಲ ನೀರಸಭಾವ.

ರಾಜ್ಯ ಬಿಜೆಪಿಯ ಇಂದಿನ ಪರಿಸ್ಥಿತಿಯನ್ನು ಅವಲೋಕಿಸಿ, ಈ ಪರಿಸ್ಥಿತಿಗೆ ಕಾರಣರಾಗಿ ಕೈ ಕೈ ಮಿಲಾಯಿಸಿ, ರಾಜ್ಯದಲ್ಲಿ ಬಿಜೆಪಿಯನ್ನು ಮಖಾಡೆ ಮಲಗಿಸಿ, ನಂತರ ತಾವೇ ಹೊಡೆದ ಚಪ್ಪಾಳೆಯ ಆ ಎರಡು ಹಸ್ತಗಳು ಯಾವವು? ಹೊರಗಿನವೇ, ಇಲ್ಲ ನಮ್ಮವೇ ಎಂಬ ಉತ್ತರ ಹುಡುಕಲು ಹೆಣಗುತ್ತಿರುವ ಪುಟ್ಟ ಪುಟ್ಟ ಕಾರ್ಯಕರ್ತರು ಈಗಲೂ ಆಗಿರುವ ಅವಘಡದ ಅರ್ಥವನ್ನೇ ಅರಿಯಲಾಗದೆ ಪಿಳಿ ಪಿಳಿ ಕಣ್ಣು ಬಿಡುತ್ತಿದ್ದಾರೆ.

ಇಲ್ಲಿ ಯಾರು ಹಟ ಸಾಧಿಸುವ ಪ್ರಯತ್ನ ಪಟ್ಟರೋ, ಯಾರು ಸಿದ್ದಾಂತಗಳ ಜಾರಿಗಾಗಿ ಹಟವಾದಿಗಳನ್ನು ವಿರೋಧಿಸಿದರೋ, ಆದರೆ ಈ ಮಂಥನದಲ್ಲಿ ಹಾಲಾಹಲ ಆಚೆ ಬಂದದ್ದು ಮಾತ್ರ ದಿಟ. ಅವರೆಲ್ಲರೂ ಅವರವರ ಜಾಗದಲ್ಲಿ ಸರಿಯಾಗೇ ಇರುವವರು, ಅಸ್ತಿತ್ವಕ್ಕಾಗಿ ಸಿದ್ದಾಂತಗಳಿಗಾಗಿ ಹೊರಾಡಿದವರೆಲ್ಲರೂ ನಮ್ಮವರೇ ಆದರೆ, ಆ ಹೋರಾಟದ ಮಂಥನದ ಅಮೃತ ಆಚೆ ಬಂದಾಗ ಮಾತ್ರ ಆ ಮಂಥನದ ಸಾರ್ಥಕತೆಯ ಅರಿವಾಗುವುದು, ಅದು ಕೊಂಚ ವಿಳಂಬವಾಗಿದೆಯೇ ಹೊರತು ಕೈ ಜಾರಿ ಹೋಗಿಲ್ಲ. ಹಾಗಂತ ಮಂಥನದ ಅನಿವಾರ್ಯತೆಯನ್ನ ಅದರಿಂದ ಉತ್ಪತ್ತಿಯಾದ ಹಾಲಾಹಲದ ಪರಿಣಾಮವನ್ನ ಇಲ್ಲಿ ಕಡೆಗಣಿಸಲಾಗೋಲ್ಲ. ಅವೆಲ್ಲ ಈ ಪ್ರಕ್ರಿಯೆಯ ಭಾಗಗಳೇ, ಆ ಹಾಲಾಹಲವ ಗಂಟಲಲ್ಲಿಟ್ಟುಕೊಂಡು ನಮ್ಮೆಲ್ಲ ಕಾರ್ಯಕರ್ತರು ವಿಷಕಂಠನಾಗುವರೇ ಹೊರತು ನುಂಗಿ ಆತ್ಮಾರ್ಪಣೆ ಮಾಡುವವರೂ ಅಲ್ಲ, ಆಚೆ ಹರಿಬಿಟ್ಟು ನಂಬಿದ ನಾಡಿನ ಪ್ರಜೆಗಳ ಭವಿಷ್ಯಕ್ಕೆ ಕುತ್ತಾಗಿಸುವವರೂ ಅಲ್ಲ. ಈ ನಾಡಿನ, ಈ ದೇಶದ ಉನ್ನತಿಗಾಗಿ, ರಾಷ್ಟ್ರದ ಹಿತಕ್ಕಾಗಿ ಬಿಜೆಪಿ ಇಟ್ಟ ಹೆಜ್ಜೆ, ಪಟ್ಟ ಶ್ರಮ ಇದಾಗಲೇ ಜನ ಮಾನಸದಲ್ಲಿ ಅಚ್ಚಳಿಯದೇ ಮೂಡಿದೆ.

ಒಂದು ಸೋಲು, ಒಂದು ಹಿನ್ನಡೆ ನಮ್ಮನ್ನು ಕೊಂಚ ಕಾಲಕ್ಕೆ ಮಂಕಾಗಿಸಿರಬಹುದು ಆದರೆ ಅದು ಶಾಶ್ವತವಲ್ಲ. ನಮ್ಮ ಸಂಘಟನೆ, ನಮ್ಮ ಸಿದ್ಧಾಂತ, ನಮ್ಮ ನಾಯಕತ್ವವನ್ನು ನಂಬಿರುವ ಜನ ಈಗಲೂ ಹತ್ತು ಹಲವು ಅಪೇಕ್ಷೆಗಳನ್ನಿಟ್ಟುಕೊಂಡು ನಮ್ಮ ಸಂಘಟನೆಯ ಕಡೆ ಆಶಾಭಾವನೆಯಿಂದ ನೋಡುತ್ತಿದ್ದಾರೆ. ಸ್ವಾಭಿಮಾನ, ರಾಷ್ಟ್ರ ಪ್ರೇಮ, ದೇಶ ಭಕ್ತಿ, ತ್ಯಾಗ ಸಮರ್ಪಣೆಯ ಗುಣಗಳನ್ನಿಟ್ಟುಕೊಂಡು ಭಾರತ ಮಾತೆಯ ಏಳಿಗೆಗಾಗಿ ಜೀವನವನ್ನೇ ಮುಡಿಪಾಗಿಟ್ಟ ನೂರಾರು ನಾಯಕರ, ಸಾವಿರಾರು ಕಾರ್ಯಕರ್ತರ ಬಲಿದಾನವನ್ನು ಸ್ಮರಿಸಿ, ಹೊಸ ಬಿಜೆಪಿ ಪೀಳಿಗೆಯನ್ನು ನಂಬಿ ಇಂದಿಗೂ ಸಾಮಾನ್ಯ ಜನ ತಮ್ಮ ಮನೆ, ಮನಗಳಲ್ಲಿ ಬಿಜೆಪಿಯ ಬಾವುಟವನ್ನು ಭದ್ರವಾಗಿ ನೆಟ್ಟಿದ್ದಾರೆ. ಆ ಪುಟ್ಟ ಸಸಿ ಭಾವುಟವನ್ನು ಹೆಮ್ಮರವಾಗಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಪುಟಿದೇಳುವೆವು.....ಋತುಚಕ್ರ ತಿರುಗುವುದು

**ಕಾಲನೆದೆ ಮರುಗುವುದುಮೃತನ ಮಣ್ಣಿಂದ ಹೊಸಹುಲ್ಲು ಬೆಳೆಯುವುದು**

**ಕ್ಷಿತಿ ಗರ್ಭ ಧರಿಸುವಳು ಮತ್ತುದಿಸುವುದು ಜೀವ ಸತತ ಕೃಷಿಯೋ ಪ್ರಕೃತಿ ಮಂಕುತಿಮ್ಮ**

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 36

RNI No.:KARKAN/2023/84034 REGISTERED NEWSPAPER UNDER No. KKRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 025 DATE OF POSTING : 10th / 15th / 20th OF EVERY MONTH

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**